
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಏಪ್ರಿಲ್ 11, 2012 ಪುಟ 20 ರೂ. 14/-

ನನ್ನ ಜನಮನ ಜನಪದ

ಅಶೋಕ್ ಚಂದ್ರಣ್ಣ ಗೌಡ



ಏಪ್ರಿಲ್‌ನಲ್ಲಿ ಮತ್ತೆ ಬಂಡಾಯ!



ಅರಸಯ್ಯನ ಪ್ರಾಣಕ್ಕೆ ಜೈಲಲ್ಲೂ ಆಪತ್ತು




ಹುಬ್ಬಳ್ಳಿ-ಧಾರವಾಡ ಕಮಿಷನರ್ ಲೂಟಿ



ಸಾಲದ ಸುಳಿಯಲ್ಲಿ ಚಿನ್ನೇಗೌಡ

ಭೂಗಳ್ಳ ಬಿಷಪ್ ಮೊರಾಸ್





ಜನ ವಿರೋಧಿ ಹಾಗೂ ಬಂಡವಾಳಶಾಹಿಪರ ಬಜೆಟ್ಟನ್ನು ಮಂಡಿಸುವುದು ಶಾಸನವೇ ಆಗಿಬಿಟ್ಟಿರುವಾಗ ಸಿಡುಕು ಮೋರೆಯ ಯಡಿಯೂರಪ್ಪ ಮಂಡಿಸಿದರೂ, ಹಲ್ಲು ಕಿರಿಯುವ ಸದಾನಂದ ಗೌಡ ಮಂಡಿಸಿದರೂ, ಗಡಸು ಮುಖದ ಸಿದ್ಧರಾಮಯ್ಯ ಮಂಡಿಸಿದರೂ ಯಾವ ಮೂಲಭೂತ ವ್ಯತ್ಯಾಸಗಳು ಇರುವುದಿಲ್ಲ. ಸಾರಾಂಶದಲ್ಲಿ ಅವು ಜನವಿರೋಧಿಯೇ ಆಗಿರುತ್ತವೆ.

ಆರೆಸ್ಸೆಸ್ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಒಕ್ಕಲುತನದಲ್ಲಿ...

ಸದಾನಂದರ ಬಜೆಟ್ಟು

ಶಿವಸುಂದರ್



ಚಾರ್ವಾಕ

ಅಂತೂಇಂತೂ ಸದಾನಂದ ಗೌಡರು 'ತಮ್ಮ' ಮೊದಲ ಬಜೆಟ್ ಮಂಡಿಸಿದ್ದಾರೆ. ಹೈಕಮಾಂಡ್‌ನ ಆದೇಶಕ್ಕೆ ಒಳಪಟ್ಟು ಯಡಿಯೂರಪ್ಪ "ನಾನೂ ಕೂಡಾ ಇಂಥಾ ಅತ್ಯುತ್ತಮ ಬಜೆಟ್ ಮಂಡಿಸಲು ಸಾಧ್ಯವಿರುತ್ತಿರಲಿಲ್ಲ" ಎಂದಿದ್ದಾರೆ. ವಿರೋಧ ಪಕ್ಷಗಳು ಯಥಾಪ್ರಕಾರ ಬಜೆಟ್ಟಿನ ಹಿಂದಿರುವ ಆರ್ಥಿಕ ನೀತಿಗಳನ್ನು ಕಿಂಚಿತ್ತೂ ಚರ್ಚೆಗೆ ತರದೆ ಕೇವಲ ಪದಬಾಂಬನ್ನು ಬಳಸುತ್ತಿದ್ದಾವೆ. ಏಕೆಂದರೆ ಈ ಬಜೆಟ್ಟು ಅಥವಾ ಯಾವುದೇ ಬಜೆಟ್ಟು ಆರ್ಥಿಕ ನೀತಿಯನ್ನು ಪ್ರತಿಫಲಿಸುತ್ತದೆ. ಆ ನೀತಿಗಳ ಬಗ್ಗೆ ಎಲ್ಲ ಪಕ್ಷಗಳದ್ದೂ ಒಂದೇ ಅಭಿಪ್ರಾಯವಿರುವಾಗ ಯಾವ ವಿರೋಧ ಪಕ್ಷ ತಾನೇ ಬಜೆಟ್ಟಿನ ಹಿಂದಿನ ಆರ್ಥಿಕ ನೀತಿಯನ್ನು ವಿರೋಧಿಸುತ್ತದೆ. ಎಲ್ಲ ಪಕ್ಷಗಳು ಹೆಡೆಯ ಜೊತೆ ಸ್ನೇಹವನ್ನು ಇಟ್ಟುಕೊಂಡು ಬಾಲದ ಜೊತೆ ಮಾತ್ರ ವಿರೋಧವನ್ನು ವ್ಯಕ್ತಪಡಿಸುತ್ತವೆ ಅಷ್ಟೆ.

ಹೀಗಾಗಿ ಬಜೆಟ್ಟನ್ನು ವಿಶ್ಲೇಷಣೆ ಮಾಡುವಾಗ ಯಾವುದರ ಬೆಲೆ ಇಳಿಯಿತು ಮತ್ತು ಯಾವುದು ಹೆಚ್ಚಾಯಿತು ಎಂದು ವಿಶ್ಲೇಷಿಸುವುದಕ್ಕಿಂತ ಯಾರಿಂದ ಕಿತ್ತು ಯಾರಿಗೆ ಮತ್ತು ಹೇಗೆ ಕೊಡಲಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಜಾಗತೀಕರಣ ಪ್ರಾರಂಭವಾದ ನಂತರ ಭಾರತದ ಎಲ್ಲಾ ಪಕ್ಷಗಳು ಅನುಸರಿಸುತ್ತಿರುವುದು ಒಂದೇ ಆರ್ಥಿಕ ನೀತಿಯನ್ನು. ಅದು ಬಡವರಿಂದ ಕಿತ್ತು ಶ್ರೀಮಂತರಿಗೆ ನೀಡುವ ನೀತಿ. ಏಕೆಂದರೆ ಬಡವರಿಗೆ ಜೀವನೋಪಾಯ ಕಲ್ಪಿಸುವುದಕ್ಕಿಂತ ಶ್ರೀಮಂತರ ಮತ್ತು ಬಂಡವಾಳಶಾಹಿಗಳ ಬಳಿ ಹಣ ಉಳಿದರೆ ಅವರು ಆರ್ಥಿಕತೆಯಲ್ಲಿ ಬೆಳವಣಿಗೆ ತಂದು ಆದರಿಂದ ಬಡತನ ಇಂಗುತ್ತದೆ ಎಂಬುದು ಇಂದು ಭಾರತದಂಥ ಎಲ್ಲಾ ದೇಶಗಳು ಅನುಸರಿಸುತ್ತಿರುವ ಆರ್ಥಿಕ ನೀತಿ. ಇದನ್ನೇ ಮಾರುಕಟ್ಟೆ ಆರ್ಥಿಕ ನೀತಿ ಎಂದೂ ಕರೆಯುತ್ತಾರೆ. ಹೀಗಾಗಿ ಜನ ವಿರೋಧಿ ಹಾಗೂ ಬಂಡವಾಳಶಾಹಿಪರ ಬಜೆಟ್ಟನ್ನು ಮಂಡಿಸುವುದು ಶಾಸನವೇ ಆಗಿಬಿಟ್ಟಿರುವಾಗ ಸಿಡುಕು ಮೋರೆಯ ಯಡಿಯೂರಪ್ಪ ಮಂಡಿಸಿದರೂ, ಹಲ್ಲು ಕಿರಿಯುವ ಸದಾನಂದ ಗೌಡ ಮಂಡಿಸಿದರೂ, ಗಡಸು ಮುಖದ ಸಿದ್ಧರಾಮಯ್ಯ ಮಂಡಿಸಿದರೂ ಯಾವ ಮೂಲಭೂತ ವ್ಯತ್ಯಾಸಗಳು ಇರುವುದಿಲ್ಲ, ಸಾರಾಂಶದಲ್ಲಿ ಅವು ಜನವಿರೋಧಿಯೇ ಆಗಿರುತ್ತವೆ.

ಹಾಗಂತ ಬಜೆಪಿ ಮತ್ತು ಇತರ ಪಕ್ಷಗಳ ನಡುವೆ ವ್ಯತ್ಯಾಸವೇ ಇಲ್ಲ ಎಂದೇನಲ್ಲ, ಬಜೆಪಿ ಪಕ್ಷ ತನ್ನ ಹಿಂದುತ್ವ ಅಜೆಂಡಾವನ್ನು ಆಚರಣೆಗೆ ತರಲು ಅಧಿಕಾರವನ್ನು ಬಳಸಿಕೊಳ್ಳುತ್ತದೆ. ಆ ನಿಟ್ಟಿನಲ್ಲಿ ಬಜೆಟ್ಟಿನಲ್ಲೂ ಅದಕ್ಕೆ ಬೇಕಾದ ಹಣಕಾಸು ಸಂಪನ್ಮೂಲವನ್ನು ಒದಗಿಸುತ್ತದೆ. ಯಡಿಯೂರಪ್ಪ ಮಾಡಿದ್ದು ಇದನ್ನೇ. ಸದಾನಂದ ಮಾಡಿರೋದು ಇದನ್ನೇ. ಅಷ್ಟರಮಟ್ಟಿಗೆ ಬಜೆಪಿ ಮತ್ತು ಇತರ ಪಕ್ಷಗಳಿಗೆ ವ್ಯತ್ಯಾಸ ಇದೆ. ಆದರೆ ಯಡಿಯೂರಪ್ಪ ಮತ್ತು ಆರೆಸ್ಸೆಸ್ ಕ್ಯಾಂಡಿಡೇಟ್ ಆದ ಸದಾನಂದರ ನಡುವೆ ಒಂದು ಸಣ್ಣ ವ್ಯತ್ಯಾಸವಿದೆ.

ಇಬ್ಬರೂ ಹಿಂದೂ ಮಠಮಂದಿರಗಳಿಗೆ ಸಾರ್ವಜನಿಕ ಹಣವನ್ನು ಸಂವಿಧಾನಬಾಹಿರವಾಗಿ ಸುರಿಯುತ್ತಿದ್ದಾರೆ.. ಆದರೆ ಯಡ್ಡಿ ಆರೆಸ್ಸೆಸ್ ಅಜೆಂಡಾದ ಒಳಗೆ ಜಾತಿರಾಜಕಾರಣ ಮಾಡಿ ತನ್ನ ಪರವಾದ ಲಿಂಗಾಯತ ಓಟ್ ಬೇಸನ್ನು ಸೃಷ್ಟಿಸಿಕೊಳ್ಳಲು ಪ್ರಧಾನವಾಗಿ ಲಿಂಗಾಯತ ಮಠ-ಸಂಸ್ಥೆ-ಸಮುದಾಯ ಸಂಘಗಳಿಗೆ ಕಳೆದ ಮೂರು ವರ್ಷದಲ್ಲಿ 395 ಕೋಟಿ ನೀಡಿದ್ದ. ಯಡಿಯೂರಪ್ಪ ಹಿಂದೂತ್ವದ ಚೌಕಟ್ಟಿನೊಳಗೆ ಇದನ್ನು ಮಾಡಿದ್ದರೂ ಲಿಂಗಾಯತ ಜಾತಿಯನ್ನು ತನ್ನ ಪರವಾಗಿ ಸದೃಢೀಕರಿಸಿಕೊಂಡಿದ್ದು ಬಜೆಪಿಯ ಪ್ರಸ್ತುತ ಬಿಕ್ಕಟ್ಟಿನ ಮೂಲವಾಗಿದೆ. ಈಗ ಅದಕ್ಕೆ ಪ್ರತಿಯಾಗಿ ಸದಾನಂದ ಗೌಡ ಮತ್ತವರ ಗುಂಪು ಇತರ ಹಿಂದುಳಿದ ಮಠಗಳಿಗೆ - ಅದರಲ್ಲೂ ವಿಶೇಷವಾಗಿ ಕುರುಬ ಸಮುದಾಯದ ಮಠ ಮತ್ತು ಸಂಸ್ಥೆಗಳಿಗೆ - ಹಣ ಸುರಿದು ಹಿಂದೂತ್ವದ ಚೌಕಟ್ಟಿನೊಳಗೆ ಲಿಂಗಾಯತೇತರ ಓಟು ಬ್ಯಾಂಕನ್ನು ನಿರ್ಮಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಇದು 'ಹಿಂದೂತ್ವ' ಎಂಬ ವಾದದ ಟೊಳ್ಳುತನವನ್ನೂ ತೋರಿಸುತ್ತಿದೆ.

ಇದು ಒಟ್ಟಾರೆ ಬಜೆಟ್ಟಿನ ಸ್ಥೂಲ ರಾಜಕೀಯ.

ಇದರ ನಡುವೆ ಸದಾನಂದ ಗೌಡರ ಬಜೆಟ್ಟಿನ ಸುತ್ತ ಇರುವ ಹಾಗೆಯೇ ಬಿಜೆಪಿ ಮತ್ತು ಮಾಧ್ಯಮಗಳು ಹರಿಯಬಿಟ್ಟಿರುವ ಮಿಥ್ಯೆಗಳಲ್ಲಿ ಒಂದಷ್ಟು ಒಡೆದು ನೋಡೋಣ...

- ಮೊದಲನೆಯದಾಗಿ 1.02 ಲಕ್ಷ ರೂ. ಕೋಟಿ ಬಜೆಟ್ಟು ಮಂಡನೆಯೇ ಒಂದು ದೊಡ್ಡ ಹೆಗ್ಗಳಿಕೆಯೆಂದು ಕೊಚ್ಚಿಕೊಳ್ಳುತ್ತಾ ಬಿಜೆಪಿ ಜನರನ್ನು ಮಂಗ ಮಾಡಲು ಹೊರಟಿದೆ. ಏಕೆಂದರೆ ಒಂದು ರಾಜ್ಯದ ನಿವ್ವಳ ಉತ್ಪಾದಕತೆ ಜಾಸ್ತಿ ಆಗುತ್ತಾ ಹೋದಂತೆ ಅದಕ್ಕೆ ತಕ್ಕ ಹಾಗೆ ತೆರಿಗೆ ಮತ್ತು ಇನ್ನಿತರ ಆದಾಯ ಹಾಗೂ ಅದನ್ನು ಆಧರಿಸಿ ರಾಜ್ಯದ ವೆಚ್ಚದ ಅಂದಾಜು ಹೆಚ್ಚುತ್ತಲೇ ಹೋಗುತ್ತದೆ. 1947ರಲ್ಲಿ ಭಾರತದ ಕೇಂದ್ರ ಸರ್ಕಾರದ ಬಜೆಟ್ಟು 1 ಲಕ್ಷ ಕೋಟಿಯನ್ನು ದಾಟಿರಲಿಲ್ಲ, ಈಗದು 14 ಲಕ್ಷ ಕೋಟಿ. ಹೀಗಾಗಿ ಅದು ಸಹಜ ಬೆಳವಣಿಗೆಯ ಭಾಗವೇ ಹೊರತು ಸಾಧನೆಯಲ್ಲ, ಪ್ರಶ್ನೆ ಇರುವುದು ಆ ಸಂಪನ್ಮೂಲದಲ್ಲಿ ಯಾವ ಬಗೆಯ ಆರ್ಥಿಕ ಅಭಿವೃದ್ಧಿ ಮಾಡಲು ಹೊರಟಿದೆ ಮತ್ತು ಯಾವ ವರ್ಗಗಳ ಅಭಿವೃದ್ಧಿಯನ್ನು ಸಾರಾಂಶದಲ್ಲಿ ಗುರಿ ಇಟ್ಟುಕೊಳ್ಳಲಾಗಿದೆ ಎಂಬುದು.

- ಎಲ್ಲಕ್ಕಿಂತ ಮುಖ್ಯವಾದದ್ದು ಕರ್ನಾಟಕದ ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ 1.02 ಲಕ್ಷ ಕೋಟಿ ಹಣವನ್ನು ರೂಢಿಸಲಾಗುವುದೇ ಎಂಬುದು? ಏಕೆಂದರೆ ದೇಶದ ಮತ್ತು ಜಗತ್ತಿನ ಆರ್ಥಿಕ ಪರಿಸ್ಥಿತಿ ಕುಂಠಿತವಾಗಿದೆ. ಹೀಗಾಗಿ ದೇಶದ ಆರ್ಥಿಕ ಪ್ರಗತಿ ಗತಿ ಶೇ.8.4 ಇರಬಹುದು ಎಂದು ಅಂದಾಜು ಮಾಡಿದ್ದವರೇ ಈಗ ಅದು ಶೇ.6.4 ಅನ್ನು ದಾಟಲ್ಲ ಎನ್ನುತ್ತಿದ್ದಾರೆ. ಕರ್ನಾಟಕದ ಆರ್ಥಿಕತೆ ಕಳೆದ ವರ್ಷದಲ್ಲಿ ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರ ಮೂರರಲ್ಲೂ ಹಿನ್ನಡೆಯನ್ನು ಸಾಧಿಸಿದೆ. ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿಯವರೇ ಹೇಳಿದಂತೆ ಈ ಮೂರು ಕ್ಷೇತ್ರಗಳಲ್ಲಿ ಪ್ರಗತಿಯ ದರವು ಅನುಕ್ರಮವಾಗಿ ಶೇ. 2.9, ಶೇ. 3.6 ಮತ್ತು ಶೇ. 10.6 ರಷ್ಟು ಇಳಿಕೆಯಾಗಿದೆ.

ಇವೆಲ್ಲದರ ಪರಿಣಾಮವಾಗಿ ಆ ಪ್ರಮಾಣದ ಆರ್ಥಿಕ ಚಟುವಟಿಕೆ ನಡೆಯದಿದ್ದರೆ ತೆರಿಗೆ ಸಂಗ್ರಹವೂ ಕಡಿಮೆಯಾಗುತ್ತದೆ. ಹೀಗಾಗಿಯೇ ಕಳೆದ ವರ್ಷ ಬಜೆಟ್ಟಿನಲ್ಲಿ 83,729 ಕೋಟಿ ತೆರಿಗೆ ಸಂಗ್ರಹವಾಗುತ್ತದೆ ಎಂದು ಅಂದಾಜು ಮಾಡಿದ್ದರೂ ತೆರಿಗೆ ಸಂಗ್ರಹವಾಗಿದ್ದು ಕೇವಲ 78,433 ಕೋಟಿ ಮಾತ್ರ. ಈ ಬಾರಿಯೂ 124 ತಾಲ್ಲೂಕುಗಳಲ್ಲಿ ಬರ ಇದೆ ಹಾಗೂ ಒಟ್ಟಾರೆ ಆರ್ಥಿಕ ಪ್ರಗತಿ ಶೇ. 6 ನ್ನು ದಾಟುವ ಯಾವ ಸೂಚನೆಯೂ ಇಲ್ಲ. ಹಾಗಿದ್ದ ಮೇಲೆ ತೆರಿಗೆ ಸಂಗ್ರಹ ಈ ಬಾರಿ ಕಳೆದ ವರ್ಷಕ್ಕಿಂತ ಕಡಿಮೆ ಆಗುತ್ತದೆ ಅಥವಾ ಕಳೆದ ವರ್ಷದಷ್ಟು ಮಾತ್ರ ಆಗುತ್ತದೆ. ಹಾಗಿದ್ದರೂ ಈ ಬಾರಿ 1.02 ಲಕ್ಷ ಕೋಟಿಯಷ್ಟು ಆದಾಯ ಸಂಗ್ರಹವಾಗಬಹುದೆಂಬ ಸರ್ಕಾರದ ಅಂದಾಜು ಪ್ರಾರಂಭದಲ್ಲೇ ಸುಳ್ಳು ಮತ್ತು ಮೋಸದಿಂದ ಕೂಡಿದ್ದಾಗಿದೆ.

- ಸರ್ಕಾರ, ಹಣಕಾಸು ಕೊರತೆಯಾದಾಗ ಕೊರತೆ ಹಣವನ್ನು ಸಾಲ ಎತ್ತುತ್ತದೆ. ಸರ್ಕಾರೀ ಹಣಕಾಸು ಸಂಸ್ಥೆಗಳು ಕಡಿಮೆ ದರದಲ್ಲಿ ಸಾಲ ನೀಡುತ್ತವೆ. ಆದರೆ ಅದಕ್ಕೆ ಮಿತಿಯಿರುತ್ತದೆ. ಓಪನ್ ಮಾರುಕಟ್ಟೆಯಲ್ಲಿ ಸರ್ಕಾರಕ್ಕೆ ಸಾಲ ಸಿಗುತ್ತದೆ. ಅದಕ್ಕೆ ಸರ್ಕಾರಿ ಆಸ್ತಿಯನ್ನು ಒತ್ತೆ ಇಡಬೇಕು ಮತ್ತು ಬಡ್ಡಿಯೂ ದುಬಾರಿ. ಅದು ಹೆಚ್ಚುತ್ತಾ ಹೋದಂತೆ ರಾಜ್ಯ ದಿವಾಳಿಯೆಡೆಗೆ ಸಾಗುತ್ತದೆ. ಈಗಾಗಲೇ ಬಿಬಿಎಂಪಿ ತಾನು ತಂದ ಸಾಲಗಳಿಗೆ ತನ್ನ ಆಸ್ತಿಪಾಸ್ತಿಯನ್ನು ಒತ್ತೆ ಇಡುತ್ತಿರುವುದನ್ನು ನೋಡಿದ್ದೇವೆ. ಆದರೆ ಬಜೆಪಿ ಸರ್ಕಾರ ಕಳೆದ ಬಾರಿ ತನ್ನ ಕೊರತೆಯನ್ನು ಜನರಿಂದ ಮುಚ್ಚಿಡಲು ಓಪನ್ ಮಾರುಕಟ್ಟೆಯಿಂದಲೇ 6,206 ಕೋಟಿ ಸಾಲ ಎತ್ತಿದೆ. ಈ ಬಾರಿಯೂ 10,000 ಕೋಟಿ ಹಣವನ್ನು ಅದೇ ಮೂಲಗಳಿಂದ ಎತ್ತಲು ತೀರ್ಮಾನಿಸಿದೆ. ಇದರಿಂದಾಗಿ 2012-13ರ ಹೊತ್ತಿಗೆ ಕರ್ನಾಟಕ ರಾಜ್ಯದ ಒಟ್ಟು ಸಾಲದ ಹೊರೆ 81,994 ಕೋಟಿಯಾಗಿದ್ದರೆ (ಇದು ನಮ್ಮ ಒಟ್ಟಾರೆ ತೆರಿಗೆ ಆದಾಯಕ್ಕಿಂತಲೂ ಜಾಸ್ತಿ!) ಅದರಲ್ಲಿ ಓಪನ್ ಮಾರ್ಕೆಟ್ ದುಬಾರಿ ಸಾಲದ ಪ್ರಮಾಣವೇ 44,608 ಕೋಟಿಯಾಗಿದೆ. ಇದರಿಂದಾಗಿ ರಾಜ್ಯದ ದೊಡ್ಡ ವೆಚ್ಚಗಳ ಬಾಬತ್ತಿನಲ್ಲಿ ಬಡ್ಡಿ ತೀರುವಳಿ ನಾಲ್ಕನೇ ದೊಡ್ಡ ಬಾಬತ್ತಾಗಿ ಪರಿಣಮಿಸಿದೆ. ಅದನ್ನು ರಾಜ್ಯದ ಬಡಜನತೆಯ ಮೇಲೆ ತೆರಿಗೆ ಇನ್ನಿತರ ರೂಪದ ಹೊರೆಯಾಗಿ ವರ್ಗಾಯಿಸಲಾಗುತ್ತಿದೆ. ಹೀಗಾಗಿ ಒಂದೋ ಸದಾನಂದ ಗೌಡರ ಬಜೆಟ್ಟು ಬಂಡವಾಳವಿಲ್ಲದ ಬಡಾಯಿ, ಇಲ್ಲವೇ ಓಪನ್ ಮಾರ್ಕೆಟ್‌ನಿಂದ ಸಾಲ ತಂದರೆ ಅದು ಜನರನ್ನು ದಿವಾಳಿಯೆಬ್ಬಿಸುವ ನೀತಿ.

- ಇನ್ನು ಎರಡನೇ ಕೃಷಿ ಬಜೆಟ್ಟೆಂಬ ಹೆಗ್ಗಳಿಕೆ. ಹಾಗೆ ನೋಡಿದರೆ ಹೋದ ವರ್ಷ ಯಡ್ಡಿ ಮಂಡಿಸಿದ ಬಜೆಟ್ ಭಾಷಣದ ಪ್ರತಿ ಹಸಿರು ಬಣ್ಣದಲ್ಲಿತ್ತೆಂಬುದನ್ನು ಬಿಟ್ಟರೆ ಅದರಲ್ಲಿ ರೈತಾಪಿಗೆ ಯಾವುದೇ ವಿಶೇಷವಾದ ಯೋಜನೆ ಅಥವಾ ಸಂಪನ್ಮೂಲಗಳನ್ನು ನೀಡಿರಲಿಲ್ಲ. ಹೀಗಾಗಿ ಕೃಷಿ ಬಜೆಟ್ ಎಂಬ ಶೀರ್ಷಿಕೆಯೇ ಜನರನ್ನು ಮೋಸ ಮಾಡುವ ಶೀರ್ಷಿಕೆ. ರೈತರಿಗೆ ಅದೇ ಹಸಿರು ಮಖಮಲ್ ಟೋಪಿಯನ್ನು ಈ ವರ್ಷವೂ ಹಾಕಲು ಹೊರಟಿರುವ ಮಾನ್ಯ ಸದಾನಂದ ಗೌಡರು ಈ ತಥಾಕಥಿತ ಕೃಷಿ ಬಜೆಟ್ಟಿಗೆ ಹೆಚ್ಚಿಸಿರುವ ಸಂಪನ್ಮೂಲ ಕೇವಲ 2,921 ಕೋಟಿ ಮಾತ್ರ. ಅಂದರೆ ಶೇ.15ರಷ್ಟು ಮಾತ್ರ ಹೆಚ್ಚಳ. ಶೇ.7ರ ಹಣದುಬ್ಬರ ಮತ್ತು ಬೆಲೆ ಏರಿಕೆಗಳನ್ನು ಗಮನಕ್ಕೆ ತೆಗೆದುಕೊಂಡರೆ ಇದು ಹೆಚ್ಚಳವೇ ಅಲ್ಲ, ಈಗಾಗಲೇ ಹೇಳಿದಂತೆ ಈ ಪ್ರಮಾಣದ ಹೆಚ್ಚಳಕ್ಕೆ ಬೇಕಾದ ತೆರಿಗೆ ಕ್ರೋಢೀಕರಣಕ್ಕೆ ಬೇಕಾದ ಆರ್ಥಿಕ 'ಪ್ರಗತಿ'ಯಾಗಲೀ, 'ನೀತಿ'ಯಾಗಲೀ ಸರ್ಕಾರದ ಬಳಿ ಇಲ್ಲವೇ ಇಲ್ಲ, ಹೀಗಾಗಿ ಇದು ಕೇವಲ ಕಾಗದದ ಮೇಲಿನ ಹೆಚ್ಚಳವಾಗಿ ಮಾತ್ರ ಉಳಿಯುವ ಸಂಭವವೇ ಹೆಚ್ಚು.

ಅದಕ್ಕಿಂತಲೂ ಮುಖ್ಯವಾದದ್ದು ಕೃಷಿ ಬಜೆಟ್ಟಿನ ಒಳಗೆ ಈ ಬಜೆಟ್ಟು ಅನುಸರಿಸುತ್ತಿರುವ ನೀತಿಯೇನು? ಬಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಕೃಷಿ ಮಾರುಕಟ್ಟೆ ವ್ಯವಹಾರ ಮತ್ತು ಉದ್ದಿಮೆಗಳತ್ತ ಕೃಷಿ ನೀತಿ ಹೊರಟಿದೆ. ಅದಕ್ಕಾಗಿಯೇ ಕೃಷಿ ಬಂಡವಾಳದಾರರ ಸಮ್ಮೇಳನವೂ ಇತ್ತೀಚೆಗೆ ನಡೆಯಿತು. ಅದರ ಫಲವಾಗಿ ಗುಲ್ಬರ್ಗದಲ್ಲಿ ತೊಗರಿ ಟೆಕ್ನಾಲಜಿ ಪಾರ್ಕ್, ರಾಣೆಬೆನ್ನೂರಿನಲ್ಲಿ ಮೆಕ್ಕೆಜೋಳ ಪಾರ್ಕ್ ಮತ್ತು ತಿಪಟೂರಿನಲ್ಲಿ ತೆಂಗು ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಭರವಸೆ ನೀಡಲಾಗಿದೆ. ಇವೆಲ್ಲವೂ ಖಾಸಗಿ ಸಹಭಾಗಿತ್ವದೊಂದಿಗೆ ಎಂಬುದನ್ನು ಮರೆಯುವಂತಿಲ್ಲ.

ಹಾಗೆಯೇ ಇನ್ನೂ ದೊಡ್ಡ ಅಪಾಯಕಾರಿ ಪ್ರಸ್ತಾಪವೂ ಈ ಬಜೆಟ್ಟಿನಲ್ಲಿದೆ. ಅದು ಖಾಸಗಿ ಸಹಭಾಗಿತ್ವದಲ್ಲಿ ಉಗ್ರಾಣಗಳ ಸ್ಥಾಪನೆ. ಇದು ನಿಧಾನವಾಗಿ ರೈತಾಪಿಯ ಬದುಕಿನ ಜುಟ್ಟನ್ನು ಖಾಸಗಿ ಬಂಡವಾಳಶಾಹಿಗಳ ಕೈಗೊಪ್ಪಿಸುತ್ತದೆ. ಹೀಗೆ ಕೃಷಿ ಬಜೆಟ್ಟಿನ ಒತ್ತಲ್ಲವೂ ಪ್ರಧಾನವಾಗಿ ಕೃಷಿ ಬಂಡವಾಳ ಹೂಡಿಕೆದಾರರ ಹಿತಾಸಕ್ತಿಯನ್ನು ಕಾಪಾಡುವ ದಿಕ್ಕಿನಲ್ಲಿದೆಯೇ ವಿನಃ ಆತ್ಮಹತ್ಯೆಯ ಹಾದಿ ಹಿಡಿದಿರುವ ಸಣ್ಣ ಮತ್ತು ಅತಿಸಣ್ಣ ರೈತರ ಪರವಾಗಿಯಲ್ಲ.

- ಇದಲ್ಲದೆ ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮತ್ತು ವಿತ್ತೀಯ ಶಿಸ್ತನ್ನು ಕಾಪಾಡಿಕೊಳ್ಳಲು ಸರ್ಕಾರ ತನ್ನ ವೆಚ್ಚವನ್ನು ಕಡಿತಗೊಳಿಸಬೇಕೆಂದು ವಿತ್ತೀಯ ನಿರ್ವಹಣಾ ಮೇಲುಸ್ತುವಾರಿ ಸಮಿತಿ ಶಿಫಾರಸ್ಸು ಮಾಡಿ 2012-2016ರ ಸಾಲಿನಲ್ಲಿ ತುರ್ತು ವೈದ್ಯಕೀಯ ಸಿಬ್ಬಂದಿಯ ನೇಮಕಾತಿಯನ್ನು ಬಿಟ್ಟು ಯಾವುದೇ ಹೊಸ ನೇಮಕಾತಿ ಮಾಡಬಾರದೆಂದು ಸಲಹೆ ಮಾಡಿದೆ. ಹಾಗೆಯೇ ಇಂಧನ ರಸ್ತೆ, ಕುಡಿಯುವ ನೀರು, ಇನ್ನಿತ್ಯಾದಿ ಬಂಡವಾಳ ವೆಚ್ಚದ ಮೇಲೆ ಬಳಕೆದಾರರ ಶುಲ್ಕವನ್ನು ಹೆಚ್ಚಿಸಬೇಕೆಂಬ ಮತ್ತು ಕ್ರಮೇಣವಾಗಿ ಅವಷ್ಟನ್ನೂ ಖಾಸಗೀಕರಿಸಬೇಕೆಂಬ ಪ್ರಸ್ತಾಪವನ್ನು ಇಟ್ಟಿದೆ. ಹಾಗೆಯೇ ಇಂಧನ ಮತ್ತು ಆಹಾರಕ್ಕಾಗಿ ಕೊಡುತ್ತಿರುವ ಸಬ್ಸಿಡಿಯನ್ನು ಕ್ರಮೇಣ ಕಡಿಮೆ ಮಾಡಬೇಕೆಂಬ ಪ್ರಸ್ತಾಪವನ್ನು ಇಟ್ಟಿದೆ.

ವಾಸ್ತವವಾಗಿ ಬೇರೆ ಬೇರೆ ಬಾಬತ್ತುಗಳಿಗೆ ಸರ್ಕಾರಗಳು ಘೋಷಿಸುವ ಹಣದ ಮೊತ್ತದ ಅಸಲಿಯತ್ತು ಗೊತ್ತಾಗುವುದು ಮುಂದಿನ ವರ್ಷದ ಬಜೆಟ್ಟಿನಲ್ಲಿ ಅವರು ತೋರಿಸುವ ಪರಿಷ್ಕೃತ ಮೊತ್ತದಲ್ಲಿ. ಈಗಾಗಲೇ 2009-10ರ ಸಾಲಿನಲ್ಲಿ 1164.41 ಕೋಟಿಯಷ್ಟಿದ್ದ ಆಹಾರ ಸಬ್ಸಿಡಿಯು 2010-11ರಲ್ಲಿ ವಾಸ್ತವವಾಗಿ 926 ಕೋಟಿಗೆ ಇಳಿಸುವುದಾಗಿ ಯಡಿಯೂರಪ್ಪನವರ ಸರ್ಕಾರವೇ ಘೋಷಿಸಿತ್ತು, ಆದರೆ ವಾಸ್ತವದಲ್ಲಿ ಅದಕ್ಕಿಂತಲೂ ನೂರು ಕೋಟಿ ಕಡಿಮೆಯಾಗಿ 850 ಕೋಟಿಗಿಳಿದಿದೆ. ಈ ಬಾರಿ ಅದನ್ನು 926 ಕೋಟಿಯಿಂದ 900 ಕೋಟಿಗೆ ಇಳಿಸುವುದಾಗಿ ಬಹಿರಂಗವಾಗಿಯೇ ಸರ್ಕಾರ ಘೋಷಿಸಿದೆ. ಹೀಗಾಗಿ ಬಜೆಟ್ ಘೋಷಣೆಯಲ್ಲೇ ಹೋದ ವರ್ಷಕ್ಕಿಂತ 26 ಕೋಟಿ ಕಡಿಮೆ ಇರುವಾಗ, ಮತ್ತು ರಾಜ್ಯದ ಆರ್ಥಿಕ

►15

ತ್ರಿಕೋದ್ಯಮದ ಮೊದಲ ಪಾಠ ಕಲಿಸಿದ ಗುರು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಗ್ರಾಮೀಣ ಪ್ರದೇಶದಲ್ಲಿ ವರ್ಷದ ಬಹುಳಷ್ಟು ಕಾಲ ುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ದ್ದೇಶದಿಂದಲೇ ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ್ರಮೀಣ ಉದ್ಯೋಗ ಖಾತರಿ ಯೋಜನೆಯನ್ನು ಾಪಿಸಿದೆ. ಆದರೆ ಈ ಯೋಜನೆಯಿಂದಾಗಿ ಇವತ್ತು ್ಮ ಹಳ್ಳಿಗಳಲ್ಲಿ ಹೊಸದೊಂದು ಸಮಸ್ಯೆ ಉದ್ಭವಿಸಿದೆ. ದೇನೆಂದರೆ ಬಿತ್ತನೆ ಮತ್ತು ಕೊಯ್ಲು ತರಹದ ಕೃಷಿ ಸಗಳು ನಡೆಯಬೇಕಾದ ಸಮಯದಲ್ಲೂ ಹಳ್ಳಿಗಳಲ್ಲಿ ಲಸಗಾರರೇ ಸಿಗದಿರುವುದು.



ಈ ಯೋಜನೆಯ ಮೂಲ ಉದ್ದೇಶ ಕೃಷಿ ಟುವಟಿಕೆಗಳು ಇಲ್ಲದಿರುವಾಗ ಗ್ರಾಮೀಣ ಜನರಿಗೆ ರ್ಯಾಯ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು. ಆದರೆ ಸ್ತವದಲ್ಲಿ ಹೀಗಾಗುತ್ತಿಲ್ಲ. ಈ ಯೋಜನೆಯಿಂದಾಗಿ ಳ್ಳಿಗಳಲ್ಲಿನ ಕೆಲಸಗಾರರು ಎಷ್ಟು ೋಂಭೇರಿಗಳಾಗಿದ್ದಾರೆಂದರೆ ಹೆಚ್ಚು ಕೂಲಿ ಡುತ್ತೇವೆಂದರೂ ಹೊಲಗಳಿಗೆ ಬಂದು ಮೈಬಗ್ಗಿಸಿ ಸ ಮಾಡುವ ಬದಲಾಗಿ ಯಾವುದೇ ಕೆಲಸ ಾಡದಿದ್ದರೂ ಎನ್‌ಆರ್‌ಇಜಿಎ ಯೋಜನೆಯ ಂಟ್ರಾಕ್ಟರ್ ಕೊಡುವ ಕಡಿಮೆ ಹಣಕ್ಕೆ ತೃಪ್ತರಾಗುತ್ತಿದ್ದಾರೆ. ಹಜವಾಗಿಯೇ ಇದರಿಂದಾಗಿ ರೈತರು ಕೃಷಿ ಟುವಟಿಕೆಗಳನ್ನು ನಡೆಸಲಾಗದೇ ಕಂಗಾಲಾಗಿದ್ದಾರೆ.

ಈ ಕಾರಣಕ್ಕೇ ಕೃಷಿ ಸಚಿವ ಶರದ್ ಪವಾರ್ ಮತ್ತು ತರರು ಕೊಯ್ಲು ಮತ್ತು ಬಿತ್ತನೆ ಕಾಲದಲ್ಲಿ ಉದ್ಯೋಗ ಾತರಿ ಯೋಜನೆಯನ್ನು ತಾತ್ಕಾಲಿಕವಾಗಿ ತೆಹಿಡಿಯಬೇಕೆಂದೂ, ಹಾಗೆ ಮಾಡುವ ಮೂಲಕ ಕೃಷಿ ತ್ರಕ್ಕೆ ನೆರವಾಗಬೇಕೆಂದೂ ಆಗ್ರಹಿಸುತ್ತಿದ್ದಾರೆ. ವರ್ಷದ ೂರು ತಿಂಗಳ ಕಾಲ ಈ ಯೋಜನೆಯನ್ನು ತಡೆಹಿಡಿದರೆ ಾರಿಗೂ ನಷ್ಟವಾಗುವುದಿಲ್ಲ. ಹೇಗಿದ್ದರೂ ಉದ್ಯೋಗ ಾತರಿ ಯೋಜನೆಯು ವರ್ಷದ 100 ದಿನಗಳಿಗೆ ಮಿತವಾಗಿದೆ. ವರ್ಷದ ಮೂರು ತಿಂಗಳ ಕಾಲ ಕೃಷಿ ಟುವಟಿಕೆಗಳು ಹೆಚ್ಚಾದಾಗ ಸಹಜವಾಗಿಯೇ ಹಳ್ಳಿಯ ನರಿಗೆ ಕೆಲಸವೂ ಇರುತ್ತದೆ ಮತ್ತು ಸರ್ಕಾರ ಡುವುದಕ್ಕಿಂತ ಹೆಚ್ಚು ಹಣವೂ ಸಿಗುತ್ತದೆ. ಅಷ್ಟೇ ಲ್ಲ, ಈ ಮೂರು ತಿಂಗಳ ಅವಧಿಯಲ್ಲಿ ಸಿಗುವ ೇತನದೊಂದಿಗೆ ಸರ್ಕಾರಿ ಯೋಜನೆಯಿಂದ ಸಿಗುವ ೂರು ದಿನಗಳ ಕೂಲಿಯೂ ಸೇರಿದರೆ ಕೆಲಸಗಾರರಿಗೆ ಂದು ವರ್ಷದಲ್ಲಿ ಹೆಚ್ಚು ಆದಾಯ ಸಿಗುತ್ತದೆ.

ಉದ್ಯೋಗದ ಅವಕಾಶಗಳು ಇರುವ ಸಮಯದಲ್ಲೂ ಾಕೆ ಎನ್‌ಆರ್‌ಇಜಿಎ ಅನುಷ್ಠಾನದಲ್ಲಿರಬೇಕು? ಯಾಕೆ ತ್ತನೆ ಮತ್ತು ಕೊಯ್ಲು ಸಮಯದಲ್ಲಿ ಕಾರ್ಮಿಕರು ರಸ್ತೆಗೆ ಂಬರು ಹಾಕುವ, ಕೆರೆಗಳ ಹೂಳೆತ್ತುವ ಕೆಲಸಗಳಲ್ಲಿ ವುಗಳನ್ನು ಕಾರ್ಮಿಕರಲ್ಲದೆ ಯಂತ್ರಗಳು ಮಾಡುತ್ತಿದ್ದರೂ) ಡಗಿರಬೇಕು? ಇಂತಹ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರ ತ್ತರಗಳನ್ನು ಕೊಡುತ್ತಿಲ್ಲ. ಮಾತ್ರವಲ್ಲ, ಇತ್ತೀಚೆಗೆ ್ರಮೀಣಾಭಿವೃದ್ಧಿ ಸಚಿವ ಜೈರಾಮ್ ರಮೇಶ್ ಯಾವುದೇ ರಣಕ್ಕೂ ಈ ಅವಧಿಯಲ್ಲಿ ಉದ್ಯೋಗ ಖಾತರಿ ೋಜನೆಯನ್ನು ತಾತ್ಕಾಲಿಕವಾಗಿಯೂ ತಡೆಹಿಡಿಯುವುದಿಲ್ಲ ಂದಿದ್ದಾರೆ.

ಸರ್ಕಾರದ ಈ ವಕ್ರ ಚಿಂತನೆಯ ಹಿಂದಿನ ತರ್ಕವೇನು?

ದೇವಿಂದರ್ ಶರ್ಮಾ ಎಂಬ ಆಹಾರ ತಜ್ಞರ ಪ್ರಕಾರ ರ್ಕಾರದ ಮೂಲ ಉದ್ದೇಶ ಕೃಷಿ ಕ್ಷೇತ್ರದಲ್ಲಿರುವ ಜನರನ್ನು ಸಹಾಯಕರನ್ನಾಗಿಸಿ ಅವರನ್ನು ಈ ಕ್ಷೇತ್ರದಿಂದಲೇ ದ್ದೋಡಿಸುವುದು. ಆ ಮೂಲಕ ಕೃಷಿ ಕ್ಷೇತ್ರದಲ್ಲಿ ಂಡವಾಳ ಹೂಡಲು ಸಿದ್ಧರಿರುವ ಬೃಹತ್ ಖಾಸಗಿ ಂಪನಿಗಳನ್ನು ಪ್ರೋತ್ಸಾಹಿಸುವುದು."

ಶರ್ಮಾ ಅವರು ಹೇಳುವಂತೆ ಈ ನಿಟ್ಟಿನಲ್ಲಿ ಆಗಲೇ ಕೃಷಿ ಕ್ಷೇತ್ರದಲ್ಲಿ ಯಾಂತ್ರೀಕರಣವನ್ನು ಕುರಿತು ಒಂದು ಜ್ಞರ ನಿಯೋಗವನ್ನು ರಚಿಸಲಾಗಿದೆ. ಈ ನಿಯೋಗದ ರಿ ಈ ವಲಯದಲ್ಲಿ ಯಂತ್ರಗಳ ಬಳಕೆಯನ್ನು ಹೆಚ್ಚಿಸುವುದು. ಅದರೊಂದಿಗೆ ಹೆಚ್ಚೆಚ್ಚು ಕೀಟನಾಶಕ ಮತ್ತು ಸಸ್ಯನಾಶಕಗಳ ಬಳಕೆಯನ್ನೂ ಪ್ರೋತ್ಸಾಹಿಸುವುದು. ಹೀಗೆ, ಯಂತ್ರ, ಕೀಟನಾಶಕ ಇತ್ಯಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾದರೆ ಅವೆಲ್ಲ ಜಿಡಿಪಿಯನ್ನು ಉಲ್ಬಣಿಸುತ್ತವೆ...


ನಮ್ಮ ಸರ್ಕಾರಕ್ಕೆ ರೈತರು ಕೈಚೆಲ್ಲಿ ಕೃಷಿಯನ್ನೇ ತೊರೆದರೇನಂತೆ, ಕಾರ್ಮಿಕರಿಗೆ ಸೂಕ್ತವಾದ ವೇತನದೊಂದಿಗೆ ಉದ್ಯೋಗ ಸಿಗುವ ಸಮಯದಲ್ಲೂ ಅವರು ಸರ್ಕಾರಿ ತಿಜೋರಿಯಿಂದ ಹಣ ಪಡೆದರೇನಂತೆ, ಇಂತಹ ತರ್ಕರಹಿತ ಯೋಜನೆಗಳಿಂದಾಗಿ ನಮ್ಮ ಕೃಷಿ ಭೂಮಿ ಪಾಳು ಬಿದ್ದರೇನಂತೆ.. ಅವೆಲ್ಲವನ್ನು ಕಾರ್ಪೊರೇಟ್ ಫಾರ್ಮಿಂಗ್‌ಗೆಂದು ಖಾಸಗಿ ಕಂಪನಿಗಳಿಗೆ ವಹಿಸಲು ಸರ್ಕಾರ ರೆಡಿ ಇದೆ.

ನಮ್ಮ ದೇಶದ ಲಕ್ಷಾಂತರ ರೈತರನ್ನು ಆತ್ಮಹತ್ಯೆಗೆ ದೂಡಿದ್ದು, ಮೈಕ್ರೋ ಫೈನಾನ್ಸ್ ನೆಪದಲ್ಲಿ ಅವರನ್ನು ಸುಲಿದಿದ್ದು, ಕಡಿಮೆ ದರದಲ್ಲಿ ಸಾಲ ಎಂಬ ಹೆಸರಲ್ಲಿ ಅವರ ಮುಂಡಾಮೋಚಿದ್ದು... ಇವೆಲ್ಲ ಸಾಲದೆಂಬಂತೆ ಇವತ್ತು ರೈತರು ಕೃಷಿ ಕ್ಷೇತ್ರವನ್ನು ತೊರೆಯುವಂತೆ ಮಾಡಿ ಅವರ ಭೂಮಿಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಧಾರೆ ಎರಯಲು ನಮ್ಮ ಸರ್ಕಾರ ಸಜ್ಜಾಗಿದೆ.

ಇದು ದೇಶದ್ರೋಹವಲ್ಲದೆ ಮತ್ತಿನ್ನೇನು?

*****

ಕಳೆದ ಶನಿವಾರ ತೀರಿಕೊಂಡ ಹಿರಿಯ ಪತ್ರಕರ್ತ ವಿಜಯ ಕರ್ನಾಟಕದ ಸಂಪಾದಕ ಈ. ರಾಘವನ್ ಪತ್ರಿಕೋದ್ಯಮದಲ್ಲಿ ನನ್ನ ಮೊದಲ ಮಾರ್ಗದರ್ಶಿ ಆಗಿದ್ದವರು. ಅದು 1984. ಆಗ ತಾನೇ 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ತನ್ನ ಬೆಂಗಳೂರಿನ ಆವೃತ್ತಿಯನ್ನು ಪ್ರಾರಂಭಿಸಿತ್ತು. ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯೂನಿಕೇಶನ್ ಸಂಸ್ಥೆಯಿಂದ ಪತ್ರಿಕೋದ್ಯಮದಲ್ಲಿ ಪದವಿ ಪಡೆದು ಬೆಂಗಳೂರಿಗೆ ಬಂದಿದ್ದ ನಾನು ಸಹಜವಾಗಿಯೇ ಟೈಮ್ಸ್ ಪತ್ರಿಕೆಗೆ ಅರ್ಜಿಯನ್ನು ಹಾಕಿದ್ದೆ. ಆಗ ಡೆಕ್ಕನ್ ಹೆರಾಲ್ಡ್ ರಾಜ್ಯದಲ್ಲಿ ನಂಬರ್ ಒನ್ ಇಂಗ್ಲಿಷ್ ಪತ್ರಿಕೆ ಆಗಿತ್ತು ಮತ್ತು ಟೈಮ್ಸ್ ಅಂಬೆಗಾಲಿಡುತ್ತಿತ್ತು. ಟೈಮ್ಸ್ ಪತ್ರಿಕೆಯ ಮುಖ್ಯ ವರದಿಗಾರರಾಗಿ ರಾಘವನ್ ಸೇರಿಕೊಂಡಿದ್ದರಲ್ಲದೆ ಯುವಕರೇ ಹೆಚ್ಚಾಗಿರುವ ಉತ್ಸಾಹಿ ವರದಿಗಾರರ ತಂಡವನ್ನು ರೂಪಿಸಲು ಹವಣಿಸುತ್ತಿದ್ದರು.



ರಾಘವನ್

ಆಗ ನನ್ನನ್ನು ಟ್ರಯಲ್ ಮೇಲೆ ರಾಘವನ್ ಆಯ್ಕೆ ಮಾಡಿದರು. ಮೊದಲನೆ ವಾರ ಹಿರಿಯ ವರದಿಗಾರರ ಬಾಲಂಗೋಸಿಯಂತೆ ಸುತ್ತಾಡಿಸಿದರು. ಎರಡನೆ ವಾರ ಟಪಾಲಿನಲ್ಲಿ ಬಂದಿದ್ದ ಪತ್ರಿಕಾ ಹೇಳಿಕೆಗಳನ್ನು ಸಿದ್ಧ ಮಾಡಲು ಸೂಚಿಸಿದರು. ಮೂರನೆ ವಾರ ನನ್ನನ್ನು ಸ್ವತಂತ್ರವಾಗಿ ವರದಿಗಾರಿಕೆಗೆ ಕಳುಹಿಸಿದರು. ನಾಲ್ಕನೇ ವಾರ ಕ್ರೈಂ ಬೀಟ್ (ಸಾಮಾನ್ಯವಾಗಿ ಯುವತಿಯರನ್ನು ಈ ಬೀಟ್‌ಗೆ ಹಾಕುತ್ತಿರಲಿಲ್ಲ) ಗೆ ನಿಯೋಜಿಸಿದರು. ಹೀಗೆ ಒಂದು ತಿಂಗಳು ಮುಗಿಯಿತು. ನನ್ನ ಕೆಲಸಕಾರ್ಯಗಳನ್ನು ಗಮನಿಸಿ, ತಿದ್ದುತ್ತಿದ್ದ ರಾಘವನ್ ನನಗೆ ನೀಡಿದ್ದ ಪರೀಕ್ಷೆಯಲ್ಲಿ ನಾನು ಪಾಸ್ ಆದೆನೋ ಇಲ್ಲವೋ ಎಂಬುದರ ಬಗ್ಗೆ ಮಾತ್ರ ತುಟಿಪಿಟಿಕ್ ಎನ್ನಲಿಲ್ಲ. ಇನ್ನೊಂದು ತಿಂಗಳೂ ಹೀಗೇ ಕಳೆಯಿತು. ರಾಘವನ್ ಮಾತ್ರ ಸುಮ್ಮನೇ ಇದ್ದರು. ನನಗೋ ಕೆಲಸ ಸಿಕ್ಕಿತೋ ಇಲ್ಲವೋ ಎಂಬ ಆತಂಕ. ಪುಕ್ಕಟೆಯಾಗಿ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ ಎಂಬ ಅಸಮಾಧಾನ. ನನ್ನ ಲೂನಾಗೆ ಪೆಟ್ರೋಲ್ ಹಾಕಿಸಲೂ ಕಾಸಿಲ್ಲದ ಅಸಹಾಯಕ ಸ್ಥಿತಿ (ಓದು ಮುಗಿದ ನಂತರ ಅಪ್ಪನಿಂದ ಪಾಕೆಟ್ ಮನಿ ತೆಗೆದುಕೊಳ್ಳಬಾರದೆಂದು ನಿರ್ಧರಿಸಿದ್ದೆ).

ಅವತ್ತು ಆಫೀಸಿಗೆ ಹೋದಾಗ ನನಗೆ ಕೆಲಸ ಕೊಡುತ್ತೀರೋ ಇಲ್ಲವೋ ಎಂದು ರಾಘವನ್ ಅವರನ್ನು ಕೇಳಲೇಬೇಕೆಂದು ನಿರ್ಧರಿಸಿದ್ದೆ. ಆದರೆ ನಾನು ಮಾತನಾಡುವ ಮುನ್ನ ರಾಘವನ್ ಅವರೇ ನನ್ನ ಕೈಗೆ ನೇಮಕಾತಿ ಪತ್ರವನ್ನು ಇಟ್ಟು "ವೆಲ್ಕಮ್ ಟು ಅವರ್ ಟೀಮ್" ಎಂದಿದ್ದರು. ಆಗಿನ ಕಾಲದಲ್ಲಿ ಪತ್ರಿಕೋದ್ಯಮದಲ್ಲಿ ಹತ್ತಾರು ವರ್ಷಗಳನ್ನು ಕಳೆದಿದ್ದವರು ಮಾತ್ರ ವಿಧಾನಸಭೆಯ ಕಲಾಪಗಳನ್ನು ವರದಿ ಮಾಡುತ್ತಿದ್ದರು. ಆದರೆ ನಾನು ಪತ್ರಿಕಾರಂಗಕ್ಕೆ ಕಾಲಿಟ್ಟ ಕೆಲವೇ ತಿಂಗಳುಗಳಲ್ಲಿ ನನ್ನನ್ನು ವಿಧಾನಸಭೆಯ ಕಲಾಪಗಳನ್ನು ವರದಿ ಮಾಡಲು ರಾಘವನ್ ಕಳುಹಿಸಿದ್ದರು. ನಾನು ಬರೆದದ್ದನ್ನು ತಿದ್ದುವ ಮೂಲಕ, ವರದಿಯಲ್ಲಿ ನಾನು ಮಿಸ್ ಮಾಡಿಕೊಂಡಿದ್ದ ಮುಖ್ಯಾಂಶವನ್ನು ಎತ್ತಿ ನನ್ನನ್ನು ಟೀಕಿಸುವ ಮೂಲಕ, ವಿಶೇಷ ವರದಿಯನ್ನು ಬರೆದಾಗ ಅದಕ್ಕೆ ನನ್ನ ಬೈಲೈನ್ ಕೊಟ್ಟು ಪ್ರೋತ್ಸಾಹಿಸುವ ಮೂಲಕ ರಾಘವನ್ ನನ್ನನ್ನು ಓರ್ವ ಒಳ್ಳೆಯ ವರದಿಗಾರ್ತಿಯಾಗಿ ರೂಪಿಸಿದರು. ನನ್ನನ್ನಷ್ಟೇ ಅಲ್ಲ ಆಗ ಅವರ ತಂಡದಲ್ಲಿದ್ದ ಇತರೆ ಹೊಸ ವರದಿಗಾರರನ್ನು ಸಹ. ಆಗ ಟೈಮ್ಸ್ ವರದಿಗಾರರನ್ನು ಎಲ್ಲರೂ ಅತಿ ಉತ್ಸಾಹಿ ಮತ್ತು ಪ್ರತಿಭಾವಂತ ತಂಡ ಎಂದೇ ಪರಿಗಣಿಸಿದ್ದರು. ಎರಡು ವರ್ಷಗಳ ಕಾಲ ರಾಘವನ್ ಅವರಿಂದ ತರಬೇತಿ ಪಡೆದ ನಂತರ ನಾನು ದೆಹಲಿಗೆ ಹೋದೆ ಮತ್ತು ಅಲ್ಲಿಂದ ನಮ್ಮಿಬ್ಬರ ಹಾದಿಗಳು ಬೇರೆಬೇರೆ ಆದವು. ಇದೆಲ್ಲ ವೈಯಕ್ತಿಕ ವಿಚಾರಕ್ಕೆ ಸಂಬಂಧಪಟ್ಟಿದ್ದು.

ಅದಕ್ಕಿಂತ ಮುಖ್ಯವಾದದ್ದು ರಾಘವನ್ ಅವರು ಕನ್ನಡ ಪತ್ರಿಕೋದ್ಯಮಕ್ಕೆ ಮಾಡಿದ ಉಪಕಾರ. ರಾಘವನ್ ಅವರ ಮಾತೃಭಾಷೆ ತಮಿಳು ಆಗಿದ್ದರೂ, ಅವರು ತಮ್ಮ ಇಡೀ ವೃತ್ತಿಜೀವನವನ್ನು ಇಂಗ್ಲಿಷ್ ಪತ್ರಿಕೋದ್ಯಮದಲ್ಲೇ ಕಳೆದಿದ್ದರೂ ಅವರು ತಮ್ಮ ಜೀವನದ ಕೊನೆ ವರ್ಷಗಳಲ್ಲಿ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿದ್ದ ಕೇಸರಿ ಕೆಸರನ್ನು ತೊಳೆದು ಅದನ್ನು ಜಾತ್ಯತೀತ ಪತ್ರಿಕೆಯನ್ನಾಗಿ ಪರಿವರ್ತಿಸಿದರು.

ಟೈಮ್ಸ್ ಸಂಸ್ಥೆಯಲ್ಲಿ ಹಲವಾರು ವರ್ಷಗಳ ಕಾಲ ವಿವಿಧ ಹಿರಿಯ ಹುದ್ದೆಗಳಲ್ಲಿ ದುಡಿದಿದ್ದ ರಾಘವನ್ ಅವರು ಮೂರು ವರ್ಷಗಳ ಹಿಂದೆ ನಿವೃತ್ತಿ ಹೊಂದಿದ್ದರು. ಆದರೆ ಕೆಲವೇ ತಿಂಗಳಲ್ಲಿ 'ವಿಜಯ್ ನೆಕ್ಸ್ಟ್' ಪತ್ರಿಕೆಯ ಸಂಪಾದಕರಾಗಿ ಟೈಮ್ಸ್ ಸಂಸ್ಥೆಗೆ ವಾಪಸ್ ಬಂದರು. ಅದೇ ಹೊತ್ತಿಗೆ ಟೈಮ್ ಮಾಲೀಕತ್ವದ 'ವಿಜಯ ಕರ್ನಾಟಕ'ದಲ್ಲಿದ್ದ ಕೇಸರಿ ಪಡೆಯ ಅವ್ಯವಹಾರ, ಅಟ್ಟಹಾಸ, ಭ್ರಷ್ಟಾಚಾರಗಳು ಬಯಲಾಗಲಾರಂಭಿಸಿದವು. ಆಗ ಆ ಇಡೀ ತಂಡಕ್ಕೆ ಗೇಟ್ ಪಾಸ್ ಕೊಟ್ಟ ಟೈಮ್ಸ್ ಸಂಸ್ಥೆ ರಾಘವನ್ ಅವರನ್ನೇ 'ವಿಜಯ ಕರ್ನಾಟಕ'ಕ್ಕೂ ಹಂಗಾಮಿ ಸಂಪಾದಕರನ್ನಾಗಿ ನೇಮಿಸಿತು. ಎಲ್ಲರ ಗಮನ ಆಗ ರಾಘವನ್ ಅವರ ಮೇಲಿತ್ತು. ಕೇಸರಿ ಪಡೆ ಹೋದನಂತರ ಅವರು 'ವಿಜಯ ಕರ್ನಾಟಕ' ಪತ್ರಿಕೆಯನ್ನು ಸ್ವಚ್ಛಗೊಳಿಸುತ್ತಾರೆಯೇ, ಅದರ ಪ್ರಸಾರ ಸಂಖ್ಯೆ ಕುಗ್ಗದಂತೆ ನೋಡಿಕೊಳ್ಳುತ್ತಾರೆಯೇ, ಇತರೆ ಕನ್ನಡ ಪತ್ರಿಕೆಗಳೊಡ್ಡುವ ಸವಾಲುಗಳನ್ನು ಹೇಗೆ ಎದುರಿಸುತ್ತಾರೆ ಎಂಬುದರ ಬಗ್ಗೆ ಎಲ್ಲರಿಗೂ ಕುತೂಹಲವಿತ್ತು. ರಾಘವನ್ ಎಲ್ಲರ ನಿರೀಕ್ಷೆಯನ್ನು ಮೀರಿ 'ವಿಜಯ ಕರ್ನಾಟಕ'ವನ್ನು ಒಂದು ಒಳ್ಳೆಯ ಪತ್ರಿಕೆಯಾಗಿ ರೂಪಿಸಿದರು. ಕೇಸರಿ ಪಡೆ ಆ ಪತ್ರಿಕೆಯಲ್ಲಿದ್ದಷ್ಟು ದಿನ ಅದನ್ನು ನನ್ನ ಮನೆಗೆ ತರೆಸಿಕೊಳ್ಳದಿದ್ದ ನಾನು ರಾಘವನ್ ಅವರ ಸಂಪಾದಕತ್ವದ ಪತ್ರಿಕೆಯನ್ನು ತರೆಸಿಕೊಳ್ಳಲಾರಂಭಿಸಿದೆ.

ನೋಡಲು ಬಹಳ ಸ್ಟ್ರಿಕ್ಟ್ ಮನುಷ್ಯನಂತೆ ಕಾಣುತ್ತಿದ್ದ ರಾಘವನ್ ವಾಸ್ತವವಾಗಿ ಅಪಾರ ತಾಳ್ಮೆಯ, ತಮಾಷೆಯ, ಮಾನವೀಯ, ಸ್ವಚ್ಛಹಸ್ತದ ವ್ಯಕ್ತಿಯಾಗಿದ್ದರು. ಬ್ರಾಹ್ಮಣರಾಗಿ ಹುಟ್ಟಿದ್ದರೂ ಜಾತಿ ಪ್ರೇಮವಾಗಲಿ, ಕಂದಾಚಾರವಾಗಲಿ ತಮ್ಮ ಹತ್ತಿರ ಸುಳಿಯಲು ಬಿಟ್ಟವರಲ್ಲ. ರಾಘವನ್ ಬದುಕಿದ ರೀತಿಯಲ್ಲೇ ಅವರ ಅಂತ್ಯ ಕ್ರಿಯೆಯೂ ನಡೆಯಿತು. ಸದಾ ಅವಸರದಲ್ಲಿರುತ್ತಿದ್ದ, ಪೂಜೆಪುನಸ್ಕಾರಗಳಲ್ಲಿ ನಂಬಿಕೆ ಇಲ್ಲದಿದ್ದ, ವೃತ್ತಿಧರ್ಮದ ಬಗ್ಗೆ ಅಪಾರ ನಿಷ್ಠೆ ಹೊಂದಿದ್ದ ರಾಘವನ್ ತಮ್ಮ 61ನೇ ವಯಸ್ಸಿನಲ್ಲೇ ಅವಸರದಲ್ಲಿ ಹೊರಟುಹೋದರಲ್ಲದೆ, ಅವರ ಪಾರ್ಥಿವ ಶರೀರಕ್ಕೆ ಪೂಜೆ ಇತ್ಯಾದಿಗಳ್ಯಾವುವೂ ನಡೆಯಲಿಲ್ಲ ಮತ್ತು ಅವರನ್ನು ಅಂತಿಮ ಯಾತ್ರೆಗೆ ಬೀಳ್ಕೊಟ್ಟಿದ್ದು ಪತ್ರಿಕೋದ್ಯಮದಲ್ಲಿರುವ ನೂರಾರು ಮಿತ್ರರು.


ಅವತ್ತು ಟೈಮ್ಸ್ ಸಂಸ್ಥೆಯ ಮುಖ್ಯಸ್ಥ ಸುನೀಲ್ ರಾಜಶೇಖರ್ ಅವರಿಗೆ "ಯು ಹ್ಯಾವ್ ಲಾಸ್ಟ್ ಎ ಗುಡ್‌ಮ್ಯಾನ್" ಎಂದು ಹೇಳಿದೆ. ರಾಘವನ್ ಅವರ ನಿರ್ಗಮನದ ಮೂಲಕ ಟೈಮ್ಸ್ ಸಂಸ್ಥೆ ಮಾತ್ರವಲ್ಲ, ಕರ್ನಾಟಕದ ಪತ್ರಿಕೋದ್ಯಮ ಕೂಡ ಓರ್ವ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿದೆ.

*****

ಗುಜರಾತಿನ ಮುಖ್ಯಮಂತ್ರಿ ನರಹಂತಕ ನರೇಂದ್ರ ಮೋದಿಯ ಫೋಟೋವನ್ನು ಅಂತರರಾಷ್ಟ್ರೀಯ ಖ್ಯಾತಿಯ 'ಟೈಮ್' ವಾರ ಪತ್ರಿಕೆ ತನ್ನ ಮುಖಪುಟದಲ್ಲಿ ಪ್ರಕಟಿಸಿದೆ ಎಂದೂ, ಅದರ ಜೊತೆಗಿನ ಲೇಖನದಲ್ಲಿ ಮೋದಿಯು ಭಾರತದ ಪ್ರಧಾನಿ ಆಗಲು ಸೂಕ್ತನೆಂದು ಜಗತ್ತಿಗೇ ಸಾರಿದೆ ಎಂದೂ ಹಲವು ಚೆಡ್ಡಿಗಳು ಬೀಗುತ್ತಿದ್ದಾರೆ.

ಆದರೆ ವಾಸ್ತವವಾಗಿ ನಡೆದಿರುವುದೇ ಬೇರೆ.

ಅಮೆರಿಕ ಮೂಲದ 'ಟೈಮ್' ಪತ್ರಿಕೆ ಈಗ ಜಗತ್ತಿನಾದ್ಯಂತ ಹಲವಾರು ಆವೃತ್ತಿಗಳನ್ನು ಹೊಂದಿದೆ. ಅಮೆರಿಕ ದೇಶಕ್ಕೆ ಒಂದು ವಿಶೇಷ ಆವೃತ್ತಿ ಇದ್ದರೆ, ಯೂರೋಪ್, ಆಫ್ರಿಕಾ, ದಕ್ಷಿಣ ಅಮೆರಿಕ ಖಂಡ ಮತ್ತು ದಕ್ಷಿಣ ಪೆಸಿಫಿಕ್ ಪ್ರದೇಶದಲ್ಲಿರುವ ದೇಶಗಳಿಗೆ ವಿವಿಧ ಆವೃತ್ತಿಗಳಿವೆ. ಇನ್ನು ಏಷಿಯಾ ಖಂಡದಲ್ಲಿ ಇದೇ ಪತ್ರಿಕೆಯ ಎರಡು ಆವೃತ್ತಿಗಳಿವೆ. ಅವುಗಳಲ್ಲಿ 'ಏಷಿಯಾ' ಆವೃತ್ತಿಯು ಪ್ರಮುಖವಾಗಿದ್ದು ಅದು ಚೀನಾ, ಥಾಯ್‌ಲ್ಯಾಂಡ್ ತರಹದ ದೇಶಗಳಲ್ಲಿ ಸರಬರಾಜಾಗುತ್ತದೆ. ಆದರೆ ಅದೇ ಪತ್ರಿಕೆಯ 'ದಕ್ಷಿಣ ಏಷ್ಯಾ' ಆವೃತ್ತಿಯ ಪ್ರತಿಗಳು ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ದೇಶಗಳಲ್ಲಿ ಮಾತ್ರ ಮಾರಾಟವಾಗುತ್ತದೆ.



ಅಂದಹಾಗೆ, , 'ಟೈಮ್' ವಾರಪತ್ರಿಕೆಯು ಮೋದಿಯ ಮುಸುಡಿಯನ್ನು, ಆತನ ಘನಂದಾರಿ 'ಸಾಧನೆ'ಗಳನ್ನು ನಮ್ಮ ಅಕ್ಕಪಕ್ಕದ ದೇಶಗಳಲ್ಲಿ ಮಾತ್ರ ಮಾರಾಟ ಆಗುವ 'ದಕ್ಷಿಣ ಏಷಿಯಾ' ಆವೃತ್ತಿಯ ಪ್ರತಿಗಳಲ್ಲಿ ಪ್ರಕಟಿಸಿದೆಯೇ ಹೊರತು ತನ್ನ ಏಷಿಯಾ ಅಥವಾ ಅಮೆರಿಕದ ಆವೃತ್ತಿಗಳ ಮೇಲಲ್ಲ!

ಇಂತಹ 'ಸಾಧನೆ' ಬಗ್ಗೆ ಕೆಲವು ಚೆಡ್ಡಿಗಳು ಬೀಗುತ್ತಿರುವುದು ಹಾಸ್ಯಾಸ್ಪದವಾಗಿದೆಯಲ್ಲವೇ?

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ

ನನ್ನ ಕನಸಿನ ಕಸಾಪ



ಅಭ್ಯರ್ಥಿಗಳ ಅನಿಸಿಕೆ

ಕಸಾಪಗೆ ಸೂಕ್ತ ಅಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕೆ ಮತದಾರರಿಗೆ ನೆರವಾಗಲು, 'ಲಂಕೇಶ್' ಪತ್ರಿಕೆಯ ಈ ಪ್ರಯತ್ನಕ್ಕೆ ಕಸಾಪ ಹಾಗೂ ಸಾಹಿತ್ಯ ವಲಯದಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಕಳೆದ ಸಂಚಿಕೆಯಲ್ಲಿ ನಾವು ಕೇಳಿದ್ದ ಪ್ರಶ್ನೆಗಳಿಗೆ ಅಭ್ಯರ್ಥಿಗಳಾದ ನಟ ಅಶೋಕ್ ಹಾಗೂ ಚಂದ್ರಣ್ಣ ಗೌಡ ಈ ಬಾರಿ ಉತ್ತರಿಸಿದ್ದಾರೆ. 'ಅ'ಕಾರಾದಿಯಾಗಿ ಅಭ್ಯರ್ಥಿಗಳಿಗೆ ಉತ್ತರಿಸಲು ಅವಕಾಶ ಸಿಗಲಿದೆ. ಮುಂದಿನ ಸಂಚಿಕೆಯಲ್ಲಿ ಚಂಪಾ ಹಾಗೂ ಜಯಪ್ರಕಾಶ್ ಗೌಡರ ಅನಿಸಿಕೆ ಪ್ರಕಟವಾಗಲಿದೆ.


ನಮ್ಮ ಪ್ರಶ್ನೆಗಳು

1. ಕಸಾಪ ಬದಲಾಗಬೇಕು ಅನಿಸುತ್ತಿದೆಯೇ? ಯಾವ ರೀತಿ?
2. ನಿಮ್ಮ ಪ್ರಕಾರ ಕನ್ನಡ ಎದುರಿಸುತ್ತಿರುವ ಮತ್ತು ಕನ್ನಡ ಸಾಹಿತ್ಯ ಎದುರಿಸುತ್ತಿರುವ ಸಮಸ್ಯೆಗಳೇನು?
3. ಕಸಾಪದೊಳಗೆ ಜಾತಿವಾದ ಬೆಳೆಯುತ್ತಿರುವುದು ಕೆಟ್ಟ ಪ್ರವೃತ್ತಿ ಅಲ್ಲವೆ? ಅದನ್ನು ಹೇಗೆ ನೀವಾರಿಸುತ್ತೀರಿ.
4. ಮಠಾಧೀಶರು, ರಾಜಕಾರಣಿಗಳನ್ನು ಅನಗತ್ಯವಾಗಿ ಸಮ್ಮೇಳನಗಳಲ್ಲಿ ಮೆರೆಸುವ ಪ್ರವೃತ್ತಿಯನ್ನು ನೀವು ನಿಲ್ಲಿಸುತ್ತೀರಾ?
5. ಕನ್ನಡದ ಓದು ಪ್ರಸ್ತುತವಾಗಲು, ವಿಸ್ತಾರಗೊಳ್ಳಲು ಉಳಿದುಕೊಳ್ಳಲು ನಿಮ್ಮ ಕಾರ್ಯಕ್ರಮಗಳೇನು?
6. ಕೋಮುವಾದ, ಜಾತಿವಾದ, ಶಿಕ್ಷಣ ಕೇಸರೀಕರಣವನ್ನು ನೀವು ವಿರೋಧಿಸುತ್ತೀರಾ?

ಅಶೋಕ್

1) 1982ರಲ್ಲಿ ಗೋಕಾಕ್ ಚಳವಳಿ ಸಂದರ್ಭದಲ್ಲಿ ಬೆಂಗಳೂರಿನ ಸಾಹಿತಿಗಳ-ಕಲಾವಿದರ ಬಳಗ, ಧಾರವಾಡದ ವಿದ್ಯಾವರ್ಧಕ ಸಂಘ, ಮೈಸೂರಿನ ಕನ್ನಡ ಕ್ರಿಯಾಸಮಿತಿ, ಇವುಗಳ ನೇತೃತ್ವದಲ್ಲಿ ಕನ್ನಡ ಚಿತ್ರರಂಗ ಸಕ್ರಿಯವಾಗಿ ತೊಡಗಿಸಿಕೊಂಡಿತ್ತು. ಅಂದಿನಿಂದ ಕನ್ನಡ-ಕನ್ನಡಿಗ-ಕರ್ನಾಟಕದ ಬಗ್ಗೆ ವಿಶೇಷ ಒಲವಿನಿಂದ, ಆಸಕ್ತಿಯಿಂದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೇನೆ. ಕನ್ನಡ ಶಕ್ತಿ ಕೇಂದ್ರ, ಕನ್ನಡ ದೇಶ ಮುಂತಾದ ಸಂಘಟನೆಗಳ ಸ್ಥಾಪನೆ, ಸಂಘಟನೆಯಲ್ಲಿ ಮುಂಚೂಣಿಯಲ್ಲಿದ್ದೇನೆ. ದಕ್ಷಿಣದ ನಾಲ್ಕು ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆಗಳನ್ನು ಆಧರಿಸಿಯೇ ಸರ್ಕಾರಗಳು ಆಯ್ಕೆಯಾಗುತ್ತವೆ. ದುರದೃಷ್ಟವಶಾತ್ ಕರ್ನಾಟಕವನ್ನು ರಾಷ್ಟ್ರೀಯ ಪಕ್ಷಗಳೇ ಆಳಿರುವುದರಿಂದ, ದೆಹಲಿಯ ದರ್ಬಾರಿಗೆ ಶರಣಾಗುವ ರಾಜ್ಯದ ದುರ್ಬಲ ನಾಯಕತ್ವದಿಂದ ಕನ್ನಡಕ್ಕೆ ನ್ಯಾಯ ಸಿಗಲಾರದು. ಕನ್ನಡ ಸಾಹಿತ್ಯ ಪರಿಷತ್ತು ಇದುವರೆಗೂ ಮಡಿವಂತಿಕೆಯ ಗೂಡಾಗಿ, ಕೇವಲ ಸಮ್ಮೇಳನ, ಅನುದಾನಗಳಿಗೆ ಸೀಮಿತವಾಗಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಿ ಪರಿಷತ್ತು ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸಿ, ಸಾಹಿತ್ಯದ ಜೊತೆಗೆ ನಾಡು-ನುಡಿ-ಗಡಿ-ಜಲ-ಉದ್ಯೋಗ-ವಲಸೆ ಮುಂತಾದವುಗಳ ಬಗ್ಗೆಯೂ ಸ್ಪಂದಿಸುವಂತೆ ಮಾಡುವುದು ನನ್ನ ಆದ್ಯತೆ. ಸಮಯ ಬಂದರೆ ಬೀದಿಗಿಳಿದು ಹೋರಾಟ ಮಾಡಲು ಹಿಂಜರಿಯುವುದಿಲ್ಲ.

2) ಜಾಗತೀಕರಣದ ಹಿನ್ನೆಲೆಯಲ್ಲಿ ಕನ್ನಡವಷ್ಟೇ ಅಲ್ಲ, ಎಲ್ಲ ಭಾರತೀಯ ಭಾಷೆಗಳು ಅಪಾಯದಲ್ಲಿವೆ. ಆಡಳಿತದಲ್ಲಿ, ಶಿಕ್ಷಣದಲ್ಲಿ, ಉನ್ನತ ಜ್ಞಾನಾರ್ಜನೆಯಲ್ಲಿ ಕನ್ನಡ ಹಿಂದೆ ಸರಿಯುತ್ತಿದೆ. ಇದಕ್ಕೆ ಪೂರಕವಾಗಿ ನಮ್ಮ ಸಂವಿಧಾನವು ಪ್ರಾದೇಶಿಕ ಭಾಷೆಗಳ ರಕ್ಷಣೆ ಮತ್ತು ಬೆಳವಣಿಗೆಗೆ ಅಡ್ಡಿಯಾಗಿದೆ. ಸಾಮಾನ್ಯ ಜನರಲ್ಲೂ ಕನ್ನಡಕ್ಕಿಂತ ಇಂಗ್ಲಿಷ್ ಮುಖ್ಯ ಅನಿವಾರ್ಯ ಎಂಬ ವಾತಾವರಣ ಸೃಷ್ಟಿಯಾಗುತ್ತದೆ. ಇದು ಬದಲಾಗಿ ಕನ್ನಡ ಜನ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿತು, ಕನ್ನಡವನ್ನು ಬದುಕಿನ ಭಾಷೆಯಾಗಿ ಮಾಡಿಕೊಳ್ಳಬೇಕು. ಇದಕ್ಕಾಗಿ ಪ್ರಾಥಮಿಕ ಶಿಕ್ಷಣದ ಮೊದಲು ಹತ್ತು ವರ್ಷಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ಕಲಿಸಿ, ಇಂಗ್ಲಿಷ್‌ಅನ್ನು ಒಂದು ಭಾಷೆಯನ್ನಾಗಿ ಸಮರ್ಥವಾಗಿ ಕಲಿಸಬೇಕು. ಇದಕ್ಕಾಗಿ ಸರ್ಕಾರದ ರಾಜಕೀಯ ಇಚ್ಛಾಶಕ್ತಿ ಜನಗಳ ದೃಢನಿರ್ಧಾರ ಅವಶ್ಯಕ. ಇದು ಸಾಧ್ಯವಾಗಬೇಕಾದರೆ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಬೇಕಾಗುತ್ತದೆ. ಮುಂದೊಂದು ದಿನ ನಮ್ಮ ದೇಶ ಸ್ವಾಯತ್ತ ರಾಜ್ಯಗಳ ಒಕ್ಕೂಟವಾದಾಗ ಮಾತ್ರ ಪ್ರಾದೇಶಿಕ ಭಾಷೆಗಳು, ವಿಭಿನ್ನ ಸಂಸ್ಕೃತಿ, ಸಂಪ್ರದಾಯ, ಜನಪದ ಉಳಿಯಲು ಸಾಧ್ಯ. ಬಲಿಷ್ಠ ರಾಜ್ಯಗಳೇ ಶಕ್ತಿಶಾಲಿ ದೇಶವನ್ನಾಗಿ ಮಾಡಲು ಸಾಧ್ಯ.



ಇನ್ನು ಕನ್ನಡ ಸಾಹಿತ್ಯ ಹುಲುಸಾಗಿ ಬೆಳೆಯುತ್ತಿದೆ, ಹೊಸಬರು ನೂತನ ದಿಕ್ಕಿನಲ್ಲಿ ವಿವಿಧ ರೀತಿಯ ಸಾಹಿತ್ಯ ಕೃಷಿ ಮಾಡುತ್ತಿದ್ದಾರೆ. ಸಾರ್ವಜನಿಕರು, ಸರ್ಕಾರ ಇವರಿಗೆ ಸರಿಯಾದ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪರಿಷತ್ತನ್ನು ಅಣಿಗೊಳಿಸು ತ್ತೇನೆ.

3) ಜಾತೀವಾದ ಎಲ್ಲಿದ್ದರೂ ತಪ್ಪೆ, ಕಸಾಪದಲ್ಲಿ ಜಾತೀಯತೆ ಬೆಳೆಯುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ, ಆಯ್ಕೆಯಾದ ನಂತರ ಈ ಬಗ್ಗೆ ಗಮನ ಹರಿಸುತ್ತೇನೆ.

4) ಜಿಲ್ಲಾ ಪ್ರದೇಶಗಳಲ್ಲಿ ರಾಜಕಾರಣಿಗಳ ಮತ್ತು ಮಠಾಧೀಶರ ಪ್ರಭಾವ ಹೆಚ್ಚು, ಪರಿಷತ್ತಿನ ಜಿಲ್ಲಾ ಸಮಿತಿಗಳು, ತಾಲ್ಲೂಕು ಸಮಿತಿಗಳು ಇವರೊಂದಿಗೆ ನಿಕಟ ಸಂಬಂಧ ಹೊಂದಿರುತ್ತಾರೆ. ಹೀಗಾಗಿ ಇದೊಂದು ದೊಡ್ಡ ಸವಾಲೇ ಆಗಬಹುದು.

5) ಮತ್ತದೇ ಜಾಗತೀಕರಣದ ಮಾಯೆ ಪ್ರಾದೇಶಿಕ ಭಾಷೆಗಳನ್ನು ಆಪೋಶನ ತೆಗೆದುಕೊಳ್ಳಲು ಸಜ್ಜಾಗಿದೆ. ಈ ಅಪಾಯದ ವಿರುದ್ಧ ಸರ್ಕಾರ ಮತ್ತು ಸಾರ್ವಜನಿಕರು ಎಚ್ಚೆತ್ತು, ಸದಾ, ಸರ್ವದಾ ಕನ್ನಡವನ್ನು ಎಚ್ಚರದಿಂದ ಕಾಯಬೇಕು. ಕನ್ನಡ ಸಾಹಿತ್ಯ ಪರಿಷತ್ತಿನ ಮೂಲ ಉದ್ದೇಶವೇ ಕನ್ನಡದ ಓದನ್ನು ಪ್ರಸ್ತುತ ಮಾಡುವುದು. ಶತಮಾನೋತ್ಸವದ ಹೊಸ್ತಿಲಲ್ಲಿರುವ ಪರಿಷತ್ತು, ಕರ್ನಾಟಕದ ನಾಲ್ಕು ವಿಭಾಗಗಳಲ್ಲಿ ಶತಮಾನೋತ್ಸವ ಗ್ರಾಮಗಳನ್ನು ನಿರ್ಮಿಸಿ, ಸಂಶೋಧನೆ, ಅಧ್ಯಯನ, ಪ್ರಕಟಣೆ ಮುಂತಾದ ಕಾರ್ಯಗಳು ನಡೆಯುವಂತೆ ಮಾಡುತ್ತೇನೆ. ನಾಡಿನ ಹಿರಿಯ ವಿದ್ವಾಂಸರೊಂದಿಗೆ, ತಜ್ಞರೊಂದಿಗೆ ಸಮಾಲೋಚಿಸಿ ಅರ್ಥಪೂರ್ಣ ಕಾರ್ಯ ಯೋಜನೆಗಳನ್ನು ರೂಪಿಸುತ್ತೇನೆ. ಸಿನಿಮಾಕ್ಷೇತ್ರ, ಸಾಹಿತ್ಯ ಕ್ಷೇತ್ರ ಒಂದುಗೂಡಿ ಕನ್ನಡವನ್ನು, ಸಾಹಿತ್ಯವನ್ನು ಜನಸಾಮಾನ್ಯರ ಬಳಿ ಕೊಂಡೊಯ್ದು ಜನಪ್ರಿಯಗೊಳಿಸುತ್ತೇನೆ. ಕಾದಂಬರಿ ಆಧಾರಿತ ಚಿತ್ರಗಳು ಹೆಚ್ಚೆಚ್ಚು ತಯಾರಾಗುವಂತೆ ಪ್ರೋತ್ಸಾಹ ಕಾರ್ಯಗಳನ್ನು ರೂಪಿಸುತ್ತೇನೆ.

6) ಕೋಮುವಾದ, ಜಾತೀವಾದ, ಶಿಕ್ಷಣದ ಕೇಸರೀಕರಣ ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಾದದ್ದಲ್ಲ, ಇದನ್ನು ಎಲ್ಲರೂ, ಎಲ್ಲೆಲ್ಲಿಯೂ ವಿರೋಧಿಸಬೇಕು.

ಚಂದ್ರಣ್ಣ ಗೌಡ



1. ಇಂದಿನ ಜಾಗತೀಕರಣಕ್ಕೆ ಅನುಸಾರವಾಗಿ ಕಸಾಪ ಖಂಡಿತ ಬದಲಾಗಬೇಕಿದೆ. ನಾವಿಂದು ಸ್ಪರ್ಧಾ ಪ್ರಪಂಚದಲ್ಲಿ ಹಾಗೂ 'ಕೊಳ್ಳುಬಾಕ ಸಂಸ್ಕೃತಿಯಲ್ಲಿ ಜೀವಿಸುತ್ತಿದ್ದೇವೆ. ನಮ್ಮ ಕಸಾಪ ಸಂಪ್ರದಾಯದ ಜೊತೆ-ಜೊತೆಗೆ ಆಧುನೀಕತೆಯ ಕಡೆಗೆ ಮುಖ ಮಾಡಬೇಕಾಗಿದೆ ಹಲವಾರು ಭಾಷೆಗಳ ಜೊತೆಗೆ 'ನಮ್ಮ ಕನ್ನಡ' ಪೈಪೋಟಿ ನಡೆಸಬೇಕಾಗಿದೆ ಕಂಪ್ಯೂಟರೀಕರಣ; ಪಡೆದು ಕೊಳ್ಳುವುದಲ್ಲದೆ, ಕನ್ನಡಿಗರು ಹೊಸ-ಹೊಸ ಪದಗಳಿಗೆ ಹೊಂದುಕೊಳ್ಳುವ ವಾತಾವರಣವನ್ನು ಕಸಾಪ ಕಲ್ಪಿಸಿ ಕೊಡಬೇಕಾಗಿದೆ. ಕನ್ನಡಿಗರನ್ನು ಜಾಗೃತಿಗೊಳಿಸುವುದಲ್ಲದೆ, ಕನ್ನಡದ ಬಗೆಗೆ ಆಸಕ್ತಿ ಮೂಡುವಂತೆ ಕಸಾಪ ಮಾಡುವ ಕಡೆಗೆ ಮನಸ್ಸು ಮಾಡಬೇಕಾಗಿದೆ ಕಸಾಪ ತನ್ನ ಕಾಲಿನ ಮೇಲೆ ತಾನು ನಿಂತುಕೊಳ್ಳುವ ರೀತಿಯಲ್ಲಿ ಆರ್ಥಿಕವಾಗಿ ಸದೃಢವಾದಾಗ ಮಾತ್ರ ಕಸಾಪ ಬದಲಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

2. ಕನ್ನಡ ಓದಿ, ಕನ್ನಡ ಓದಿ-ಎಂದರೆ ಕನ್ನಡವು ಉದ್ಯೋಗ ಕಲ್ಪಿಸಿಕೊಡುವುದಾದರೆ ಮಾತ್ರ ಕನ್ನಡ ಓದಿ, ಕನ್ನಡ ಓದಿ ಎಂದು ಪದೇ ಪದೇ ಹೇಳುವ, ಭಾಷಣ ಮಾಡುವ ಅಗತ್ಯವಿಲ್ಲ, ಆದೇಶ ಹೊರಡಿಸುವ ಪ್ರಮೇಯ ಉದ್ಭವಿಸದು. ಇಂದು ಸಾಹಿತಿಗಳು ತಾವು ರಚಿಸುವ ಕೃತಿಗಳಿಗೆ ಪ್ರಚಾರ ಸಿಗಬೇಕು; ಅಲ್ಲದೆ ಅವುಗಳು ಮಾರಾಟವಾಗುವ ವ್ಯವಸ್ಥೆಗೆ, ಪರಿಷತ್ತು ಮತ್ತು ಸರ್ಕಾರ ಸೂಕ್ತ ಗಮನ ನೀಡಬೇಕು. ಆಗ ಮಾತ್ರ ಕನ್ನಡ ಕೃತಿಗಳು ಮತ್ತಷ್ಟು-ಮಗದಷ್ಟು-ಹೊಸ ಬರಲು ಸಾಧ್ಯ, ಉತ್ತಮ ಕನ್ನಡ ಕೃತಿಗಳು - ಇತರ ಭಾಷೆಗಳಿಗೆ ಅನುವಾದಗೊಳ್ಳಬೇಕು ಓದುಗರ ಸದಭಿಪ್ರಾಯ ಹೆಚ್ಚಾಗುವಂತೆ ಮಾಡಿದರೆ ಸಾಹಿತಿಗಳ ಸಮಸ್ಯೆಗಳು ಪರಿಹಾರವಾಗಲು ಸಾಧ್ಯವೆಂಬುದು ನನ್ನ ಭಾವನೆ.

ವಿಶ್ವವಿದ್ಯಾಲಯದ ಎಲ್ಲಾ ಪದವಿ, ತಾಂತ್ರಿಕ ಪದವಿ, ವೈದ್ಯಕೀಯ ಪದವಿಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಓದುವಂತೆ ಮಾಡಿದರೆ ಮಾತ್ರ ಕನ್ನಡ ಸಾಹಿತ್ಯ ಮತ್ತು ಸಾಹಿತಿಗಳಿಗೆ ಬೆಲೆ ಬರುತ್ತದೆ. ಕನ್ನಡದ ಬಗೆಗೆ ಆಸಕ್ತಿ ಬೆಳೆಯುತ್ತದೆ. ಇದರ ಬಗೆ ಪರಿಷತ್ತು ಹಾಗೂ ಸರ್ಕಾರ ನಿರ್ದಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

3. ಜಾತಿವಾದ ಬೆಳೆಯುತ್ತಿರುವುದು ಕೆಟ್ಟ ಪ್ರವೃತ್ತಿ ಹೌದು! ಜಾತಿಯ ಆಧಾರದ ಮೇಲೆ ಕಸಾಪವನ್ನು ಬೆಳೆಸಲಾಗದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಸಾಪ ಮತದಾರರು ಗುಣಾವಗುಣಗಳನ್ನು ತುಲನೆ ಮಾಡಬೇಕಾದದ್ದು ಅತ್ಯಗತ್ಯ. ಜಾತಿ ವ್ಯವಸ್ಥೆಯನ್ನು ಪರಿಷತ್ತಿನ ನಿವಾರಿಸುವುದು ಸುಲಭ ಸಾಧ್ಯವಿಲ್ಲ, ಅದನ್ನು ಬುಡ ಸಮೇತ ನಿರ್ಮೂಲನ ಮಾಡಬೇಕಾದರೆ; ಪರಿಷತ್ತಿನಲ್ಲಿ ಸದಸ್ಯರಾಗುವ ಸಂದರ್ಭದಲ್ಲಿ ಅದರ ಧ್ಯೇಯೋದ್ದೇಶಗಳಿಗೆ ಅನುಸಾರವಾಗಿ ಮತ್ತು ಅದನ್ನು ಒಪ್ಪುವವರಿಗೆ ಮಾತ್ರ ಸದಸ್ಯತ್ವ ನೀಡುವುದು ಇಂದು ಅಗತ್ಯವಾಗಿದೆ.

4. ಸಮ್ಮೇಳನಗಳಲ್ಲಿ ಮಠಾಧೀಶರು ಮತ್ತು ರಾಜಕಾರಣಿಗಳು ಅನಗತ್ಯವಾಗಿ ಪ್ರವೇಶಿಸುವುದು ಸರಿಯಾದುದಲ್ಲ, ವಿವೇಕಿಗಳಾದ ಮಠಾಧೀಶರು ಸ್ವಯಂಪ್ರೇರಣೆಯಿಂದಲೇ ಇದನ್ನು ಅರ್ಥಮಾಡಿಕೊಳ್ಳಬೇಕು. ಸಮ್ಮೇಳನ ನಡೆಸುವವರಿಗೆ ಇಕ್ಕಟ್ಟು ತರಬಾರದು ಇದರಿಂದ ಮಾತ್ರ ನಿವಾರಣೆ ಮಾಡಬಹುದು.

ರಾಜಕಾರಣಿಗಳು ನಾವು ಹಣ ಕೊಟ್ಟದ್ದೇವೆ ಎಂಬ ಹಮ್ಮು-ಬಿಮ್ಮುಗಳನ್ನು ತೊರೆದು ಅನಗತ್ಯವಾಗಿ ತಲೆತೂರಿಸುವುದನ್ನು ನಿಲ್ಲಿಸಬೇಕು. ಪರಿಷತ್ತು ಆರ್ಥಿಕ ಸ್ವಾವಲಂಬನೆ ಹೊಂದಿದರೆ ಮಾತ್ರ ಇವರ ಅನಗತ್ಯ ಮೆರವಣಿಗೆ ನಿಲ್ಲಲು ಸಾಧ್ಯ.

5. ಇಂದು ನಾವು ತಾಂತ್ರಿಕವಾಗಿ ಅಭಿವೃದ್ಧಿಗೆ ಧಾವಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಕನ್ನಡ ಇತರ ಭಾಷೆಗಳ ಜೊತೆಗೆ ಸ್ಪರ್ಧೆ ನಡೆಸಲು, ಉದ್ಯೋಗ ಹೊಂದುವ ವ್ಯವಸ್ಥೆ ಕನ್ನಡ ಓದುವುದರಿಂದಾದರೆ ಮಾತ್ರ ಕನ್ನಡ ಓದು ಉಳಿದುಕೊಂಡೀತು.

ಬಹುತೇಕ ಕರ್ನಾಟಕದ ಸರ್ಕಾರ ತನ್ನಲ್ಲಿ ಉದ್ಯೋಗ ನೀಡಲು ಕನ್ನಡದಲ್ಲಿ ಓದು ಪಡೆದವರಿಗೆ ಮಾತ್ರ ಕೊಡಲು ಮುಂದಾದರೆ ಅದಕ್ಕೆ ಸಂಬಂಧಿಸಿದ ಆದೇಶ ಹೊರಡಿಸಿದರೆ ಮಾತ್ರ ಓದುವ ಪ್ರವೃತ್ತಿ ಮುಂದುವರಿಯುತ್ತದೆ.

ಬಿ.ಇ., ಎಂಬಿಬಿಎಸ್-ಮುಂತಾದ ಪದವಿಗಳಲ್ಲಿಯೂ ಕನ್ನಡದ ಓದನ್ನು ಕಡ್ಡಾಯಗೊಳಿಸಿದರೆ ಮಾತ್ರ ಯುವಪೀಳಿಗೆ ಕನ್ನ ಓದಲು ಮುಂದಾಗುತ್ತಾರೆ. ಯಾಂತ್ರಿಕ-ತಾಂತ್ರಿಕವಾಗಿ ಕನ್ನಡ ಬಳಸಲು ಸಾಧ್ಯವಾಗುವಂತೆ ಮಾಡುವ ಕೆಲಸ ಪರಿಷತ್ತು ಹಾಗು ಸರ್ಕಾರ ಜೊತೆಜೊತೆಯಾಗಿ ಮುನ್ನಡೆಸಿದರೆ ಮಾತ್ರ ಕನ್ನಡ ಭಾಷೆ ಉಳಿಸಿಕೊಳ್ಳಲು ಸಾಧ್ಯ.

ನಮ್ಮ ವಿದ್ಯಾ ಗುರುಗಳಾದ ದಿವಂಗತ ಕಿ.ರಂ. ನಾಗರಾಜ ಅವರ ಆಶಯದಂತೆ ಪರಿಷತ್ತಿನಲ್ಲಿ ಒಂದು ಶಾಶ್ವತ ನಿಘಂಟು ಕಚೇ ತೆರೆದುಕೊಳ್ಳುವಂತೆ ಮಾಡಬೇಕು. ಅಲ್ಲದೆ ಅದಕ್ಕೊಂದು ಸಮಗ್ರ ಅರಿವಿರುವ ಒಂದು ಸಮಿತಿ ಇರಬೇಕು. ಅಂತ ಸಮಿತಿಯಲ್ಲಿ ವೆಂಕಟಸುಬ್ಬಯ್ಯ, ಬಸವಾರಾಧ್ಯ, ಅ.ರಾ.ಮಿತ್ರ, ಎಂ.ಹೆಚ್. ಕೃಷ್ಣಯ್ಯ-ಈ ರೀತಿಯ ವ್ಯಕ್ತಿ- ಶಕ್ತಿಗಳ ಸಲ ಪಡೆದು ಹೊಸ ಹೊಸ ಪದಗಳು ಬಂದು ಕನ್ನಡಕ್ಕೆ ಸೇರಿಕೊಳ್ಳುವಂತೆ ನೋಡಿಕೊಳ್ಳಬೇಕು.


ಭಾಷೆಗೆ ಮಡಿ-ಮೈಲಿಗೆ ಇಲ್ಲ ಎಂಬುದನ್ನು ಸಮಗ್ರವಾಗಿ ತೋರ್ಪಡಿಸುವ ಕೆಲಸವನ್ನು ಮಾಡಬೇಕು. ಸಾಹಿತ್ಯ ರಚಿಸುವವರಿ ಆಸಕ್ತಿ ಇರುವವರಿಗೆ ಕಮ್ಮಟ ಮುಂತಾದವುಗಳನ್ನು ನಡೆಸಿ ಕನ್ನಡ-ಕನ್ನಡ ಸಾಹಿತ್ಯ ಬೆಳೆಯಲು, ಉಳಿಯಲು ವ್ಯವಸ್ಥೆ ಮಾಡಬೇಕಾಗಿ

6. ಯಾವುದೇ ಕೋಮುವಾದವಾಗಲಿ, ಜಾತಿವಾದವಾಗಲಿ, ಕಸಾಪದಲ್ಲಿ ಇರಬಾರದು. ಇಲ್ಲಿ ಕನ್ನಡ, ಕನ್ನಡಿಗ ಅಸ್ತಿತ್ವ ಪಡೆಯಲೇಬೇಕ ಜಾತ್ಯತೀತ ವ್ಯವಸ್ಥೆಯಲ್ಲಿ ಬದುಕುವ ನಾವು ಶಿಕ್ಷಣದಲ್ಲಿ ಕೇಸರೀಕರಣ ಆಗುವುದನ್ನು ಖಡಾಖಂಡಿತವಾಗಿ ತಿರಸ್ಕರಿಸಬೇಕು

ಕಸಾಪದಲ್ಲಿ ಕನ್ನಡ, ಕನ್ನಡಿಗ ಮಾತ್ರ ಮುಖ್ಯವೇ ಹೊರತು ಉಳಿದ ಯಾವುದೇ ವಿಚಾರಗಳಿಗೂ ಯಾವುದೇ ವ್ಯಕ್ತಿ ಶಕ್ತಿಯಾಗಲಿ ಮಹತ್ವ ಕೊಡಬಾರದೆಂಬುದು ನನ್ನ ಸ್ಪಷ್ಟ ನಿಲುವು.


ಡಾ. ರಾಜ್ ಬಾಮೈದ-ನಿರ್ಮಾಪಕ

ಸಾಲದ ಸುಳಿಯಲ್ಲಿ ಚಿನ್ನೇಗೌಡ



ಚಿನ್ನೇಗೌಡ

ಕನ್ನಡ ಸಿನಿಮಾ ರಂಗದ ಅತ್ಯಂತ ಹಿರಿಯರಲ್ಲಿ ಒಬ್ಬರಾಗಿರುವ ಎಸ್.ಎ. ಚಿನ್ನೇಗೌಡ ಹಣಕಾಸಿನ ಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ಇದುವರೆಗೂ ಹತ್ತಿರತ್ತಿರ ಇಪ್ಪತ್ತು ಸಿನಿಮಾ ನಿರ್ಮಿಸಿರುವ ಚಿನ್ನೇಗೌಡರು ಈಗ ಕೃಷ್ಣಭಟ್ ಎಂಬಾತನಿಗೆ ಒಂದೂವರೆ ಕೋಟಿ ರೂಪಾಯಿ ಸಾಲ ವಾಪಸ್ ಕೊಡಲಾಗದೆ ಪರದಾಡುವ ಸ್ಥಿತಿ ಬಂದಿದೆ. ಈಗ 'ಪಾಂಡುರಂಗ ನೀನೇ ಕಾಪಾಡಬೇಕು' ಎನ್ನುವ ಹತಾಶೆ ಚಿನ್ನೇಗೌಡರದು.



ಚಿನ್ನೇಗೌಡರು ವ್ಯವಹಾರದಲ್ಲಿ ಬಹಳ ಹುಷಾರಿ, ಬುದ್ಧಿವಂತರೆಂಬ ಹೆಸರಿದೆ. ಜೊತೆಗೆ ಸಭ್ಯ ನಿರ್ಮಾಪಕರೂ ಹೌದು. ಅವರ ಮಕ್ಕಳಾದ ವಿಜಯ ರಾಘವೇಂದ್ರ ಮತ್ತು ಶ್ರೀಮುರಳಿ ಕೂಡ ಹೀರೋಗಳಾಗಿ ಸಿನಿಮಾ ಇಂಡಸ್ಟ್ರಿಯಲ್ಲೇ ಇದ್ದಾರೆ.

ಆದರೆ ಸಿನಿಮಾ ನಿರ್ಮಾಣ ಎನ್ನುವುದು ಬೇರೆಲ್ಲಾ ಜೂಜುಗಳಿಗಿಂತ ರಿಸ್ಕಿ ಜೂಜು. ಕೋಟಿಗಟ್ಟಲೆ ಹಣ ಸುರಿದು ನಿರ್ಮಿಸುವ ಸಿನಿಮಾ ಬಾಕ್ಸ್ ಆಫೀಸ್ ಹಿಟ್ ಆಗದಿದ್ದರೆ ನಿರ್ಮಾಪಕರ ಬದುಕು ಛಿದ್ರವಾಗಿ ಬಿಡುತ್ತದೆ. ಚಿನ್ನೇಗೌಡರಿಗೆ ಅಂತಹ ಅನೇಕ ಪೆಟ್ಟುಗಳು ಬಿದ್ದಿವೆ. ಅದರಿಂದಾಗಿ ದೊಡ್ಡ ಮೊತ್ತದ ಸಾಲವೂ ಅವರ ಹೆಗಲೇರಿ ಕುಳಿತಿದೆ.

ಈ ವಿಚಾರ ಕೇಳಿದ ಮೇಲೆ "ಛೇ... ಛೇ... ಈ 'ಪಾಂಡುರಂಗ'ನಿಗೆ ಇಂತಹ ದುಃಸ್ಥಿತಿ ಬರಬಾರದಿತ್ತು. 'ಪಾಂಡುರಂಗ'ರ ಮನೆಯನ್ನು ಸಾಲಗಾರರು ಮುಟ್ಟುಗೋಲು ಹಾಕುತ್ತಾರಂತೆ ಹೌದೇ?" ಎಂದು ಗಾಂಧಿನಗರದ ಜನ ಬೇಜಾರು ಮಾಡಿಕೊಂಡಿರುವುದು ನಿಜ.

ಒಂದು ಕಾಲದಲ್ಲಿ ಗಾಂಧಿನಗರದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿ ಎಂದು ಗುರ್ತಿಸಲ್ಪಟ್ಟ 'ಪಾಂಡುರಂಗ' ಅವರ ನಿಜ ನಾಮಧೇಯ ಎಸ್.ಎ. ಚಿನ್ನೇಗೌಡರು. ಪಾರ್ವತಮ್ಮ ರಾಜ್‌ಕುಮಾರ್‌ರವರ ಸಹೋದರ. ಇವರು ಮಾತುಮಾತಿಗೆ 'ಪಾಂಡುರಂಗಾ' ಎನ್ನುತ್ತಿದ್ದುದರಿಂದ ಇವರಿಗೆ 'ಪಾಂಡುರಂಗ' ಎಂಬ ಅಡ್ಡ ಹೆಸರು ಅಂಟಿಕೊಂಡಿತ್ತು.


ಸಿನಿಮಾಗೆ ಕಾಲಿಡುವ ಮುನ್ನ ಇವರು ಊರಿನಲ್ಲಿ ಮೇಷ್ಟ್ರು ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ರಾಜ್‌ಕುಮಾರ್ ರವರ ಸಂಸ್ಥೆಯಾದ ವಜ್ರೇಶ್ವರಿಯನ್ನು ನೋಡಿಕೊಳ್ಳುವ ಕಾರಣಕ್ಕಾಗಿ ಮೇಷ್ಟ್ರ ಸ್ಥಾನಕ್ಕೆ ರಾಜೀನಾಮೆ ನೀಡಿ ಗಾಂಧಿನಗರದಲ್ಲಿ ಮ್ಯಾನೇಜರ್ ಆಗಿ ಕಾರ್ಯ ಆರಂಭಿಸಿದ್ದರು. ಇವೆಲ್ಲವೂ ತನ್ನ ಸಹೋದರಿ ಪಾರ್ವತಮ್ಮ ರಾಜ್‌ಕುಮಾರ್ ಅವರ ಒತ್ತಾಯದಿಂದ ಆಗಿದ್ದು. ಆಗಲೇ ದಿನದಿಂದ ದಿನಕ್ಕೆ ತನ್ನ ನಯವಾದ ಮಾತಿನ ಶೈಲಿ ಮತ್ತು ವ್ಯಾವಹಾರಿಕ ಚತುರತೆಯಿಂದ ಅವರು ವಜ್ರೇಶ್ವರಿ ಸಂಸ್ಥೆಯನ್ನು ಬೆಳೆಸುತ್ತಾ ಹೋದರು. ಹಾಗೆ ಆ ಸಂಸ್ಥೆ ಬೆಳೆಯುತ್ತಿದ್ದಂತೆಯೇ ವ್ಯಕ್ತಿಗತವಾಗಿ ಚಿನ್ನೇಗೌಡರು ಕೂಡ 'ಪಾಂಡುರಂಗ'ನಾಗಿ ದೈತ್ಯಾಕಾರವಾಗಿ ಬೆಳೆದುನಿಂತರು. ಅಂದಿನ ಸಂದರ್ಭದಲ್ಲಿ ಡಾ. ರಾಜ್‌ಕುಮಾರ್‌ರವರನ್ನು ನೋಡುವುದು ಎಷ್ಟು ಕಷ್ಟದ ಕೆಲಸವಾಗಿತ್ತೋ? 'ಪಾಂಡುರಂಗ'ರವರನ್ನು ನೋಡುವುದೂ ಕೂಡ ಅಷ್ಟೇ ಕಷ್ಟದ ವಿಷಯವಾಗಿತ್ತು.

ಆದರೆ ಮಾತಿನಲ್ಲಿ ಯಾರಿಗೂ ನೋಯಿಸದ ಚಿನ್ನೇಗೌಡರು ಸಾಧಾರಣವಾಗಿ ಯಾರಾದರೂ ಸಹಾಯ ಕೇಳಿ ಅವರ ಬಳಿಗೆ ಹೋದರೆ ಅವರು ಒಂದು ಮುಷ್ಟಿ ಹಣವನ್ನು ಕಣ್ಣುಮುಚ್ಚಿ ನೀಡುತ್ತಿದ್ದರೇ ವಿನಃ ಲೆಕ್ಕಮಾಡಿ ಎಂದೂ, ಯಾವತ್ತೂ ಹಣವನ್ನು ಕೊಟ್ಟವರೇ ಅಲ್ಲ. ಹಾಗೆಯೇ ಚಿತ್ರದ ಹಂಚಿಕೆ ವಿಷಯದಲ್ಲಿಯೂ ಕೂಡ 'ಪಾಂಡು ರಂಗ' ತನ್ನದೇ ಆದ ಕೆಲವು ಶೈಲಿಯನ್ನು ರೂಪಿಸಿಕೊಂಡಿದ್ದರು. ಡಾ. ರಾಜ್ ಕುಮಾರ್‌ರವರ ಚಿತ್ರಗಳು ಕರ್ನಾಟಕದ ಮೂಲೆಮೂಲೆಯಲ್ಲೂ ಪ್ರದರ್ಶನ ಗೊಳ್ಳುವಲ್ಲಿ ಇವರ ಶ್ರಮ ಇದ್ದೇ ಇತ್ತು. ಮುಖ್ಯವಾಗಿ ಕರ್ನಾಟಕದ ಬಹುತೇಕ ಎಲ್ಲ ಥಿಯೇಟರ್ ಮಾಲೀಕರ ಮತ್ತು ಹಂಚಿಕೆದಾರರ ಹೆಸರುಗಳು ಇವರ ಕೈಬೆರಳ ತುದಿಯಲ್ಲಿದ್ದವು. ಒಂದೇ ಮಾತಿನಲ್ಲಿ ಹೇಳುವುದಾದರೆ ಮೇಷ್ಟ್ರ ಕೆಲಸ ನಿರ್ವಹಿಸುತ್ತಿದ್ದ ಚಿನ್ನೇಗೌಡರು ತನ್ನ ವ್ಯಾವಹಾರಿಕ ಚತುರತೆಯಿಂದ ಯಶಸ್ವಿ ಮ್ಯಾನೇಜರ್ ಆಗಿ ರೂಪಾಂತರ ಗೊಂಡರು. ಹೀಗಾಗಿ ಚಿನ್ನೇಗೌಡರು ಮ್ಯಾನೇಜರ್ ಆದರೂ ಅವರಿಗೆ ಒಂದು ರೀತಿಯ ನಾಯಕ ನಟನಿಗೆ ಸಿಗಬೇಕಾದ ತಾರಾಮೌಲ್ಯ ಮತ್ತು ಗೌರವ, ಆದರಗಳು ದೊರೆಯ ಲಾರಂಭಿಸಿದವು.

ವಜ್ರೇಶ್ವರಿ ಸಂಸ್ಥೆಯ ಯಶಸ್ಸಿನಲ್ಲಿ ಚಿನ್ನೇಗೌಡರದ್ದೇ ಮಹತ್ತರವಾದ ಪಾತ್ರ ಎಂಬ ಮಾತು ಯಾವಾಗ ಗಾಂಧಿನಗರದ ಎಲ್ಲೆಡೆ ಕೇಳಿಬರಲಾರಂಭಿಸಿತೋ ಅವತ್ತೇ ಅವರ ಡೌನ್‌ಫಾಲ್ ಆರಂಭವಾಯಿತು. ಅಲ್ಲಿಂದಾಚೆಗೆ ರಾಜ್ ಕುಟುಂಬದಲ್ಲಿ ಏನೇನು ಕಸರತ್ತು ನಡೆಯಿತೋ ಗೊತ್ತಿಲ್ಲ. ಕೊನೆಗೊಂದು ದಿನ ವಜ್ರೇಶ್ವರಿ ಸಂಸ್ಥೆಯ ಮುಖ್ಯ ಆಧಾರಸ್ತಂಭ ಎನಿಸಿಕೊಂಡಿದ್ದ ಚಿನ್ನೇಗೌಡರು ಅಲ್ಲಿಂದ ಹೊರಬಂದರು.

ಆದರೂ ರಾಜ್ ಕುಟುಂಬದ ಜೊತೆಗಿನ ಅವರ ಸಂಬಂಧ ಹಳಸಿಹೋಗಿರಲಿಲ್ಲ. ಚಿನ್ನೇಗೌಡರು ತನ್ನದೇ ಸ್ವಂತ ನಿರ್ಮಾಣ ಮತ್ತು ಹಂಚಿಕೆ ವ್ಯವಸ್ಥೆಯ ಸೌಭಾಗ್ಯ ಪಿಕ್ಚರ್ಸ್ ಆರಂಭಿಸಿದರು. ಚಿನ್ನೇಗೌಡರು ಮತ್ತು ರಾಜ್ ಕುಟುಂಬದ ನಡುವಿನ ಸಂಬಂಧ ಹಳಸಿಹೋಗಿಲ್ಲ ಎಂಬುದಕ್ಕೆ ಉದಾಹರಣೆಯಾಗಿ 1987 ರಲ್ಲಿ ತನ್ನ ನಿರ್ಮಾಣ ಸಂಸ್ಥೆಯ ಮೊದಲ ಚಿತ್ರ ಮನ ಮೆಚ್ಚಿದ ಹುಡುಗಿಗೆ ಶಿವರಾಜ್‌ಕುಮಾರ್‌ರವರನ್ನು ನಾಯಕ ನಟನನ್ನಾಗಿ ಆಯ್ಕೆ ಮಾಡಿದರು. ಅಲ್ಲಿಂದಾಚೆಗೆ ಜಗ್ಗೇಶ್ ಅವರ ಎರಡುಮೂರು ಚಿತ್ರಗಳು, ಕುಮಾರ್ ಗೋವಿಂದ್‌ರವರು ನಟಿಸಿದ ಒಂದು ಚಿತ್ರ ಮತ್ತು ಎಸ್.ಪಿ.ಬಾಲಸುಬ್ರಹ್ಮಣ್ಯಂ ನಟಿಸಿದ ಮತ್ತೊಂದು ಚಿತ್ರ ತಮ್ಮ ಮಕ್ಕಳೇ ಹೀರೋಗಳಾದ ಸುಮಾರು 7ಕ್ಕೂ ಹೆಚ್ಚು ಚಿತ್ರಗಳನ್ನು ಚಿನ್ನೇಗೌಡರು ನಿರ್ಮಿಸಿದರು. ಆದರೆ ಈ 7ರಲ್ಲಿ ಯಾವೊಂದು ಚಿತ್ರವೂ ಅವರಿಗೆ ಲಾಭವನ್ನು ತಂದುಕೊಡಲಿಲ್ಲ. ಹೀಗಾಗಿ ಸಾಲದ ಹೊರೆ ಜಮೆಯಾಗುತ್ತಾ ಹೋಯಿತು.

ಇಂತಹ ಸಂಕಷ್ಟದ ಸಂದರ್ಭದಲ್ಲಿ ಕೂಡ 'ಪಾಂಡುರಂಗ' ತನ್ನ ತಾಳ್ಮೆಯನ್ನು ಕಳೆದುಕೊಂಡಿರಲಿಲ್ಲ. ಮರಳಿ ಪ್ರಯತ್ನವ ಮಾಡು ಎಂಬ ಸಿನಿಮಾ ಜಗತ್ತಿನ ಅನಿವಾರ್ಯ ಸೂತ್ರಕ್ಕೆ ಗಂಟುಬಿದ್ದ ಚಿನ್ನೇಗೌಡರು ಹೊಸ ಚಿತ್ರಗಳ ನಿರ್ಮಾಣ ಮಾಡುತ್ತ ಕೆಲವು ಚಿತ್ರಗಳನ್ನು ಹಂಚಿಕೆ ಮಾಡುತ್ತ ತನ್ನ ಅದೃಷ್ಟವನ್ನು ಪರೀಕ್ಷಿಸುತ್ತಿದ್ದರು. ಬಾಲನಟನಾಗಿ 'ಚಿನ್ನಾರಿಮುತ್ತ' ಚಿತ್ರದಲ್ಲಿ ಮಿಂಚಿದ್ದ ಚಿನ್ನೇಗೌಡರ ಸುಪುತ್ರ ವಿಜಯ ರಾಘವೇಂದ್ರ ನಿರ್ದೇಶಕ ಮಹೇಂದರ್ ಅವರ 'ನಿನಗಾಗಿ' ಚಿತ್ರದ ಮುಖಾಂತರ 1993 ರಲ್ಲಿ ನಾಯಕನಟನಾಗಿ ಬಡ್ತಿ ಪಡೆದರು. ಆ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸನ್ನು ಕಂಡಿತು. ಆಗಲೇ ಮೊದಲ ಬಾರಿಗೆ ಚಿನ್ನೇಗೌಡರ ಮುಖದಲ್ಲಿ ಒಂದು ಸಣ್ಣ ಮಂದಹಾಸ ಕಾಣಿಸಿಕೊಂಡದ್ದು. ತಾನು ಮಾಡಿದ ಸಾಲವನ್ನೆಲ್ಲ ತೀರಿಸಲು ನಮ್ಮ ಮನೆಯಲ್ಲೇ ಒಬ್ಬ ನಾಯಕ ನಟ ಹುಟ್ಟಿಕೊಂಡನಲ್ಲ ಎಂದು ತನ್ನ ಆಪ್ತರಲ್ಲಿ ಸಂತಸವನ್ನು ಹಂಚಿಕೊಂಡಿದ್ದರು.



ಅವರು ಅಂದುಕೊಂಡಂತೆ ವಿಜಯರಾಘವೇಂದ್ರ ದಿನದಿಂದ ದಿನಕ್ಕೆ ಚಿತ್ರದಿಂದ ಚಿತ್ರಕ್ಕೆ ಜನಪ್ರಿಯ ನಾಗುತ್ತ ಉದ್ಯಮದಲ್ಲಿ ಒಳ್ಳೆಯ ನಾಯಕ ನಟ ಮತ್ತು ಸಂಭಾವಿತ ಎಂಬ ಖ್ಯಾತಿ ಪಡೆದರು. ಬೇರೆ ನಾಯಕ ನಟರುಗಳಂತೆ ದೊಡ್ಡ ಮೊತ್ತದ ಸಂಭಾವನೆ ಈತನಿಗೆ ಸಿಗದಿದ್ದರೂ, ವಿಜಯ ರಾಘವೇಂದ್ರನ ಕಾಲ್‌ಶೀಟ್‌ಗಾಗಿ ನಿರ್ಮಾಪಕರು ಮುಗಿಬೀಳದಿದ್ದರೂ ಆತ ಅವಕಾಶವಿಲ್ಲದೇ ಎಂದೂ ಕೈಚೆಲ್ಲಿ ಕುಳಿತವನೇ ಅಲ್ಲ. ಪ್ರತಿವರ್ಷ ಎರಡು, ಮೂರರಂತೆ ಸಿನಿಮಾ ಅವಕಾಶ ಸಿಕ್ಕಿವೆ. 2008 ರಲ್ಲಿ ಮಸ್ತ್ ಮಜಾ ಮಾಡಿ, ಮಿಂಚಿನ ಓಟ, ಬೆಳದಿಂಗಳಾಗಿ ಬಾ.... ಹೀಗೆ ನಾಲ್ಕು ಸಿನಿಮಾ ರಿಲೀಸಾಗಿದ್ದವು. 2009 ರಲ್ಲಿ ಕಾರಂಜಿ, ಕಿಲಾಡಿ ಕೃಷ್ಣ ಗೋಲ್‌ಮಾಲ್ ಸೇರಿದಂತೆ ಒಟ್ಟು 6 ಚಿತ್ರಗಳಲ್ಲಿ ವಿಜಯ್ ಹೀರೋ ಆಗಿದ್ದ. ಈ ಸಿನಿಮಾಗಳು ಹಿಟ್ ಆಗದಿದ್ದರೂ ವಿಜಯ ರಾಘವೇಂದ್ರ ನಟನೆಯಿಂದ ಸಂಪಾದಿಸಿದ ಹಣವನ್ನೆಲ್ಲ ಅಪ್ಪ ಮಾಡಿದ್ದ ಸಾಲದ ಗಂಟನ್ನು ಕರಗಿಸುತ್ತಾ ತಂದೆಗೆ ತಕ್ಕ ಮಗ ಎಂಬ ಹೆಸರನ್ನು ಗಳಿಸಿದರು. ಅದೇ ಸಂದರ್ಭದಲ್ಲಿ ಕುಮಾರಸ್ವಾಮಿ ನಿರ್ಮಾಣದ, ಎಸ್.ನಾರಾಯಣ್ ನಿರ್ದೇಶನದ 'ಚಂದ್ರಚಕೋರಿ' ಚಿತ್ರದ ಮುಖಾಂತರ ಚಿನ್ನೇಗೌಡರ ಎರಡನೇ ಪುತ್ರ ಮುರಳಿ 2003 ರಲ್ಲಿ ನಾಯಕನಟನಾಗಿ ಕಾಣಿಸಿಕೊಂಡ. ಈ ಚಿತ್ರ ಕೂಡ ರಜತಮಹೋತ್ಸವ ಆಚರಿಸಿ ಬಿಡುಗಡೆಯಾದಲ್ಲೆಲ್ಲ ಬಾಕ್ಸ್ ಆಫೀಸ್‌ನಲ್ಲಿ ಹಣವನ್ನು ಕೊಳ್ಳೆ ಹೊಡೆಯಿತು. ಮೊದಲ ಚಿತ್ರಕ್ಕೇ ಮುರಳಿಗೆ ಎಲ್ಲಿಲ್ಲದ ತಾರಾಮೌಲ್ಯ ದೊರಕಿತು.

ಇಬ್ಬರು ನಾಯಕ ನಟರ ಯಶಸ್ಸು ತಂದೆ ಚಿನ್ನೇಗೌಡರಿಗೂ ಗಾಂಧಿನಗರದಲ್ಲಿ ಕಳೆದುಹೋದ ತಾರಾಮೌಲ್ಯವನ್ನು ತಂದುಕೊಟ್ಟಿತು. ಈ ಇಬ್ಬರು ಹುಡುಗರು ಅಪ್ಪ ಮಾಡಿದ್ದ ಸಾಲವನ್ನು ತೀರಿಸುತ್ತಾರೆ ಎಂದು ಅವರ ಹಿತೈಷಿಗಳು ಮಾತನಾಡಲಾರಂಭಿಸಿದರು. ಆದರೆ ದುರದೃಷ್ಟವಶಾತ್ ಇವರಿಬ್ಬರೂ ಆರಕ್ಕೇರದ, ಮೂರಕ್ಕಿಳಿಯದ ನಾಯಕನಟರೆಂದು ಬ್ರಾಂಡ್ ಆದರು. ಇವರ ನಂತರ ಬಂದ ಹೀರೋಗಳು ಕೂಡ ಕೋಟಿ ಕೋಟಿ ಸಂಭಾವನೆಯನ್ನು ಪಡೆಯುವ ಎತ್ತರಕ್ಕೆ ಬೆಳೆದರೂ ಇವರಿಬ್ಬರು ಮಾತ್ರ ಅಂತಹ ಎತ್ತರಕ್ಕೆ ಬೆಳೆಯಲು ಸಾಧ್ಯವಾಗಲಿಲ್ಲ. ಹೀಗಾಗಿ ಚಿನ್ನೇಗೌಡರು ಮಾಡಿದ ಸಾಲದ ಹೊರೆ ನಿರೀಕ್ಷಿಸಿದಷ್ಟು ಬೇಗ ಕರಗಲಿಲ್ಲ. ಈ ಮಧ್ಯೆ ವಿಜಯರಾಘವೇಂದ್ರ-ರಮ್ಯಳನ್ನು ಹಾಕಿಕೊಂಡು ಎಸ್.ನಾರಾಯಣ್ ನಿರ್ದೇಶನದಲ್ಲಿ ಸ್ವತಃ ಚಿನ್ನೇಗೌಡರೇ 'ಸೇವಂತಿ ಸೇವಂತಿ' ಎಂಬ ಚಿತ್ರ ನಿರ್ಮಿಸಿ ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷೆಗೆ ಕೈಹಾಕಿದರು. ಈ ಚಿತ್ರ ವಿಮರ್ಶಕರಿಂದ ಮೆಚ್ಚುಗೆ ಪಡೆದರೂ ಬಾಕ್ಸ್ ಆಫೀಸ್‌ನಲ್ಲಿ ಮಾತ್ರ ನಿರೀಕ್ಷಿಸಿದಷ್ಟು ಹಣ ಗಳಿಸಲಿಲ್ಲ. ಅದಾದ ನಂತರ ಮತ್ತೆ ಚಿನ್ನೇಗೌಡರು ಚಿತ್ರ ನಿರ್ಮಾಣದ ದುಸ್ಸಾಹಸಕ್ಕೆ ಮುಂದಾಗಲೇ ಇಲ್ಲ.

ಗಾಂಧಿನಗರದಲ್ಲಿ ಕಳೆದು ಹೋದ ಹಣವನ್ನು ಮತ್ತೆ ಪಡೆಯಲು ಇರುವುದು ಒಂದೇ ದಾರಿ. ಮತ್ತೆ ಮತ್ತೆ ಚಿತ್ರ ಮಾಡಿ ಗೆಲ್ಲುವತನಕ ಪ್ರಯತ್ನಿಸುವುದು. ಆದರೆ ಚಿನ್ನೇಗೌಡರು ಚಿತ್ರ ನಿರ್ಮಾಣದ ಬದಲು ಮಕ್ಕಳ ಸಂಭಾವನೆಯನ್ನು ನಂಬಿಕೊಂಡು ಕುಳಿತುಕೊಂಡರು.

ಗಾಂಧಿನಗರ ಎಂಬ ಮಾಯಾಲೋಕದಲ್ಲಿ ಪವಾಡಗಳೂ ನಡೆಯುತ್ತವೆ, ದುರಂತಗಳೂ ನಡೆಯುತ್ತವೆ. ಈ ಎರಡು ಘಟನೆಗಳಿಗೂ ಲಾಜಿಕ್ ಇರುವುದಿಲ್ಲ. ಕಾರಣಗಳಂತೂ ಸಿಗುವುದೇ ಇಲ್ಲ. ಈ ಕಾರಣಕ್ಕೇ ಸಿನಿಮಾ ಎಂಬ ಈ ಥಳಕು -ಬಳುಕಿನ ಲೋಕಕ್ಕೆ ಮಾಯಾಲೋಕ ಎಂದು ಹೇಳುವುದು. ಇಂತಹ ಮಾಯಾಲೋಕದಲ್ಲಿ ವಿಜೃಂಭಣೆ ಮತ್ತು ಸಂತೋಷ ಸಂಭ್ರಮದ ಉತ್ತುಂಗ ಸ್ಥಾನವನ್ನು ಅಲಂಕರಿಸಿದ ವ್ಯಕ್ತಿಗಳಲ್ಲಿ ಎಸ್.ಎ . ಚಿನ್ನೇಗೌಡರೂ ಒಬ್ಬರು.

ಇದು ಚಿನ್ನೇಗೌಡ ಎಂಬ ಮಾಜಿ ಮೇಷ್ಟ್ರು ಮತ್ತು ಹಾಲಿ ನಿರ್ಮಾಪಕರ ಜೀವನದ ಏರಿಳಿತದ ಒಂದು ಸಣ್ಣ ಬಯೋಡೇಟಾ. ಒಂದು ಕಾಲದಲ್ಲಿ ಕೋಟಿ ಕೋಟಿ ಹಣದ ಜೊತೆ ಚೆಲ್ಲಾಟವಾಡುತ್ತಿದ್ದ ಚಿನ್ನೇಗೌಡರು ಇಂದು ಕೇವಲ ಒಂದೂವರೆ ಕೋಟಿ ರೂ.ಗಳಿಗಾಗಿ ತನ್ನ ಮನೆಯನ್ನು ಮಾರಾಟ ಮಾಡುವ ದುಃಸ್ಥಿತಿ ತಲುಪಿದ್ದಾರೆ. ತನ್ನ ಮನೆಯನ್ನು ಅಡವಿಟ್ಟು ಕೃಷ್ಣಭಟ್ ಎಂಬ ವ್ಯಕ್ತಿಯಿಂದ ಇವರು ಒಂದೂವರೆ ಕೋಟಿ ರೂ. ಸಾಲ ಪಡೆದಿದ್ದರು. ನಿಗದಿತ ಸಮಯಕ್ಕೆ ಹಣವನ್ನು ಮರುಪಾವತಿ ಮಾಡದಿದ್ದುದರಿಂದ ಕೃಷ್ಣಭಟ್ ಎಂಬ ವ್ಯಕ್ತಿ ನೇರವಾಗಿ ಟಿ.ವಿ. ಚಾನಲ್‌ಗೆ ಹೋಗಿ ದಾಖಲೆ ಪತ್ರಗಳನ್ನು ಪ್ರದರ್ಶಿಸಿ ಚಿನ್ನೇಗೌಡರ ಮನೆಯನ್ನು ವಶಪಡಿ ಸಲು ಹೊರಟರು. ಆಗಲೇ ಹೊರ ಪ್ರಪಂಚಕ್ಕೆ ಚಿನ್ನೇಗೌಡರು ಎಷ್ಟೊಂದು ಕಷ್ಟದಲ್ಲಿದ್ದಾರೆಂಬುದು ಗೊತ್ತಾದದ್ದು. ಆದರೆ ಮೆಚ್ಚಬೇಕಾದದ ವಿಷಯ ಏನೆಂದರೆ ಚಿನ್ನೇಗೌಡರು ಮತ್ತು ಅವರಿಬ್ಬರ ಮಕ್ಕಳು ಆ ಚಾನಲ್‌ನ ನೇರ ಪ್ರಸಾರದಲ್ಲಿ ಮಾತನಾಡಿ "ನಾವು ಸಾಲ ತೆಗೆದುಕೊಂಡಿದ್ದು ನಿಜ. ಅದನ್ನು ನಿಗದಿತ ಸಮಯಕ್ಕೆ ಕೊಡಬೇಕಾಗಿತ್ತು. ನಮ್ಮ ಕಡೆಯಿಂದ ತಪ್ಪಾಗಿದೆ. ಖಂಡಿತವಾಗಿಯೂ ಇನ್ನು ಕೆಲವೇ ದಿನಗಳಲ್ಲಿ ಆ ಹಣವನ್ನು ಹಿಂದಿರುಗಿಸುತ್ತೇವೆ" ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡು ತಮ್ಮ ಹಿರಿಮೆಯನ್ನು ಪ್ರದರ್ಶಿಸಿದ್ದು. ಗಾಂಧಿನಗರದಲ್ಲಿ ಈ ತರಹ ಸಾಲ ಮಾಡಿ ಅದನ್ನು ಒಪ್ಪಿಕೊಳ್ಳದೇ ಕಣ್ಣುತಪ್ಪಿಸಿ ಓಡಾಡುವ ನೂರಾರು ನಿರ್ಮಾಪಕರುಗಳ ದೊಡ್ಡ ಇತಿಹಾಸವೇ ಇರುವಾಗ ಚಿನ್ನೇಗೌಡರು ಮಾತ್ರ ಸಾಲದಲ್ಲೂ ತನ್ನ ಪ್ರಾಮಾಣಿಕತೆಯನ್ನು ಮೆರೆದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅದೇನೇ ಇರಲಿ, ಚಿನ್ನೇಗೌಡರು ಮತ್ತವರ ತಾರಾಪುತ್ರರು ಈ ಸಾಲವನ್ನು ಆದಷ್ಟು ಶೀಘ್ರದಲ್ಲಿ ಮರುಪಾವತಿಸಿ ಮತ್ತೆ ಯಶಸ್ಸಿನ ರುಚಿಯನ್ನು ಕಾಣಲಿ.

• ಶೆಟ್ಟಿ



ಮುರಳಿಯ ಮದುವೆಯ ಸಂದರ್ಭದಲ್ಲಿ....

ಪಿಯುಸಿ ಹಗರಣ: ಇಲಾಖೆಯಲ್ಲೇ ವಂಚಕರು


ರಶ್ಮಿ ಮಹೇಶ್

ಹೇಗೂ ಹಗರಣವನ್ನು ಮುಚ್ಚಿಹಾಕಲು ಇನ್ನು ಸಾಧ್ಯವೇ ಇಲ್ಲವೆಂಬುದು ನಿಚ್ಚಳವಾದಾಗ ಸರ್ಕಾರ ಸಿಐಡಿ ತನಿಖೆಗೆ ಆದೇಶಿಸಿದೆ. ಅಪರಾಧಿಗಳನ್ನು ಯಾವ ಮೂಲೆಯಲ್ಲಿದ್ದರೂ ಪತ್ತೆ ಹಚ್ಚುವ ಇಚ್ಛಾಶಕ್ತಿ ಹೊಂದಿರುವ ಅಧಿಕಾರಿಯಾದ ಆರ್.ಕೆ. ದತ್ತ ತನಿಖೆಯ ನೇತೃತ್ವ ವಹಿಸಿದ್ದಾರೆ. ಆದರೆ ಸರ್ಕಾರ ಈ ತನಿಖೆಯನ್ನು ಯಾವ ದಿಕ್ಕಿಗೆ ದೂಡುತ್ತದೆಂದು ಈಗಲೇ ಹೇಳಲಾಗದು. ಯಾಕೆಂದರೆ ಎಂಥದೇ ತನಿಖೆಯನ್ನು ಹಳ್ಳ ಹಿಡಿಸಿ ಅಪರಾಧಿಗಳನ್ನು ರಕ್ಷಿಸುವ ವಿಶೇಷ ಪ್ರತಿಭೆ ಬಿಜೆಪಿ ಸರ್ಕಾರಕ್ಕಿದೆ ಎಂಬುದು ಕಳೆದ ನಾಲ್ಕು ವರ್ಷಗಳಿಂದಲೂ ಜಗಜ್ಜಾಹೀರಾಗಿರುವ ಸಂಗತಿ.

ಕರ್ನಾಟಕದಲ್ಲಿ ಈಗ ಹಗರಣಗಳ ಪರ್ವಕಾಲ. ಹಗರಣಗಳಲ್ಲಿ ಮುಳುಗಿ, ಅವುಗಳಿಂದ ತಪ್ಪಿಸಿಕೊಳ್ಳಲು ಹೆಣಗುತ್ತಿರುವ ಅಧಿಕಾರಸ್ಥರಿಗೆ ಸರ್ಕಾರ ನಡೆಸುವ ಯೋಗ್ಯತೆಯಿಲ್ಲ ಎಂಬುದು ಹೇಗೂ ಗೊತ್ತಿರುವ ಸಂಗತಿ. ಆದರೆ ಕನಿಷ್ಠ ಪಕ್ಷ ಸರಿಯಾಗಿ ಪರೀಕ್ಷೆಗಳನ್ನೂ ನಡೆಸುವ ಯೋಗ್ಯತೆ ಇಲ್ಲ ಅಂದರೆ ಏನು ಹೇಳಬೇಕು? ಈಗ ಪಿಯುಸಿ ಪ್ರಶ್ನಪತ್ರಿಕೆ ಬಯಲಾಗುವ ಮೂಲಕ ಇವರ ಸಾಧನೆಯ ಪಟ್ಟಿಗೆ ಮತ್ತೊಂದು ಹಗರಣ ಸೇರ್ಪಡೆಯಾಗಿದೆ. ಆದರೆ ಅದಕ್ಕೆ ಬಲಿಯಾಗಿದ್ದು ಮಾತ್ರ ಲಕ್ಷಾಂತರ ಅಮಾಯಕ ವಿದ್ಯಾರ್ಥಿಗಳ ಭವಿಷ್ಯ.


ನಾಲಾಯಕ್ ಮಂತ್ರಿ ಕಾಗೇರಿಯ ನಿತ್ಯ ಪ್ರಲಾಪವೇನೆಂದರೆ ಈ ಹಗರಣದ ಹಿಂದೆ ಕಾಣದ ಕೈಗಳಿವೆ ಎಂಬುದು. ಆದರೆ ಇಂಥಾ ಹಗರಣ ಅಂತರಿಕ್ಷದಲ್ಲಿ ನಡೆಯೋದಿಲ್ಲ, ಈ ಎಲ್ಲ ಅವಾಂತರಕ್ಕೆ ಮೂಲಕಾರಣ ಪಿಯುಸಿ ಮಂಡಳಿಯೇ ಎಂಬುದು ಮೇಲ್ನೋಟಕ್ಕೆ ಕಂಡುಬರುವ ಸತ್ಯ. ಲಾಗಾಯ್ತಿನಿಂದಲೂ ಗೂಟ ಹೊಡೆದಂತೆ ಕೂತಿರುವ ಹಲವಾರು ಭ್ರಷ್ಟ ಅಧಿಕಾರಿಗಳ ದೊಡ್ಡ ದಂಡೇ ಪಿಯುಸಿ ಮಂಡಳಿಯಲ್ಲಿದೆ. ಈ ಅಧಿಕಾರಿಗಳಿಗೆ ಖಾಸಗಿ ಕಾಲೇಜುಗಳೊಂದಿಗೆ ಗಳಸ್ಯ ಕಂಠಸ್ಯ ಸಂಬಂಧವಿರುವುದು ಗುಟ್ಟೇನಲ್ಲ, ಕೆಲವು ಉದಾಹರಣೆ ನೋಡಿ. ಮಂಜುನಾಥ್ ಎಂಬ ವ್ಯಕ್ತಿ ಕಳೆದ 25 ವರ್ಷಗಳ ಹಿಂದೆ ಗುಮಾಸ್ತನಾಗಿ ನೌಕರಿಗೆ ಸೇರಿ ಇಂದು ಸೆಕ್ಷನ್ ಆಫೀಸರ್ ಆಗಿದ್ದಾನೆ. ಪ್ರಿನ್ಸಿಪಾಲರ ವರ್ಗಾವಣೆಯ ಜವಾಬ್ದಾರಿ ಈತನದು. ತುಳಸೀಕುಮಾರ್ ಎಂಬಾತ 1995ರಿಂದಲೂ ಪರೀಕ್ಷಾ ವಿಭಾಗದ ಮುಖ್ಯಸ್ಥ. ಬಾಲಕೃಷ್ಣೇಗೌಡ ಎಂಬಾತ ಮಂಡಳಿಯಲ್ಲಿ ತಳವೂರಿ ಸುಮಾರು 20 ವರ್ಷವಾಗಿದೆ. ಜಂಟಿ ನಿರ್ದೇಶಕರ ಹುದ್ದೆಯಲ್ಲಿರುವ ನರಸಿಂಹ ನಾಯಕ್ ಎಂಬಾತ ಖಾಸಗಿ ಕಾಲೇಜುಗಳ ಉಸ್ತುವಾರಿ ವಹಿಸಿದ್ದಾನೆ. ಈ ಪಟ್ಟಿ ಹೀಗೇ ಮುಂದುವರೆಯುತ್ತದೆ.

ಹೀಗೆ ಅಧಿಕಾರಿಗಳು ಒಂದೇ ಸರ್ಕಾರಿ ಹುದ್ದೆಯಲ್ಲಿ ದಶಕಗಟ್ಟಲೆ ತಳವೂರಿ ಕೂತರೆ ಏನಾಗುತ್ತದೆ ಎಂಬುದಕ್ಕೆ ಈಗಿನ ಹಗರಣವೇ ಸಾಕ್ಷಿ. ಈ ಹಗರಣಕ್ಕೆ ಕೆಲವು ಅಧಿಕಾರಿಗಳ ಅದಕ್ಷತೆ, ನಿರ್ಲಕ್ಷ್ಯ ಕಾರಣವಾಗಿದ್ದರೆ, ಮತ್ತೆ ಕೆಲವರು ನೇರವಾಗಿ ಭಾಗಿಯಾಗಿರುವ ಸಾಧ್ಯತೆ ನಿಚ್ಚಳವಾಗಿದೆ.

ಮೊದಲಿಗೆ ಈ ಹಗರಣ ಬಯಲಿಗೆ ಬಂದದ್ದು ಕೋಲಾರ ಭಾಗದಿಂದ, ಮಾರ್ಚ್ 19 ರಂದು ಮಾಲೂರು, ಮುಳಬಾಗಿಲು, ಚಿಕ್ಕಬಳ್ಳಾಪುರ, ಚಿಂತಾಮಣಿಗಳಲ್ಲಿ ಗಣಿತದ ಪ್ರಶ್ನ ಪತ್ರಿಕೆಗಳು ಪರೀಕ್ಷೆಗೆ ಮುಂಚಿನ ದಿನವೇ ಬಹಿರಂಗವಾಗಿ ಮಾರಾಟವಾದವು. ಒಂದು ಪತ್ರಿಕೆಗೆ 5,000 ರೂಪಾಯಿಯಿಂದ 20,000 ರೂಪಾಯಿವರೆಗೆ ಬಂಪರ್ ರೇಟು. ಕೆಲವು ಕಾಲೇಜುಗಳ ಆಡಳಿತ ಮಂಡಳಿಯವರು ಪ್ರಶ್ನ ಪತ್ರಿಕೆಯನ್ನು ತಮ್ಮ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚುವ ದೊಡ್ಡ ಮನಸ್ಸು ಮಾಡಿದರು. ಕೆಲವು ಉದಾರ ಮನಸ್ಸಿನ ವಿದ್ಯಾರ್ಥಿಗಳೂ ಸಹ ತಾವು ಕೊಂಡುತಂದ ಪತ್ರಿಕೆಗಳನ್ನು ತಮ್ಮ ಗೆಳೆಯರಿಗೆ ಹಂಚಿದರು. ಕೆಲವು ಉಪನ್ಯಾಸಕರೂ ಸಹಾ ಪ್ರಶ್ನಪತ್ರಿಕೆ ಹಂಚುವ ಪುಣ್ಯ ಕಾರ್ಯದಲ್ಲಿ ಭಾಗಿಯಾದರು.

ಅದೇದಿನ ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಕೈಬರಹದಲ್ಲಿದ್ದ ಪ್ರಶ್ನ ಪತ್ರಿಕೆಗಳನ್ನು ಮಾರುತ್ತಿದ್ದ ಸೇವೆಯಿಂದ ವಜಾಗೊಂಡಿದ್ದ ವೀರಮಲ್ಲಯ್ಯ ಎಂಬ ಶಾಲಾ ಶಿಕ್ಷಕ ಮತ್ತು ಇನ್ನೊಬ್ಬ ವಿದ್ಯಾರ್ಥಿಯನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದರು. ಅವರು ಮಾರುತ್ತಿದ್ದ ಪ್ರಶ್ನೆಗಳು ಶೇ.70-80 ಭಾಗ ಒರಿಜಿನಲ್ ಪ್ರಶ್ನೆಗಳಾಗಿವೆ ಎಂಬುದನ್ನು ಗುಬ್ಬಿ ಕಾಲೇಜಿನ ಪ್ರಾಂಶುಪಾಲರು ಖಚಿತಪಡಿಸಿದರು. ಅದೇ ದಿನ ಬೆಂಗಳೂರಿನ ಕೆಲವು ಏರಿಯಾಗಳಲ್ಲಿ ಪ್ರಶ್ನ ಪತ್ರಿಕೆಗಳು ಮಾರಾಟವಾದ ಸುದ್ದಿ ಬಂತು.

ಈ ಎಲ್ಲಾ ಸುದ್ದಿಗಳು ಸುದ್ದಿ ವಾಹಿನಿಗಳಲ್ಲಿ ಬಿಸಿಬಿಸಿಯಾಗಿ ಪ್ರಸಾರವಾಗುತ್ತಿದ್ದರೂ ಶಿಕ್ಷಣ ಸಚಿವ



ಕಾಗೇರಿ ಮತ್ತು ರಶ್ಮಿ ಮಹೇಶ್

ಕಾಗೇರಿಯಾಗಲಿ, ಪಿಯುಸಿ ಮಂಡಳಿಯ ನಿರ್ದೇಶಕಿ ರಶ್ಮಿ ಮಹೇಶ್ ಆಗಲಿ ಸ್ವಲ್ಪವೂ ತಲೆಕೆಡಿಸಿಕೊಳ್ಳಲಿಲ್ಲ; ಪರೀಕ್ಷೆಗಳನ್ನು ತಾವು ಬಹಳ ಕಟ್ಟುನಿಟ್ಟಾಗಿ ನಡೆಸುತ್ತಿರುವುದರಿಂದ ಅಂಥದಕ್ಕೆಲ್ಲಾ ಅವಕಾಶವೇ ಇಲ್ಲವೆಂದುಬಿಟ್ಟರು. ಮಾಧ್ಯಮಗಳು ಊಹಾಪೋಹದ ಸುದ್ದಿ ಹರಡುತ್ತಿದ್ದಾರೆ ಎಂಬುದೇ ಅವರ ನಿಲುವಾಗಿತ್ತು. ದುರಂತವೆಂದರೆ ಆಗಲೇ ಟಿವಿ ಚಾನೆಲ್‌ಗಳು ಪ್ರಶ್ನ ಪತ್ರಿಕೆಗಳ ಸ್ಕ್ಯಾ?ನ್ ಮಾಡಿದ ಪ್ರತಿಗಳನ್ನು ನೇರವಾಗಿ ಪ್ರಸಾರ ಮಾಡುತ್ತಿದ್ದರು.

ಪ್ರಶ್ನ ಪತ್ರಿಕೆ ಬಯಲಾಗಿರುವ ಬಗ್ಗೆ ರಾಜ್ಯಕ್ಕೆ ರಾಜ್ಯವೇ ಎದ್ದು ಕೂಗುತ್ತಿದ್ದರೆ ಅದೆಲ್ಲಾ ಸುಳ್ಳು ಎಂದು ವಾದಿಸುತ್ತಿದ್ದವರು ಪ್ರಶ್ನೆಪತ್ರಿಕೆಗಳ ಸ್ಕ್ಯಾನ್ ಮಾಡಿದ ಪತ್ರಿಕೆಗಳನ್ನು ಕಣ್ಣಾರೆ ಕಂಡ ನಂತರವೇ ಅವರ ಪಂಚೇಂದ್ರಿಯಗಳು ಜಾಗೃತಗೊಂಡಿದ್ದು. ಅಂತೂಇಂತು ಗಣಿತ ಪರೀಕ್ಷೆಯನ್ನು ಮುಂದೂಡುವ ನಿರ್ಣಯ ತೆಗೆದುಕೊಳ್ಳುತ್ತಿದ್ದಂತೆ ಮರುದಿನ ಭೌತಶಾಸ್ತ್ರದ ಪತ್ರಿಕೆಗಳಿಗೆ ಇದೇ ಗತಿಯಾಗಿರುವುದು ಬೆಳಕಿಗೆ ಬಂತು. ನಂತರ ರಾಸಾಯನ ಶಾಸ್ತ್ರ ಹಾಗೂ ಜೀವ ಶಾಸ್ತ್ರ ಪತ್ರಿಕೆಗಳನ್ನೂ ಬೀದಿಯಲ್ಲಿ ಮಾರಾಟವಾದವು. ಕೆಲವು ಟುಟೋರಿಯಲ್‌ಗಳು ಈ ಪ್ರಶ್ನೆಗಳಿಗೆ ಉತ್ತರವನ್ನು ಬೋಧಿಸಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡವು. ಇಷ್ಟೆಲ್ಲಾ ನಡೆಯುತ್ತಿದ್ದರೂ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಸಂಭ್ರಮಿಸುತ್ತಿದ್ದ ಇಲಾಖೆಯ ಮಂತ್ರಿ ಮತ್ತು ಪಿಯು ಮಂಡಳಿಯ ನಿರ್ದೇಶಕಿ ರಶ್ಮಿ ಮಹೇಶ್ ಅವರು ಕೊನೆಗೆ ಎಚ್ಚೆತ್ತುಕೊಂಡು ಪರೀಕ್ಷೆಗಳನ್ನು ಮುಂದೂಡಿ ಆದೇಶ ಹೊರ ಡಿಸಿದ್ದಾರೆ.

ಇಲಾಖೆಯ ಸೂಚನೆಯ ಮೇರೆಗೆ ರಂಗಕ್ಕಿಳಿದ ಪೊಲೀಸರು ಈಗಾಗಲೇ ಸುಮಾರು 14 ಮಂದಿ ಉಪನ್ಯಾಸಕರನ್ನೂ ಒಳಗೊಂಡು 20ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿದ್ದಾರೆ. ಪ್ರಾಥಮಿಕ ತನಿಖೆಯಿಂದ ಹೊರಬಂದ ಸತ್ಯವೇನೆಂದರೆ ರಾಜ್ಯದ ನಾನಾ ಭಾಗಗಳಲ್ಲಿ ಪತ್ರಿಕೆ ಬಯಲಾಗಿದ್ದರೂ ಕೂಡ ಎಲ್ಲರಿಗೂ ಬೆಂಗಳೂರು ಮೂಲದಿಂದಲೇ ಸರಬರಾಜಾಗಿರುವ ಅಂಶ ಹೊರಬಿದ್ದಿದೆ. ಈಗಾಗಲೇ ಕೆಲವು ಖಾಸಗಿ ಕಾಲೇಜುಗಳಿಗೆ ನೋಟೀಸ್ ಜಾರಿಯಾಗಿದ್ದು ಅವುಗಳ ಮಾನ್ಯತೆ ರದ್ದು ಮಾಡುವ ಮಾತುಗಳೂ ಕೇಳಿಬರುತ್ತಿದೆ.

ವಾಸ್ತವದಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕ ಹುದ್ದೆಯಲ್ಲಿರುವ ವಾಸು, ವೆಂಕಟಸ್ವಾಮಿ, ಉದಯಕುಮಾರ್, ಸೀನಪ್ಪ, ವೆಂಕಟಶಿವಾರೆಡ್ಡಿ, ಶ್ರೀಧರ್ ಮುಂತಾದ ಕೆಲವರು ತಾವೇ ಸ್ವತಃ ಖಾಸಗಿ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಕೆಲವರು ಟ್ಯೂಷನ್ ಮಾಫಿಯಾ ನಡೆಸುತ್ತಿದ್ದಾರೆ. ಇವರ ಪೈಕಿ ಕೆಲವರನ್ನು ಸಿಒಡಿ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ.



ಬೆಂಗಳೂರಿನ ಅಪರಾಧ ವಿಭಾಗದ ಪೊಲೀಸರು ಈಗಾಗಲೇ ಬನಶಂಕರಿಯ ರಂಜಿತ್ ಮತ್ತು ಹೊಸಕೋಟೆಯ ಸುದರ್ಶನ್ ಎಂಬ ಇಬ್ಬರು ರಿಯಲ್‌ಎಸ್ಟೇಟ್ ಉದ್ಯಮಿಗಳನ್ನು ಹಾಗೂ ಅಶ್ವತ್ಥನಾರಾಯಣ ಗೌಡ ಎಂಬ ಹಾರ್ಡ್‌ವೇರ್ ಅಂಗಡಿ ಮಾಲಿಕನನ್ನು ಬಂಧಿಸಿದ್ದಾರೆ. ಒಂದು ಪತ್ರಿಕೆಗೆ 40,000 ರೂಪಾಯಿ ದರದಂತೆ ಇವರಿಗೆ ಪತ್ರಿಕೆಯನ್ನು ಸರಬರಾಜು ಮಾಡಿದ್ದು ಅಜಯ್ ಕುಮಾರ್ ಮತ್ತು ಪುಟ್ಟರಾಜು ಎಂಬ ರಿಯಲ್ ಎಸ್ಟೇಟ್ ಏಜೆಂಟ್‌ಗಳು ಹಾಗು ಶಶಿಕಲಾ ಎಂಬ ಒಬ್ಬ ಉಪನ್ಯಾಸಕಿ ಎಂದು ತಿಳಿದುಬಂದಿದ್ದು ಪೊಲೀಸರು ಪರಾರಿಯಾಗಿರುವ ಆಸಾಮಿಗಳ ಬೆನ್ನತ್ತಿದ್ದಾರೆ. ಅಂದರೆ ಪಿಯುಸಿ ಮಂಡಳಿಯ ಕಚೇರಿಯಲ್ಲಿರುವ ಉನ್ನತ ಹಂತದ ಅಧಿಕಾರಿಗಳ ಜೊತೆ ಇವರಿಗೆ ಸಂಬಂಧವಿರುವುದು ನಿಚ್ಚಳವಾಗಿದೆ.

ಹೇಗೂ ಹಗರಣವನ್ನು ಮುಚ್ಚಿಹಾಕಲು ಇನ್ನು ಸಾಧ್ಯವೇ ಇಲ್ಲವೆಂಬುದು ನಿಚ್ಚಳವಾದಾಗ ಸರ್ಕಾರ ಸಿಐಡಿ ತನಿಖೆಗೆ ಆದೇಶಿಸಿದೆ. ಅಪರಾಧಿಗಳನ್ನು ಯಾವ ಮೂಲೆಯಲ್ಲಿದ್ದರೂ ಪತ್ತೆ ಹಚ್ಚುವ ಇಚ್ಛಾಶಕ್ತಿ ಹೊಂದಿರುವ ಅಧಿಕಾರಿಯಾದ ಆರ್.ಕೆ. ದತ್ತ ತನಿಖೆಯ ನೇತೃತ್ವ ವಹಿಸಿದ್ದಾರೆ. ಆದರೆ ಸರ್ಕಾರ ಈ ತನಿಖೆಯನ್ನು ಯಾವ ದಿಕ್ಕಿಗೆ ದೂಡುತ್ತದೆಂದು ಈಗಲೇ ಹೇಳಲಾಗದು. ಯಾಕೆಂದರೆ ಎಂಥದೇ ತನಿಖೆಯನ್ನು ಹಳ್ಳ ಹಿಡಿಸಿ ಅಪರಾಧಿಗಳನ್ನು ರಕ್ಷಿಸುವ ವಿಶೇಷ ಪ್ರತಿಭೆ ಬಿಜೆಪಿ ಸರ್ಕಾರಕ್ಕಿದೆ ಎಂಬುದು ಕಳೆದ ನಾಲ್ಕು ವರ್ಷಗಳಿಂದಲೂ ಜಗಜ್ಜಾಹೀರಾಗಿರುವ ಸಂಗತಿ.

"ಆಗಬಾರದ್ದು ಆಗಿಹೋಗಿದೆ, ಅದು ಹೇಗೆ ಆಯಿತು ಅನ್ನೋದರ ಬಗ್ಗೆ ನಮಗಿನ್ನೂ ಸ್ಪಷ್ಟತೆ ಸಿಕ್ಕಿಲ್ಲ ಸಿಐಡಿ ತನಿಖೆಯಿಂದ ಎಲ್ಲಾ ಸತ್ಯ ಹೊರಬರಲಿದೆ..." ಇದು ಮಾನ್ಯ ಶಿಕ್ಷಣ ಸಚಿವ ಕಾಗೇರಿಯವರು ಇತ್ತೀಚಿಗೆ ಪಿಯುಸಿ ಪ್ರಶ್ನೆ ಪತ್ರಿಕೆ ಬಯಲಾಗಿದ್ದರ ಬಗ್ಗೆ ಉದುರಿಸಿದ ಅಣಿಮುತ್ತುಗಳು. ಈ ನಾಲಾಯಕ್ ಮಂತ್ರಿಗೆ ವರ್ಷವಿಡೀ ಪುರುಸೊತ್ತಿಲ್ಲ, ವಿದ್ಯಾರ್ಥಿಗಳ ಭವಿಷ್ಯವನ್ನು ಉತ್ತಮಪಡಿಸುವುದಕ್ಕೋ ಅಥವಾ ಶಿಕ್ಷಣ ಇಲಾಖೆಯಲ್ಲಿ ದಕ್ಷತೆಯನ್ನು ತರುವುದಕ್ಕೋ ಬಹಳ ದುಡಿಯುತ್ತಿರಬಹುದು ಅಂತ ಯಾರೂ ಭಾವಿಸಬೇಕಾಗಿಲ್ಲ, ಈತನಿಗೆ ಅಂಥಾ ಯಾವ ಆಸಕ್ತಿಯೂ ಇದ್ದಂತೆ ಕಾಣುತ್ತಿಲ್ಲ, ಬದಲಿಗೆ ತನ್ನ ನೆಚ್ಚಿನ ಸಂಘ ಪರಿವಾರದ ಕೋಮು ವಿಷವನ್ನು ಮಕ್ಕಳ ಪಠ್ಯದಲ್ಲಿ ತುರುಕಲು ಷಡ್ಯಂತ್ರಗಳನ್ನು ಹೆಣೆಯುವುದರತ್ತಲೇ ಆತನ ವಿಶೇಷ ಆಸಕ್ತಿ. ಹೀಗಾದರೆ ಇನ್ನೇನಾಗುತ್ತೆ? ಆಗಬಾರದ್ದೇ ಆಗುತ್ತೆ! ಆದರೆ ಅದರ ಪರಿಣಾಮವನ್ನು ಇಡೀ ನಾಡು ಅನುಭವಿಸಬೇಕಾಗುತ್ತೆ, ಅದೇ ದುರಂತ!

• ದೊಡ್ಡಿ ಮೂರ್ತಿ

ಹಗರಣ ಬಯಲಿಗೆಳೆದ ಲಂಕೇಶ್ ವರದಿಗಾರ


ನಮ್ಮ ಪತ್ರಿಕೆಯ ವರದಿಗಾರ ಅಜ್ಜಂಪುರ ವೆಂಕಟೇಶ್ ತಮ್ಮ ಊರಿನಲ್ಲಿ ಪವಿತ್ರ ಪ್ರೆಸ್ ಎಂಬ ಮುದ್ರಣಾಲಯವೊಂದನ್ನು ನಡೆಸುತ್ತಿದ್ದಾರೆ. ಇದೇ ಮಾರ್ಚ್ 19 ರಂದು ಇಬ್ಬರು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳೊಂದಿಗೆ ಪ್ರೆಸ್‌ಗೆ ಬಂದ ಸಿದ್ರಾಮಪ್ಪ ಎಂಬ ಉಪನ್ಯಾಸಕರು ಫ್ಯಾಕ್ಸ್‌ನಲ್ಲಿ ಯಾವುದೋ ನೋಟ್ಸ್ ತರಿಸಿಕೊಳ್ಳಬೇಕೆಂದು ಹೇಳಿ ಫ್ಯಾಕ್ಸ್ ನಂಬರ್ ಪಡೆದುಕೊಂಡರು. ಹಾಗೆ ಅವರು ತರಿಸಿಕೊಂಡ ಫ್ಯಾಕ್ಸ್ ಕೈಬರಹದಲ್ಲಿದ್ದುದರಿಂದ ವೆಂಕಟೇಶ್‌ಗೆ ಅಷ್ಟಾಗಿ ಅನುಮಾನ ಬರಲಿಲ್ಲ, ಆದರೆ ಕೈಬರಹದ ರೂಪದಲ್ಲಿ ಪ್ರಶ್ನಪತ್ರಿಕೆ ಬಹಿರಂಗವಾಗಿರುವ ಸಂಗತಿ ಮರುದಿನ ಟಿವಿಗಳಲ್ಲಿ ಪ್ರಸಾರವಾಗುತ್ತಿದ್ದನ್ನು ಕೇಳಿದ ವೆಂಕಟೇಶ್‌ಗೆ ತಮ್ಮ ಪ್ರೆಸ್‌ಗೆ ಬಂದಿದ್ದ ಫ್ಯಾಕ್ಸ್ ಇದೇ ಎಂಬುದು ಖಾತ್ರಿಯಾಯಿತು.

ಕೂಡಲೇ ಜಾಗೃತರಾದ ನಮ್ಮ ವರದಿಗಾರ ಈ ಸಂಗತಿಯನ್ನು ಸ್ಥಳೀಯ ಕಾಲೇಜಿನ ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿ ಪರಮೇಶ್ವರಪ್ಪ ಮುಂತಾದವರಿಗೆ ಈ ಸಂಗತಿ ತಿಳಿಸಿದರು, ಅಲ್ಲದೆ ಅಜ್ಜಂಪುರ ಪೊಲೀಸ್ ಠಾಣೆಗೂ ವಿಷಯ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು.

ಆದರೆ ಅದರಿಂದ ಅಷ್ಟೇನೂ ಉಪಯೋಗವಾಗುತ್ತಿಲ್ಲವೆಂಬುದನ್ನು ಅರಿತ ವೆಂಕಟೇಶ್ ಮರುದಿನ ಅಂದರೆ ಮಾರ್ಚ್ 21 ರಂದು ಬೆಂಗಳೂರಿನಲ್ಲಿರುವ ಪಿಯುಸಿ ಪರೀಕ್ಷಾ ಕೇಂದ್ರದ ಮುಖ್ಯಸ್ಥ ತುಳಸಿಕುಮಾರ್‌ರನ್ನು ಸಂಪರ್ಕಿಸಿ ವಿವರಗಳನ್ನು ನೀಡಿದರು. ಪರಿಣಾಮವಾಗಿ ಸಿಒಡಿ ಡಿವೈಎಸ್‌ಪಿ ಸಿದ್ದಪ್ಪ ನೇತೃತ್ವದ ತಂಡ ಸ್ಥಳಕ್ಕೆ ಭೇಟಿ ನೀಡಿ, ಆರೋಪಿ ಶಿಕ್ಷಕ ಸಿದ್ರಾಮಪ್ಪನನ್ನು ಬಂಧಿಸಿದ್ದಾರೆ. ಆತನಿಗೆ ಫ್ಯಾಕ್ಸ್ ಕಳಿಸಿಕೊಟ್ಟಿದ್ದ ಮಾರಾಟ ಜಾಲದ ಮತ್ತೊಬ್ಬ ವ್ಯಕ್ತಿ ಹೊಸದುರ್ಗ ತಾಲೂಕಿನ ವಕೀಲ ತಲೆಮರೆಸಿಕೊಂಡಿದ್ದಾನೆ.

ತಮ್ಮ ಗಮನಕ್ಕೆ ಬಂದ ಅಕ್ರಮವನ್ನು ಒಬ್ಬ ಜವಾಬ್ದಾರಿಯುತ ನಾಗರಿಕನಾಗಿ ಬಯಲಿಗೆಳೆದ ವರದಿಗಾರ ವೆಂಕಟೇಶ್‌ರಂತೆ ಇತರರೂ ವರ್ತಿಸಿದರೆ ಇಂತಹ ಅಪರಾಧಗಳನ್ನು ತಡೆಯುವುದು ಸಾಧ್ಯವಾಗುತ್ತದೆ.

ಯಡ್ಡಿ ಹಿಂದೆ 'ದುಷ್ಟ ಚತುಷ್ಟಯ'!




ಸಂಪಾದಕೀಯ

ಬಿಜೆಪಿಯ ನಿತ್ಯ ಬಂಡಾಯಗಾರ ಯಡಿಯೂರಪ್ಪ ಯಾಕೆ ಹೀಗೆ ಆಡುತ್ತಿದ್ದಾರೆ? ಅದೇನು ಕೇವಲ ಅಧಿಕಾರ ಲಾಲಸೆಯಾ? ಅಥವಾ ತಿಕ್ಕಲುತನವಾ?


ಮೇಲ್ನೋಟಕ್ಕೆ ಇವೆಲ್ಲವೂ ನಿಜವಿರಬಹುದೆಂದು ಯಾರಿಗಾದರೂ ಅನಿಸಿಬಿಡುತ್ತದೆ. ಆದರೆ ಯಡಿಯೂರಪ್ಪ ಹೀಗೆ ಸಿಎಂ ಕುರ್ಚಿಗಾಗಿ ಬೀದಿ ಜಗಳ ಆಡಲು ಪ್ರಚೋದನೆ-ಪ್ರೇರಣೆ ಎಲ್ಲಿಂದ ಸಿಗುತ್ತಿದೆ ಎಂದು ಕೊಂಚ ಸೂಕ್ಷ್ಮವಾಗಿ ಗಮನಿಸಿದರೆ ಅಸಲಿ ಸೂತ್ರಧಾರರು ಕಾಣಸಿಗುತ್ತಾರೆ. 'ದುಷ್ಟ ಚತುಷ್ಟಯ' ಅಂದರೆ ಇದೇ ಗುಂಪು. ಮುಖ್ಯವಾಗಿ ಲಿಂಗಾಯತ ಸಮುದಾಯದ ಉದ್ದಿಮೆದಾರರು, ಮಠಾಧೀಶರು, ರಾಜಕಾರಣಿಗಳು ಹಾಗೂ ಉನ್ನತ ಸರ್ಕಾರಿ ಅಧಿಕಾರಿಗಳ ಒಂದು ಕಾರ್ಟೆಲ್ ಇದು.

ಅಂದರೆ ವಿವಿಧ ಕ್ಷೇತ್ರಗಳ, ಅನೇಕ ಹಿತಾಸಕ್ತಿಗಳಿರುವ ಜಾತಿ ಆಧಾರಿತ ಗುಂಪಿದು. ಯಡಿಯೂರಪ್ಪ ಈ ಜಾತಿ ಕಾರ್ಟೆಲ್‌ನ ನಾಯಕನಾಗಿ ಅವರೆಲ್ಲರ ಲಾಭವನ್ನು ಖಾತ್ರಿಗೊಳಿಸಬಲ್ಲ ಏಕೈಕ ಮಾರ್ಗವಾಗಿರುವ ರಾಜಕೀಯ ಅಧಿಕಾರವನ್ನು ಪಡೆಯಲು ಕಿತ್ತಾಟ ನಡೆಸುತ್ತಿದ್ದಾರೆ. ಯಡ್ಡಿಗೆ ಸಿಗಬೇಕಾದ ಸಿಎಂ ಕುರ್ಚಿಯೇ ಈ ಗುಂಪಿನ ಯಶಸ್ಸಿನ ಬೀಗದ ಕೈ ಆಗಿದೆ.

ಕರ್ನಾಟಕದಲ್ಲಿ ಈ ಹಿಂದೆ ಲಿಂಗಾಯತ ಸಮುದಾಯದಿಂದ ಬಂದಿರುವ ಅನೇಕರು ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ನಿಜಲಿಂಗಪ್ಪ ಬಿ.ಡಿ. ಜತ್ತಿ ವೀರೇಂದ್ರ ಪಾಟೀಲ್, ಜೆ.ಹೆಚ್.ಪಟೇಲ್ ಮುಂತಾದವರ ಅವಧಿಯಲ್ಲಿ ಇವರೆಲ್ಲಾ ಒಂದೋ ಆಯಾ ಪಕ್ಷದ ಲೀಡರ್‌ಗಳಾಗಿದ್ದರು ಅಥವಾ ತಮ್ಮ ಪ್ರಾಂತ್ಯವನ್ನು ಪ್ರತಿನಿಧಿಸಿದ್ದರು. ಆದರೆ ಯಡಿಯೂರಪ್ಪನಂತೆ ಜಾತಿ ನಾಯಕರಾಗಿ ಎಂದೂ ತಮ್ಮನ್ನು ತಾವೇ ಸೀಮಿತಗೊಳಿಸಿಕೊಳ್ಳಲಿಲ್ಲ ಅಥವಾ ಹಾಗೇ ಬಿಂಬಿಸಿಕೊಳ್ಳಲು ಕೊಂಚ ಹಿಂಜರಿದಿದ್ದರು. ಆದರೆ ಯಡಿಯೂರಪ್ಪನವರ ರಾಜಕೀಯದ ಗ್ರಾಫ್ ಅನ್ನು ಒಮ್ಮೆ ಚೆಕ್ ಮಾಡಿ ನೋಡಿ. ಅನೇಕ ಸಾರಿ ಈತನನ್ನು ರೈತನಾಯಕ ಅನ್ನಲಾಗುತ್ತಿತ್ತು. ಇದರೊಂದಿಗೆ ವಿರೋಧಿ ನಾಯಕ, ಜನಪರ ನಾಯಕ, ಅವಿಶ್ರಾಂತ ಹೋರಾಟಗಾರ ಎಂತಲೂ ಆವಾಗೀವಾಗ ಹೇಳಲಾಗುತ್ತಿತ್ತು. ಆಗೆಲ್ಲಾ ಯಡ್ಡಿ ಕೈಲಿ ನೇರವಾದ ರಾಜಕೀಯ ಅಧಿಕಾರ ಇರಲಿಲ್ಲ. ಆದರೆ ಯಾವಾಗ ಯಡ್ಡಿ ಉಪಮುಖ್ಯಮಂತ್ರಿಯಾದರೋ, ಆ ನಂತರ ಮುಖ್ಯಮಂತ್ರಿಯೂ ಆದರೋ ಈತ ಕೇವಲ ಲಿಂಗಾಯತ ಲೀಡರ್ ಆಗಿ ತಾವೇ ತಮ್ಮ ವ್ಯಾಪ್ತಿಯನ್ನು ಕುಗ್ಗಿಸಿಕೊಂಡರು. ಈತನಿಗೆ ಲೋಕನಾಯಕ ಅನಿಸಿಕೊಳ್ಳುವುದಕ್ಕಿಂತಲೂ ಲಿಂಗಾಯತರ ನಾಯಕ ಅನಿಸಿಕೊಂಡರೇನೇ ಯಾಕೆ ಜಾಸ್ತಿ ಲಾಭ ಅನ್ನಿಸಬೇಕು ಹೇಳಿ?



ಈಗ ಇನ್ನಷ್ಟು ಜಾಸ್ತಿಯಾಗುತ್ತಿರುವ ಜಾತಿ ಧ್ರುವೀಕರಣವೇ ಈ ಪ್ರಶ್ನೆಗೆ ಉತ್ತರ ನೀಡುತ್ತಿದೆ. ಕರ್ನಾಟಕದಲ್ಲಿ ಈಗಾಗಲೇ ಜಾತ್ಯತೀತ ಜನತಾ ದಳವು ದಕ್ಷಿಣ ಕರ್ನಾಟಕದಲ್ಲಿ ಆಗಿರುವ ಒಕ್ಕಲಿಗರ ಜಾತಿ ಧ್ರುವೀಕರಣದ ಅಭಿವ್ಯಕ್ತಿಯೇ ಆಗಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಅದೇ ಸಮಯದಲ್ಲಿ ಲಿಂಗಾಯತ ಶ್ರೀಮಂತರ ಗುಂಪು ಈಗ ಬಿಜೆಪಿಯನ್ನು ವಶಪಡಿಸಿಕೊಳ್ಳಲು ಯತ್ನಿಸುತ್ತಿದೆ. ಧನದಾಹಿಯೂ ಅಧಿಕಾರದಾಹಿಯೂ ಆಗಿರುವ ಈ ಜಾತಿ ಗುಂಪು ಈಗ ಅತ್ಯಂತ ಆಕ್ರಮಣಕಾರಿಯಾಗಿ ವರ್ತಿಸುತ್ತಿದೆ. ಈ ಗುಂಪಿನ ಸದಸ್ಯರ ಹಿತಾಸಕ್ತಿಗಳು ಏನೇನಿರಬಹುದೆಂದು ಗಮನಿಸಿದರೆ ಅವರ ಆಕ್ರಮಣಕಾರಿ ವರ್ತನೆಗೆ ಕಾರಣಗಳು ಸಿಗುತ್ತವೆ.



ಉದಾಹರಣೆಗೆ ಲಿಂಗಾಯತ ಬ್ಯುಸಿನೆಸ್‌ಮೆನ್‌ಗಳ ಹಿತಾಸಕ್ತಿಗಳು ಏನೇನಿರಬಹುದೆಂದು ನೋಡೋಣ.

ಆದರ್ಶ ಡೆವಲಪರ್ಸ್‌ನ ಮಾಲೀಕ ಜಯಶಂಕರ್‌ಗೆ ಯಡ್ಡಿ ಹಾಗೂ ಸಿದ್ದಗಂಗಾ ಸ್ವಾಮಿ ಜೊತೆ ಹಣಕಾಸಿನ ವ್ಯವಹಾರಗಳಿವೆ. ಕನಿಷ್ಟ ಪಕ್ಷ ಒಂದು ಸಾವಿರ ಕೋಟಿ ರೂಪಾಯಿ ಬೆಲೆಯ ಭೂಮಿಯನ್ನು ಬೆಂಗಳೂರು ಸಿಟಿ ಸುತ್ತಮುತ್ತ ಕದ್ದಿರುವ ಜಯಶಂಕರ್‌ಗೆ ಯಡ್ಡಿ ಮತ್ತೆ ಸಿ.ಎಂ. ಆದರೆ ಇನ್ನೂ ಲಾಭ. ಜೊತೆಗೆ ಯಡ್ಡಿಯ ಅಳಿಯ-ಮಕ್ಕಳ ಮಾಲೀಕತ್ವದ ಧವಳಗಿರಿ ಪ್ರಾಪರ್ಟಿಸ್‌ನಲ್ಲಿ ಇನ್ನಿತರ ಅನೇಕರು ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕಿದ್ದಾರೆ. ಇವರೊಂದಿಗೆ ಜಗದ್ವಿಖ್ಯಾತ ಭೂಗಳ್ಳ ಅಶೋಕ್ ಖೇಣಿಯೂ ಕ್ಯೂ ನಿಂತಿದ್ದಾನೆ. ರಿಯಲ್ ಎಸ್ಟೇಟ್ ಲಿಂಗಾಯತ ಬಂಡವಾಳಗಾರರಿಗೆ ಈಗ ಲಾಭ ಮಾಡಬೇಕೆಂದರೆ ಈ ಗುಂಪಿನ ನಾಯಕ ಯಡ್ಡಿ ಮತ್ತೆ ಸಿಎಂ ಆಗಬೇಕು ತಾನೆ?




ಇನ್ನೊಂದೆಡೆ ಬಿಜೆಪಿಯ ಲಿಂಗಾಯತ ನಾಯಕರಾದ ಮುರುಗೇಶ್ ನಿರಾಣಿ, ಬೆಲ್ಲದ್, ಸೋಮಣ್ಣ, ಬಸವರಾಜ್ ಮುಂತಾದವರಿಗೆ ತಮ್ಮ ತಮ್ಮ ಉದ್ಯಮಗಳನ್ನು ಇನ್ನಷ್ಟು ವಿಸ್ತರಿಸುವ ಆತುರವಿದೆ. ಬಸು ಬೊಮ್ಮಾಯಿ, ರೇಣುಕಾಚಾರ್ಯ, ಉದಾಸಿ ತರದವರು ಈಗ ತಾನೇ ಕಾಸು ಕದ್ದು ಗಂಟು ಮಾಡುತ್ತಿದ್ದಾರೆ. ಹೀಗೆ ಸಂಗ್ರಹವಾಗುತ್ತಿರುವ ಕೋಟ್ಯಾಂತರ ಹಣ ಇಂದಲ್ಲ ನಾಳೆ ಯಾವುದೋ ಒಂದು ಬ್ಯುಸಿನೆಸ್ ರೂಪದಲ್ಲಿ ಹೊರಗೆ ಬಂದೇ ಬರುತ್ತದೆ.

ಇದರ ಪೈಕಿ ಸಕ್ಕರೆ ಕಾರ್ಖಾನೆಗಳ ಮೇಲೆ ಕಂಟ್ರೋಲ್ ಇರಿಸಿಕೊಂಡಿರುವ ಅಥವಾ ಮಾಲೀಕರೇ ಆಗಿರುವ ಲಿಂಗಾಯತರು ಕರ್ನಾಟಕ ಸರ್ಕಾರದ ವಿದ್ಯುತ್ ಪಾಲಿಸಿ, ಉತ್ಪಾದನೆ, ವಿದ್ಯುತ್ ದರ ಮುಂತಾದ ವಿಚಾರಗಳನ್ನು ನಿಯಂತ್ರಿಸುತ್ತಿದ್ದಾರೆ. ಈಗ್ಗೆ ಎರಡು ವರ್ಷಗಳ ಹಿಂದೆ ಛತ್ತೀಸ್‌ಘಡ ರಾಜ್ಯದಲ್ಲಿ ಒಂದು ಸಾವಿರ ಕೋಟಿ ಬಂಡವಾಳ ಹಾಕಿ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸಲು ಪ್ರಯತ್ನಿಸಿದ್ದು ಇದೇ ಲಿಂಗಾಯತ ಬಂಡವಾಳಗಾರರೇನೆ!

ಇನ್ನು ಮಠಾಧೀಶರ ವಿಚಾರಕ್ಕೆ ಬಂದರೆ ಇವತ್ತು ಇಡೀ ಕರ್ನಾಟಕದ ಉದ್ದಗಲಕ್ಕೂ ಹಬ್ಬಿಕೊಂಡಿರುವ ಲಿಂಗಾಯತ ಮಠಗಳ ಆಸ್ತಿ, ಭೂಮಿ, ಕಟ್ಟಡ, ಶಿಕ್ಷಣ ಸಂಸ್ಥೆಗಳು, ಇನ್ನಿತರ ಬ್ಯುಸಿನೆಸ್‌ಗಳ ಒಟ್ಟು ವಹಿವಾಟನ್ನು ಲೆಕ್ಕಾ ಹಾಕಿದರೆ ಕನಿಷ್ಟ ಪಕ್ಷ ಮೂರು ಲಕ್ಷ ಕೋಟಿ ರೂಪಾಯಿಗೂ ಜಾಸ್ತಿ ಇರಬಹುದು. ಇಷ್ಟು ಅಗಾಧ ಮೊತ್ತದ ವಹಿವಾಟು ಹಾಗೂ ಮಠಗಳನ್ನು ಕೇವಲ ಬೆರಳೆಣಿಕೆಯಷ್ಟು ಲಿಂಗಾಯತ ಕುಟುಂಬಗಳು ಕಂಟ್ರೋಲ್ ಮಾಡುತ್ತಿವೆ. ಈಗಿರುವ ಮಠಗಳಿಗೆ ಹೊಸ ಮಠಾಧೀಶರಾಗಿ ಬರುತ್ತಿರುವವರು ಇಂತಹ ಕುಟುಂಬಗಳ ಯುವಕರೇ ಆಗಿದ್ದಾರೆ. ಮಠಗಳ ಆಸ್ತಿ ಮೇಲೆ ನಿಯಂತ್ರಣ ಇರಿಸಿಕೊಳ್ಳುವುದೇ ಇವರ ನಿತ್ಯದ ಕೆಲಸ.

ಬಹಳ ಮುಖ್ಯವಾಗಿ ಈ ಗುಂಪಿನ ಜನ ಯಡ್ಡಿ ಸಿಎಂ ಆಗಿದ್ದಾಗ ಸರ್ಕಾರಿ ಖಜಾನೆಯಿಂದ ನೂರಾರು ಕೋಟಿ ರೂಪಾಯಿಗಳನ್ನು ಎತ್ತಿಕೊಂಡು ಹೋಗಿದ್ದಾರೆ. ಮೈಸೂರಿನ ಸುತ್ತೂರು ಸ್ವಾಮಿ ಕುಟುಂಬ ಈ ದಿನ ಐದು ಸಾವಿರ ಕೋಟಿ ರೂಪಾಯಿಯಷ್ಟು ಸಂಪತ್ತು ಹೊಂದಿದೆ. ಚಿತ್ರದುರ್ಗದ ಮುರುಘಾ ಮಠಕ್ಕೂ ಕನಿಷ್ಟ ಪಕ್ಷ ಐನೂರು ಕೋಟಿ ರೂಪಾಯಿಗೂ ಹೆಚ್ಚಿನ ಆಸ್ತಿಪಾಸ್ತಿಗಳಿವೆ. ಆದರೆ ತಕ್ಷಣದಲ್ಲಿ ಹಣಕಾಸಿನ ಬಿಕ್ಕಟ್ಟು ಆ ಮಠಕ್ಕಿದೆ. ಹಾಗಾಗಿಯೇ ಆ ಮಠದ ಸ್ವಾಮೀಜಿ ಅಮಾವಾಸ್ಯೆಯ ರಾತ್ರಿ ಸ್ಮಶಾನದಲ್ಲಿ ಸತ್ಯಾನ್ವೇಷಣೆಗೆ ಹೋಗುತ್ತಾರಾದರೂ ಹಗಲು ಹೊತ್ತಿನಲ್ಲೇ ರಣ ಪಿಶಾಚಿಯಂತಿರುವ ಯಡ್ಡಿಯೊಂದಿಗೂ ಕಾಣಸಿಗುತ್ತಾರೆ. ಈ ಮಠಾಧೀಶರೆಲ್ಲಾ ಅರ್ಧನಾರೀಶ್ವರನಂತೆ ಈಗ ಕೇವಲ ಅರ್ಧ ಮಠಾಧೀಶರಾಗಿದ್ದಾರೆ. ಅವರ ಉಳಿದರ್ಧ ರಿಯಲ್ ಎಸ್ಟೇಟ್, ಶಿಕ್ಷಣ ವ್ಯಾಪಾರ, ಟ್ರಾನ್ಸ್‌ಫರ್ ದಂಧೆ, **Money Laundring** ಅಥವಾ ಲೋಕಲ್ ಸ್ವಿಸ್ ಬ್ಯಾಂಕ್‌ಗಳಂತೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.



ವಾಸ್ತವದಲ್ಲಿ ಈ ಗುಂಪೇ ಲಿಂಗಾಯತ ರಾಜಕಾರಣಿ, ಲಿಂಗಾಯತ ಬಂಡವಾಳಶಾಹಿ ಲಿಂಗಾಯತ ಭ್ರಷ್ಟ ಅಧಿಕಾರಿಗಳನ್ನು ಒಂದೆಡೆ ಸೇರಿಸುವ ಸೂತ್ರದಾರರೂ ಆಗಿದ್ದಾರೆ. ಈ ಮಠಾಧೀಶರ ಗುಂಪಿನಲ್ಲಿ ಕಾಣುತ್ತಿರುವ ಕೊನೆಯ ಹಾಗೂ ಅಷ್ಟೇನು ಹಣಕಾಸಿನ ಬಲವಿರದ ತಂಡವೇ ಲಿಂಗಾಯತ ಭ್ರಷ್ಟ ಉನ್ನತಾಧಿಕಾರಿಗಳದ್ದು. ಶಂಕರ್ ಬಿದರಿಯಿಂದ ಹಿಡಿದು ಪಿಡಬ್ಲ್ಯುಡಿ ಚೀಫ್ ಇಂಜಿನಿಯರ್ ಮೃತ್ಯುಂಜಯಸ್ವಾಮಿಯವರೆಗೂ ಇಲ್ಲಿ ಎದ್ದು ಕಾಣುವ ಜನರಿದ್ದಾರೆ. ಇನ್ನಷ್ಟು ಒಳಹೊಕ್ಕು ನೋಡಿದರೆ ಎಲ್ಲಾ ಇಲಾಖೆಗಳ, ಜಿಲ್ಲಾ ಕೇಂದ್ರಗಳ ಆಯಕಟ್ಟಿನ ಸ್ಥಾನಗಳಲ್ಲಿ ಈಗ ಲಿಂಗಾಯತ ಅಧಿಕಾರಿಗಳನ್ನೇ ತಂದು ಕೂರಿಸಲಾಗಿದೆ. ಈ ಅಧಿಕಾರಶಾಹಿಗಳ ತಂಡ ಲಿಂಗಾಯತ ಉದ್ದಿಮೆದಾರರಿಗೆ, ಲಿಂಗಾಯತ ಮಠಾಧೀಶರಿಗೆ, ಲಿಂಗಾಯತ ರಾಜಕಾರಣಿಗಳಿಗೆ ಇನ್ನಷ್ಟು ಬಲ ತುಂಬುವ, ಹಣ ಕದ್ದು ಕೊಬ್ಬಿಸಲು ನೆರವಾಗುತ್ತಿದೆ.

ಈಗ ಹೇಳಿ

ಇಷ್ಟೆಲ್ಲಾ ಬಲ, ಬೆಂಬಲ ಪಡೆದಿರುವ ಯಡ್ಡಿ ಯಾಕೆ ತಾನೆ ಸುಮ್ಮನಿರುತ್ತಾರೆ? ಭಾರತದ ಚುನಾವಣಾ ರಾಜಕೀಯದಲ್ಲಿ ಸೋಶಿಯಲ್ ಎಂಜಿನಿಯರಿಂಗ್ ಎಂಬುದು ಈಗಿನ ಟ್ರೆಂಡ್. ಉತ್ತರ ಪ್ರದೇಶ ಮುಂತಾದೆಡೆ ಮಾಯಾವತಿ ಅದನ್ನು ಮಾಡಿ ತೋರಿಸಿದರು. ಆಂಧ್ರದಲ್ಲೂ ತೆಲುಗು ದೇಶಂಗೆ ಆರಂಭಿಕ ಯಶಸ್ಸು ಸಿಕ್ಕಿದ್ದೇ ಕಮ್ಮ ಜಾತಿ ಬೆಂಬಲದಿಂದ, ಲಿಂಗಾಯತ ಲೀಡರ್ ಆಗಿದ್ದರೇನೆ ಜಾಸ್ತಿ ಲಾಭ ಎಂದು ಯಡ್ಡಿಗೆ ಅನ್ನಿಸಲು ಈಗಿನ 'ದುಷ್ಟ ಚತುಷ್ಟಯ'ವೇ ಕಾರಣವಾಗಿದೆ. ಸ್ವತಃ ಲಿಂಗಾಯತನೇ ಆಗಿರುವ ಯಡ್ಡಿ ಅರ್ಧ ರಾಜಕಾರಣಿ, ಕೊಂಚ ಬ್ಯುಸಿನೆಸ್‌ಮೆನ್, ಸ್ವಲ್ಪ ಧಾರ್ಮಿಕ.... ಎಲ್ಲವೂ ಆಗಿರುವ ಕಾರಣ ಅವರಿಗೆ ನೆಚ್ಚಿನ ನಾಯಕನೂ ಆಗಿದ್ದಾರೆ.

ಬಹಳ ಮುಖ್ಯವಾಗಿ ಈ ದುಷ್ಟ ಚತುಷ್ಟಯಕ್ಕೆ ರಾಜಕೀಯ ಅಧಿಕಾರ ಕಬಳಿಸಲು, ಆ ಮೂಲಕ ಕರ್ನಾಟಕವನ್ನು ಲೂಟಿ ಮಾಡಲು ಒಂದು ವಾಹಕ ಬೇಕು. ಅವರಿಗೆ, ಲಕ್ಷಾಂತರ ಕಾರ್ಯಕರ್ತರನ್ನು ಹೊಂದಿರುವ ರೆಡಿಮೇಡ್ ಪಕ್ಷದಂತೆ ಬಿಜೆಪಿ ಕಾಣುತ್ತಿದೆ. ತಮ್ಮ ಉದ್ದೇಶ ಈಡೇರುವುದಾದರೆ ಹಿಂದೂತ್ವದೊಂದಿಗೆ ಇವರಿಗೇನೂ ಭಿನ್ನಾಭಿಪ್ರಾಯ ಇರುವುದಿಲ್ಲ.

ಒಂದೋ ಈ ದುಷ್ಟ ಗುಂಪು ಬಿಜೆಪಿಯನ್ನೇ ವಶಪಡಿಸಿಕೊಂಡು ತನ್ನ ಗುರಿಯತ್ತ ಮುನ್ನುಗ್ಗಲಿದೆ. ಅದಕ್ಕೆ ಅವಕಾಶ ಸಿಗದೇ ಹೋದಲ್ಲಿ ಇಂದಲ್ಲ ನಾಳೆ ತನ್ನದೇ ಆದ ಒಂದು ರಾಜಕೀಯ ಪಕ್ಷವನ್ನು ತೇಲಿ ಬಿಡಲಿದೆ.

ಯಡ್ಡಿ ಹಾಗೂ ಈತನ ಬೆನ್ನ ಹಿಂದಿರುವ ದುಷ್ಟ ಚತುಷ್ಟಯದ ಬಗ್ಗೆ ಕರ್ನಾಟಕದ ಜನ ಎಚ್ಚರದಿಂದಿರಬೇಕು.

• ಪಾರ್ವತೀಶ

ಶಿಲ್ಪಕಲಾ ತಜ್ಞ ಜಾನ್ ತನ್ಮಯತೆ



ತುಮಕೂರಿನಿಂದ ಶಿರಾ ಪಟ್ಟಣದತ್ತ ಸಾಗುವ ಹಾದಿಯಲ್ಲಿ ಸುಮಾರು ಇಪ್ಪತ್ತೈದು ಕಿಲೋಮೀಟರ್ ಪ್ರಯಾಣ ಮಾಡಿದರೆ ಸೀಬಿ ಗ್ರಾಮ ಸಿಗುತ್ತದೆ. ಹೈವೇಯಲ್ಲಿ ಸಾಗಿ ಹೋಗುವಾಗ ಯಾರ ಗಮನಕ್ಕೂ ಬರದಂತಿರುವ ಈ ಸೀಬಿಗೆ ಕರ್ನಾಟಕ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ.

ಈಗ್ಗೆ ಇನ್ನೂರಾ ಇಪ್ಪತ್ತೈದು ವರ್ಷಗಳ ಹಿಂದೆ ಸೀಬಿಯಲ್ಲಿ ನಲ್ಲಪ್ಪನೆಂಬಾತನ ಕುಟುಂಬವಿತ್ತು. ಈ ನಲ್ಲಪ್ಪ ಹೈದರಾಲಿ ಹಾಗೂ ಟಿಪ್ಪು ಸುಲ್ತಾನನ ಆಡಳಿತದಲ್ಲಿ ಕರಣಿಕನಾಗಿ ಕೆಲಸ ಮಾಡುತ್ತಿದ್ದ. ಟಿಪ್ಪು ಹತ್ಯೆಯ ನಂತರ ಒಡೆಯರ್ ಕಾಲದಲ್ಲೂ ಚಿತ್ರದುರ್ಗ, ನೆಲಮಂಗಲ ಮುಂತಾದೆಡೆ ಕೋಟೆಗಳ ಉಸ್ತುವಾರಿ ಮತ್ತು ಕರಣಿಕನ ಕೆಲಸ ಮಾಡಿಕೊಂಡಿದ್ದ.

1965 ರಲ್ಲಿ ತಿ.ತಾ. ಶರ್ಮರು **The quarterly journal of the mythic society** ಯಲ್ಲಿ ಮೊದಲ ಬಾರಿಗೆ ಪ್ರಕಟಿಸಿದ 'ಹೈದರ್‌ನಾಮ'ದ ಮೂಲ ಕೃತಿ ದೊರಕಿದ್ದೇ ಈ ನಲ್ಲಪ್ಪನ ವಂಶಿಕರ ಬಳಿಯಲ್ಲಿ!

ಹೀಗೆ ಆಕಸ್ಮಿಕವಾಗಿ ಸಿಕ್ಕು ಬೆಳಕಿಗೆ ಬಂದ 'ಹೈದರ್‌ನಾಮ'ದಲ್ಲಿ ಹೈದರನ ಒರಟೊರಟಾಟ, ಧಾವಂತದ ನಿರೂಪಣೆಯ ಆತ್ಮಕತೆಯಿದೆ. ಈ ಕೃತಿ ಸಿಕ್ಕಾಗ ಪ್ರಕಟಿಸುವ ಆತುರದಲ್ಲಿ ಖ್ಯಾತ ವಿದ್ವಾಂಸ ಡಾ. ಎಂ.ಎಚ್. ಕೃಷ್ಣ ಹಾಗೂ ನಂತರ ತಿ.ತಾ. ಶರ್ಮರು 'ನಲ್ಲಪ್ಪ'ನೇ ಹೈದರ್‌ನಾಮ ಬರೆದವ ಎಂಬಂತೆ ಬಿಂಬಿಸಿದ್ದಾರೆ. ಆದರೆ **1824** ರ ತನಕ ಬದುಕಿದ್ದ ನಲ್ಲಪ್ಪ ಈ ಕೃತಿಯ **custodian** ಮಾತ್ರವೇ ಆಗಿದ್ದು, ಇದನ್ನು ದಾಖಲಿಸಿದವರು ಅನ್ಯರಿರಬೇಕೆಂದು ನನಗನ್ನಿಸಿದ್ದರಿಂದಲೂ ಹಾಗೂ ಬ್ರಾಹ್ಮಣ ಸೈನಿಕ ನಲ್ಲಪ್ಪನ ಬಗ್ಗೆ ಹೆಚ್ಚು ತಿಳಿಯಬೇಕೆಂದೂ ನಾನು ಸೀಬಿಗೆ ಆಗಾಗ್ಗೆ ಹೋಗಿಬರುತ್ತಿರುತ್ತೇನೆ. ಸೀಬಿಯಲ್ಲಿ ಬಹಳ ಸುಂದರವಾದ ಒಂದು ನರಸಿಂಹ ದೇವಸ್ಥಾನವಿದೆ. ದಕ್ಷಿಣ ಭಾರತದಲ್ಲೇ ಅತೀ ಅಪರೂಪದ್ದೆನ್ನಬಹುದಾದ **fort temple** ಇದು. ಹೆಚ್ಚುಕಡಿಮೆ ಕೋಟೆಯೊಂದರ ಗಟ್ಟಿಮುಟ್ಟಾದ ಗೋಡೆಯ ರೀತಿಯಲ್ಲೇ ಸೀಬಿ ದೇವಾಲಯದ ಗೋಡೆಗಳು ಎತ್ತರಕ್ಕಿವೆ. ಅಷ್ಟೇ ಅಲ್ಲದೆ ದೇವಾಲಯದ ಒಳಗಿನಿಂದಲೇ ಗನ್ ಇರಿಸಿ ಹೊರಗೆ ಕಾಣುವವರ ಮೇಲೆ ಗುಂಡು ಹಾರಿಸುವ ರೀತಿ ಕಟ್ಟಡ ನಿರ್ಮಾಣಗೊಂಡಿದೆ. ಬಹುಶಃ ಟಿಪ್ಪು ಹತ್ಯೆಯ ನಂತರ ಉಂಟಾದ ಅರಾಜಕತೆಯಿಂದಲೂ, ಲೂಟಿದಾಳಿಗಳು ಆಗಾಗ್ಗೆ ನಡೆಯುತ್ತಿದ್ದರಿಂದಲೂ ರಕ್ಷಣೆಗಾಗಿ ನಲ್ಲಪ್ಪ ಈ ರೀತಿ **fort temple** ಕಟ್ಟಿಸಿದನೇನೊ. ಇದೇ ತರದ ಕೋಟೆ ದೇವಾಲಯವೊಂದು ಭಟ್ಕಳದಲ್ಲಿದೆ. ಗುಜರಾತ್‌ನಲ್ಲೂ ನೋಡಸಿಗುತ್ತವಂತೆ.



ಸೀಬಿಯ ಇನ್ನೊಂದು ವೈಶಿಷ್ಟ್ಯ ಏನೆಂದರೆ ಅಲ್ಲಿನ **mural paintings** ಗಳು. ಆ ದೇವಾಲಯದ ಛಾವಣಿಯಲ್ಲಿ ಬಣ್ಣಬಣ್ಣದ ದೃಶ್ಯಗಳನ್ನು ಚಿತ್ರಿಸಲಾಗಿದೆ. ಆದರೆ ಆ ಕಲಾವಿದರ್ಯಾರು ಎಂಬುದಂತು ಇದುವರೆಗೂ ಪತ್ತೆಯಾಗಿಲ್ಲ, ಅಲ್ಲದೆ ಆಗಿನ ಪೈಂಟಿಂಗ್ಸ್‌ಗಳು ಈಗ ನಿಧಾನಕ್ಕೆ ಮಸುಕುಮಸುಕಾಗುತ್ತಾ ಇದೆ. ಅಂದಾಜು ನೂರಿಪ್ಪತ್ತು ಅಡಿಯ ಚಚ್ಚೌಕಾಕಾರದ ದೇವಾಲಯದ ಒಳಗಿನ ಆವರಣದ ಸುತ್ತಲೂ, ಗೋಡೆಗಳ ಮೇಲೆ ನೂರಾರು ತರದ ಭಂಗಿಗಳಲ್ಲಿ ದೇವಾನುದೇವತೆಗಳ ಶಿಲ್ಪಗಳನ್ನು ನಿರ್ಮಿಸಿ ಇರಿಸಿದ್ದಾರೆ. ಇವೆಲ್ಲವೂ ಕಲ್ಲಿನ ಕೆತ್ತನೆಗಳಲ್ಲ, ಬದಲಾಗಿ ಬೇರೆ ಅನೇಕ ತರದ ಮೃದುಶಿಲೆ. ಮಣ್ಣು ಸುಣ್ಣ ಇತ್ಯಾದಿಗಳನ್ನು ಬೆರೆಸಿ ನಿರ್ಮಿಸಿರುವ ವಿಗ್ರಹಗಳು ಅಲ್ಲಿವೆ. ಆ ಶಿಲ್ಪಗಳೂ ಕೂಡ ಈಗ ನಿಸರ್ಗದ ದಾಳಿಗೆ ಸಿಲುಕಿ ಕರಗುತ್ತಿವೆ.

ಈಗ ದೇವಸ್ಥಾನದ ಉಸ್ತುವಾರಿ ಹೊತ್ತಿರುವ ನಲ್ಲಪ್ಪನ ವಂಶೀಕರು, ಹಾಳಾಗಿರುವ ವಿಗ್ರಹಗಳನ್ನು ಬದಲಿಸಿ, ಅದೇ ತರದ ಹೊಸದನ್ನು ನಿರ್ಮಿಸಿ ಇರಿಸುವ ಕೆಲಸ ಮಾಡುತ್ತಿದ್ದಾರೆ.

▶8

ಭೂಹಗರಣದ ಸುಳಿಯಲ್ಲಿ ಬಿಷಪ್ ಬರ್ನಾಡ್ ಮೊರಾಸ್

ಬೆಂಗಳೂರು ಕ್ಯಾಥೊಲಿಕ್ ಕ್ರೈಸ್ತ ಸಭೆಯಲ್ಲಿ ಒಂದು ಧರ್ಮ ಯುದ್ಧ ಆರಂಭವಾಗಿದೆ. ಇದು ಧರ್ಮಕ್ಕೆ ಸಂಬಂಧ ಪಟ್ಟ ಯುದ್ಧ ಎನ್ನುವುದಕ್ಕಿಂತ ಚರ್ಚ್ ಆಸ್ತಿ ಹಗರಣ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಹೋರಾಟದ ಯುದ್ಧ.

ಒಂದು ಕಾಲಕ್ಕೆ ಕ್ರೈಸ್ತರೇ ಪ್ರಬಲವಾಗಿದ್ದ ಬೆಂಗಳೂರು ಉತ್ತರ ಜಿಲ್ಲೆಯ ಕಮ್ಮನಹಳ್ಳಿ ಎಂಬ ಊರೇ ಈಗ ಯುದ್ಧಭೂಮಿಯಾಗಿರುವುದು. ಕ್ರೈಸ್ತರ ಕನ್ನಡ ಹೋರಾಟದಲ್ಲಿ ದಶಕಗಳ ಹಿಂದೆಯೇ ಮುಂಚೂಣಿಯಲ್ಲಿದ್ದ ಕಮ್ಮನಹಳ್ಳಿ, ಬೆಂಗಳೂರು ಧರ್ಮಕ್ಷೇತ್ರದ ಹಿಂದಿನ ಭಾಷಾಂಧ ಧರ್ಮಾಧ್ಯಕ್ಷರುಗಳ ಅದಕ್ಷ ಆಡಳಿತದ ವಿರುದ್ಧ ನಡೆದ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕಾರಣಕ್ಕಾಗಿಯೇ ಈಗ ಬಲಿಪಶುವಾದಂತಿದೆ. ಕೊನೆಗೂ ಕಮ್ಮನಹಳ್ಳಿ ಕನ್ನಡಿಗರ ಮೇಲೆ ಪಟ್ಟಭದ್ರರು ಸೇಡು ತೀರಿಸಿಕೊಂಡರು ಎಂಬುದು ಇಲ್ಲಿನ ಮನೆಮಾತಾಗಿದೆ.

ಸ್ವಾತಂತ್ರ್ಯಪೂರ್ವ ವರ್ಷಗಳಲ್ಲಿ ಈಗಿರುವ ದೇವಾಲಯದ ಜಾಗದ ಒಂದು ಮೂಲೆಯಲ್ಲಿ ಪುಟ್ಟ ದೇವಾಲಯವಿತ್ತು. 1958ರಲ್ಲಿ ದೊಡ್ಡಗುಂಟೆ ಚೌರಪ್ಪ ಎಂಬುವವರ ಮಗ ಶ್ರೀ ಜೋಸೆಫ್ ರೆಡ್ಡಿ ಧರ್ಮಾಧ್ಯಕ್ಷ ಪೋತಕಮರಿಯವರ ಕಾಲದಲ್ಲಿ ದೇವಾಲಯ ಕಟ್ಟಲು ಮತ್ತು ಇತರ ಧಾರ್ಮಿಕ ಕಾರ್ಯಗಳಿಗೆ ಬಳಕೆಯಾಗುವಂತೆ ದೇವಾಲಯಕ್ಕೆ ಅಂಟಿಕೊಂಡಿದ್ದ ಸುಮಾರು 2.5 ಎಕರೆ ಭೂಮಿಯನ್ನು ದಾನವಾಗಿ ಬರೆದುಕೊಟ್ಟಿದ್ದರು.

ಕಮ್ಮನಹಳ್ಳಿಯ ಜನಸಂಖ್ಯೆ ವೇಗವಾಗಿ ಬೆಳೆಯಲಾರಂಭಿಸಿದ ಕಾರಣ ಅಲ್ಲಿದ್ದ ಪುಟ್ಟ ದೇವಾಲಯ ಸಾಕಾಗದೆ ಆಗಿನ ಧರ್ಮಾಧ್ಯಕ್ಷರಲ್ಲಿ ಹೊಸ ದೇವಾಲಯ ನಿರ್ಮಾಣಕ್ಕಾಗಿ ಬೇಡಿಕೆ ಸಲ್ಲಿಸಲಾಯಿತು. ಸುಮಾರು 20 ವರ್ಷಗಳ ಸತತ ಬೇಡಿಕೆಯ ನಂತರ ಈಗಿನ ಧರ್ಮಾಧ್ಯಕ್ಷ ಬರ್ನಾಡ್ ಮೊರಾಸ್‌ರು ಅಲ್ಲೊಂದು ದೇವಾಲಯ ಕಟ್ಟಲು ನಿರ್ಧರಿಸಿದರು. ಅಷ್ಟರಮಟ್ಟಿಗೆ ಕಮ್ಮನಹಳ್ಳಿಗೆ ಹಿಡಿದಿದ್ದ ಸೂತಕದ ಛಾಯೆ ಕಳೆಯಿತು ಎಂದು ಜನ ನಿಟ್ಟುಸಿರು ಬಿಡುವಷ್ಟರಲ್ಲಿ 'ಒಂದು ಕೈಯಲ್ಲಿ ಕೊಟ್ಟು ಇನ್ನೊಂದು ಕೈಯಲ್ಲಿ ಕಿತ್ತುಕೊಂಡರು' ಎಂಬಂತೆ ದೇವಾಲಯಕ್ಕೆ ಸೇರಿದ ಭೂಮಿಯನ್ನು ಸರಿಯಾಗಿ ಅರ್ಧರ್ಧ ಬಗೆದು ಬಿಲ್ಡರ್‌ಗಳಿಗೆ ಹಂಚಿ ಬೆಂಗಳೂರಿನ ಭೂಗಳ್ಳತನದ ಪಾಲುಗಾರರಾಗಿದ್ದಾರೆ ಬರ್ನಾಡ್ ಮೊರಾಸ್.

ಬೆಂಗಳೂರು ಧರ್ಮಕ್ಷೇತ್ರದಲ್ಲಿ ಆಡಳಿತ ವರ್ಗ 'ಲೀಸ್' ಹೆಸರಿನಲ್ಲಿ ಚರ್ಚ್‌ಗೆ ಸೇರಿದ ಆಸ್ತಿಯೊಂದಿಗೆ ಕಣ್ಣಾಮುಚ್ಚಾಲೆ ಆಡುತ್ತಾ ಭೂಮಿ ಮಾರಾಟದ ದಂಧೆಯಲ್ಲಿ ತೊಡಗಿರುವುದು ನಿನ್ನೆಮೊನ್ನೆಯ ವಿಷಯವಲ್ಲ.

ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಬರ್ನಾಡ್‌ನ ಒಂದು ಬೃಹತ್ ಎಸ್ಟೇಟ್, ವೈಟ್‌ಫೀಲ್ಡ್‌ನಲ್ಲಿರುವ ಚರ್ಚಿನ ಭೂಮಿ, ರೆಸಿಡೆನ್ಸಿ ರಸ್ತೆಯಲ್ಲಿದ್ದ ಗುರುಗಳ ತರಬೇತಿಯ ಸೆಮಿನರಿ ಭೂಮಿ, ಜೆ.ಸಿ.ರಸ್ತೆಯ ಚರ್ಚ್‌ಗೆ ಅಂಟಿಕೊಂಡಿರುವ ಅಂಗಡಿ ಮಳಿಗೆಗಳು, ರಿಚ್‌ಮಂಡ್ ರಸ್ತೆಯ ಸೇಕ್ರೆಡ್ ಹಾರ್ಟ್ ಚರ್ಚಿನ ಅರ್ಧಕ್ಕಿಂತ ಹೆಚ್ಚು ಜಾಗ, ಚಾಮರಾಜಪೇಟೆಯ ಸೈಂಟ್ ಜೋಸೆಫ್ ಚರ್ಚಿನ ಹಿಂಭಾಗದಲ್ಲಿರುವ ಜಾಗ–ಹೀಗೆ ಹತ್ತಾರು ಎಕರೆ ಚಿನ್ನಕ್ಕೆ ಸಮಾನವಾದ ಭೂಮಿ ಬಕರಿಯಾಗಿದೆ. ಮುಂದಿನ ದಿನಗಳಲ್ಲಿ ಹಳ್ಳಿಗಳಲ್ಲಿ ಭಕ್ತಾದಿಗಳು ದಾನ ಕೊಟ್ಟ ಚರ್ಚಿನ ಭೂಮಿಗಳು ಮಾರಾಟಕ್ಕೆ ಕಾದು ನಿಂತಿವೆ. ಇದರ ಸೂಚನೆಯೇ ಕಮ್ಮನಹಳ್ಳಿಯ ಭೂಮಿ ಮಾರಾಟ ದಂಧೆ.

ಬೈಬಲ್‌ನಲ್ಲಿ ಒಂದು ವಾಕ್ಯದಂತೆ, 'ಸರ್ವ ಜನಾಂಗಗಳಿಗೂ ಪ್ರಾರ್ಥನಾಲಯ ಆಗಬೇಕಿದ್ದ ದೇವಾಲಯಗಳು' ಈಗ ಭೂಮಾಫಿಯಾವೆಂಬ ಕಳ್ಳಕಾಕರ ಗುಹೆಗಳಾಗುತ್ತಿವೆ.

ಈಗ ಕಮ್ಮನಹಳ್ಳಿಯ ಚರ್ಚ್‌ಗೆ ಸೇರಿರುವ ನಲವತ್ತು ವರ್ಷಗಳ ಲೀಸ್‌ಗೆ ನೀಡಲಾಗಿರುವ ಸುಮಾರು **38,000** ಚದರ ಅಡಿ ಜಾಗದಲ್ಲಿ ಗೋಲ್ಡ್‌ಲೈನ್ ಬಿಲ್ಡರ್ಸ್ ಎಂಬ ಡೆವಲಪರ್ಸ್ ಸಂಸ್ಥೆ ಬೃಹತ್ ಮಾಲ್ ನಿರ್ಮಿಸಲಿದೆ. ರಸ್ತೆಯ ಒಂದು ಕಡೆ ಸಿಸ್ಟರ್‌ಗಳು ನಡೆಸುವ ಸೈಂಟ್ ಚಾರ್ಲ್ಸ್ ಶಾಲೆ ಇನ್ನೊಂದು ಕಡೆ ಚರ್ಚ್ ಇದೆ. ಇದರ ನಡುವೆ ಈಗ ಒಂದು ಫ್ಯಾಶನಬಲ್ ಮಾಲ್ ಏಳುತ್ತಿದೆ! ಇಂಥದ್ದೊಂದು 'ದೊ(ದ)ಡ್ಡ' ಬುದ್ಧಿಯ ಮಹಾಧರ್ಮಾಧ್ಯಕ್ಷರಿಗೆ ಹ್ಯಾಟ್ಸ್ ಆಫ್ ಹೇಳಲೇಬೇಕು.

ಚರ್ಚ್‌ನ ಧಾರ್ಮಿಕ ಆವರಣಕ್ಕೂ ವಾಣಿಜ್ಯ ಸಂಕೀರ್ಣಕ್ಕೂ ವ್ಯತ್ಯಾಸವಿಲ್ಲದಂತ ಪರಿಸ್ಥಿತಿ ಏರ್ಪಡಲಿದೆ. ಬೆಂಗಳೂರಿನ ಲೈಫ್ ಸ್ಟೈಲ್ ಪಕ್ಕ ಇರುವ ರಿಲಾಯನ್ಸ್ ಮತ್ತು ಸಮ್ಯಕ್ ಮಳಿಗೆಗಳು ಅಥವಾ ಸೇಂಟ್ ಪ್ಯಾಟ್ರಿಕ್ ಚರ್ಚ್‌ನ ಸುತ್ತ ಇರುವ ವಾಣಿಜ್ಯ ಮಳಿಗೆಗಳಿಗೂ ಕಮ್ಮನಹಳ್ಳಿಯಲ್ಲಿ ಕಟ್ಟಲಾಗುವ ವಾಣಿಜ್ಯ ಮಳಿಗೆಗೂ ಅಜಗಜಾಂತರ ವ್ಯತ್ಯಾಸವಿದೆ. ಇದು ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಇದ್ದಿದ್ದರೆ ಯಾರೂ ಪ್ರಶ್ನಿಸುತ್ತಿರಲಿಲ್ಲವೇನೋ.


ಫೆಬ್ರವರಿ 14ರಂದು ಧರ್ಮಾಧ್ಯಕ್ಷರು ಗೋಲ್ಡ್‌ಲೈನ್ ಬಿಲ್ಡರ್ಸ್ ಜೊತೆ ಮಾಡಿಕೊಂಡಿರುವ ಒಪ್ಪಂದದಲ್ಲಿ **"The LESSEE shall at all times be solely responsible for identification and securing of tenants for the entire built up or Commercial Space for setting up retailing, restaurants, food courts, entertainment and other related businesses therin order to set and sustain high standards for the Commercial Space and industry...."** ಎಂದಿದೆ. ಕಮ್ಮನಹಳ್ಳಿಯ ಹತ್ತನೇ ಭಕ್ತನಾಥರ ದೇವಾಲಯಕ್ಕೆ ಅಂಟಿಕೊಂಡಂತೆ ಈ ಮಾಲ್‌ನಲ್ಲಿ ಸಿನಿಮಾ ಮಂದಿರಗಳು, ನೈಟ್‌ಕ್ಲಬ್‌ಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳು ತಲೆ ಎತ್ತಬಹುದು.

ಇಷ್ಟು ಭೂಮಿ ಬಕರಿಯಾಗಲು ಯಾರು ಕಾರಣ ಎಂದಾಗ ಮಹಾಧರ್ಮಾಧ್ಯಕ್ಷ ಬರ್ನಾಡ್ ಮೊರಾಸ್ ಒಬ್ಬರನ್ನೇ ಅಪರಾಧಿಯಾಗಿ ನಿಲ್ಲಿಸುವಂತಿಲ್ಲ. ಬೆಂಗಳೂರು ಕ್ರೈಸ್ತ ಧರ್ಮಪೀಠದ ಅಧಿಕಾರವರ್ಗದವರ ಪಾಲು ಇದರಲ್ಲಿ ಸಾಕಷ್ಟಿದೆ. ಚರ್ಚಿನ ಭೂಮಿ, ಮಾರಾಟ, ಹಣಕಾಸು ನಿರ್ವಹಣೆಗೆ ಸಂಬಂಧಿಸಿದಂತೆ ಇಲ್ಲಿ ಹಲವು ಕಮಿಟಿಗಳಿವೆ. ಅವುಗಳಲ್ಲಿ ಪ್ರಮುಖವಾದದ್ದು ಎಸ್ಟೇಟ್ ಕಮಿಟಿ, ಪ್ರಾಪರ್ಟಿ ಕಮಿಟಿ ಮತ್ತು ಬರ್ನಾಡ್ ಮೊರಾಸರ ಆಪ್ತ ಸಲಹಾ ಸಮಿತಿ. ಇಲ್ಲಿ ಸ್ವಂತ ನಿಲುವಿನ ದಿಟ್ಟತನದಿಂದ ವಿರೋಧಿಸುವುದಿರಲಿ ಮಾತಾಡಬಹುದಾದ ಒಬ್ಬನೇ ಒಬ್ಬ ಸದಸ್ಯನಿಲ್ಲ. ಈ ಸಮಿತಿಗಳಲ್ಲಿ ಕೊಂಕಣಿ ಭಾಷಿಕರು ಬಹುಸಂಖ್ಯಾತರಾಗಿದ್ದರೆ ಕನ್ನಡಿಗ ಮತ್ತು ತಮಿಳು ಭಾಷಿಕ ಧರ್ಮಗುರುಗಳೂ ಇದ್ದಾರೆ. ಆದರೆ ಇವರೆಲ್ಲಾ ಚರ್ಚ್‌ನ ಭೂಮಿಯಂತೆ ಮಹಾಧರ್ಮಾಧ್ಯಕ್ಷರಿಗೆ ಬಕರಿಯಾಗಿಬಿಟ್ಟಿದ್ದಾರೆ.


ಈಗ ಸಮಸ್ಯೆ ಬಹಿರಂಗವಾಗಿ ಆಡಳಿತ ವರ್ಗಕ್ಕೆ ಭೂಮಾಫಿಯಾದ ಕಳಂಕ ಮೆತ್ತಿದ ಮೇಲೆ ಇವರ ರಾಗದ ಧಾಟಿ ಬದಲಾಗಿದೆ. ಇದು ನಾಲ್ಕು ವರ್ಷಗಳ ಮೊದಲೇ ಆದ ಒಪ್ಪಂದ, ಊರಿನ ಜನರಿಗೆಲ್ಲಾ ಗೊತ್ತಿತ್ತು, ಚರ್ಚ್‌ನಲ್ಲಿ ಪ್ರಕಟಿಸಲಾಗಿತ್ತು, ಈ ಕಾರಣಕ್ಕಾಗಿಯೇ ಅಲ್ಲಿದ್ದ ದಿವಂಗತ ಫಾದರ್ ಉಲ್ಲಾಸಪ್ಪ ಅವರ ಸಮಾಧಿಯನ್ನು ಸ್ಥಳಾಂತರಿಸುವಾಗಲೂ ಜನ ಸಹಕರಿಸಿದ್ದರು... ಇತ್ಯಾದಿ ಇತ್ಯಾದಿ.

ಆದರೆ ಇದ್ಯಾವುದೂ ಪ್ರಾಮಾಣಿಕ ಸಮರ್ಥನೆಯಲ್ಲ, ಜನ ಇದನ್ನು ಸಾರಾಸಗಟಾಗಿ ನಿರಾಕರಿಸುತ್ತಾರೆ.

"ಧರ್ಮಕೇಂದ್ರದ ಯಾರೋ ನಾಲ್ಕು ಜನರಿಗೆ ತಿಳಿಸಿದರೆ ಅದು ಇಡೀ ಧರ್ಮಕೇಂದ್ರಕ್ಕೆ ತಿಳಿಸಿದಂತೆ ಆಗುವುದಿಲ್ಲ. ನಮ್ಮಲ್ಲಿ ಪಾಲನಾ ಪರಿಷತ್ತು ಇಲ್ಲ, ಅಂಥದ್ದೊಂದು ಪರಿಷತ್ತು ಸಂಘಟಿಸಲು ಇಲ್ಲಿನ ಗುರುಗಳು ಉದ್ದೇಶಪೂರ್ವಕವಾಗಿಯೇ ಆಸಕ್ತಿ ವಹಿಸಲಿಲ್ಲ, ವಾಸ್ತವವಾಗಿ ದೇವಾಲಯದ ಆವರಣದ ಒಂದು ಮೂಲೆಯಲ್ಲಿ ನಾಲ್ಕಾರು ಅಂಗಡಿಗಳನ್ನು ಹಾಕಿ



ಅದರಿಂದ ದೇವಾಲಯಕ್ಕೆ ಆದಾಯ ಉತ್ಪಾದಿಸಲಾಗುತ್ತದೆ ಎಂದು ಜನರಿಗೆ ತಪ್ಪಾಗಿ ಬಿಂಬಿಸಲಾಯಿತು.



ಬರ್ನಾಡ್ ಮೊರಾಸ್

ಬೆಂಗಳೂರು ಧರ್ಮಕ್ಷೇತ್ರದ ಕ್ರೈಸ್ತರ ಆಕ್ರೋಶಕ್ಕೆ ಈ ಭೂ ಮಾರಾಟವಷ್ಟೇ ಕಾರಣವಲ್ಲ, ಇವರು ಕಟ್ಟುವ ಕಟ್ಟಡಗಳು, ಅದರ ಗುತ್ತಿಗೆದಾರರು, ಆರ್ಕಿಟೆಕ್ಟ್, ಇಂಜಿನಿಯರ್‌ಗಳ ನೇಮಕ ಇವೆಲ್ಲಾ ನಿಗೂಢವಾಗಿ ನಡೆದು ಹೋಗುವ ಕಾರ್ಯ ಎಂಬುದನ್ನು ಜನ ಗಮನಿಸುತ್ತಲೇ ಬಂದಿದ್ದಾರೆ. ಬಿಷಪ್ ಮೊರಾಸರು ತಿಂಗಳಿಗೊಂದರಂತೆ **30-40** ಪುಟಗಳ ಸುತ್ತೋಲೆ ಪ್ರಕಟಿಸುತ್ತಾರೆ ಧರ್ಮಕ್ಷೇತ್ರದ ಎಲ್ಲಾ ವಿಚಾರಗಳನ್ನು ತಿಳಿಸುತ್ತಾರೆ. ಹಾಗೆ ಧರ್ಮಕ್ಷೇತ್ರದಿಂದ ಪ್ರಕಟಗೊಳ್ಳುವ 'ತಾಬೋರ್' ಎಂಬ ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳಲ್ಲಾದರೂ ಇವರ ಭೂ ವ್ಯವಹಾರಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತಾಪಿಸಿದ್ದರೆ ಅವರ ಪಾರದರ್ಶಕತೆಗೆ ಸಾಕ್ಷಿಯಾಗುತ್ತಿತ್ತು.

ಇದ್ಯಾವುದನ್ನೂ ಲೆಕ್ಕಿಸದ ಬಿಷಪ್ ಬರ್ನಾಡ್ ಮೊರಾಸ್ ತಮ್ಮ ಅವಿವೇಕದ ನಿರ್ಧಾರಗಳಿಗೆ ಬೆಲೆ ತೆರಬೇಕಾಗಿದೆ. ಈಗ ಪರಿಸ್ಥಿತಿ ಗಂಭೀರವಾಗಿದೆ. ಬಿಷಪ್ಪರ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ. ಅದಕ್ಕೆ ಪ್ರತಿಯಾಗಿ ಈ ಹೋರಾಟದ ಮುಂಚೂಣಿಯಲ್ಲಿರುವ ಹತ್ತು ಹನ್ನೆರಡು ಜನರ ಮೇಲೆ ಅರೆಸ್ಟ್ ವಾರೆಂಟ್ ತರಲಾಗಿದೆ. ಮಾರಾಟದ ಭೂಮಿಗೆ ನ್ಯಾಯಾಲಯ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಇದೆಲ್ಲದರ ನಡುವೆ ಕರ್ನಾಟಕದಲ್ಲಿ ಕ್ರೈಸ್ತರು ಅದೆಷ್ಟು ಅಭದ್ರತೆಯಲ್ಲಿ ಬದುಕುತ್ತಿದ್ದಾರೆ ಎಂಬ ಕಲ್ಪನೆ ಬಹುಶಃ ಮಹಾಧರ್ಮಾಧ್ಯಕ್ಷರಿಗೆ ಇದ್ದಂತೆ ಕಾಣುವುದಿಲ್ಲ. ಒಂದು ಕಡೆ ಕೂಟಗಳಲ್ಲಿ ಸರ್ಕಾರಿ ಮಂತ್ರಿ ಮಹೋದಯರಲ್ಲಿ ಭಿನ್ನವಿಸಿ ಕೊಂಕಣಿ ಕ್ರೈಸ್ತ ಸಂಘಟನೆಗೆ ಭೂಮಿಯನ್ನು ದಾನವಾಗಿ ಕೇಳಿಕೊಳ್ಳುತ್ತಾರೆ. ಇನ್ನೊಂದು ಕಡೆ ಕ್ರೈಸ್ತ ಗ್ರಾಮೀಣ ಜನರ ಭೂಮಿಯನ್ನು ಭೂಗಳ್ಳರಿಗೆ ಸಾರಾಸಗಟಾಗಿ ಧಾರೆ ಎರೆದುಬಿಡುತ್ತಾರೆ. ಇದು ಧರ್ಮದ ದುರಂತವೋ ಆಡಳಿತ ವೈಫಲ್ಯವೋ ಕಾಲವೇ ನಿರ್ಧರಿಸಬೇಕು.

• ರೀಟಾ ರೀನಿ

▸7 ಜಾನ್ ತನ್ಮಯತೆ

ಜಾನ್ ನಮಗೆ ಸಿಕ್ಕಿದ್ದು ಅಲ್ಲೇ!

ನಾವೊಂದಿಷ್ಟು ಜನ ಗೆಳೆಯರು ಒಮ್ಮೆ ಸೀಬಿಗೆ ಹೋಗಿದ್ದಾಗ ಹನ್ನೆರಡಡಿ ಎತ್ತರದ ಗೋಡೆಯ ಮೇಲೆ ಹಲವಾರು ಜನ ನಿಂತು ಕೆಲಸ ಮಾಡುತ್ತಿದ್ದರು. ಮುರಿದು ಹೋಗಿದ್ದ ವಿಗ್ರಹಗಳ ಕೈಕಾಲುಗಳ ಪುನರ್‌ನಿರ್ಮಾಣ, ಕರಗಿಹೋಗಿದ್ದ ದೇವತೆಗಳ ಕೆನ್ನೆ, ಮೂಗುಗಳ ರಿಪೇರಿ ಅಲ್ಲಿ ನಡೆಯುತ್ತಿತ್ತು.

ಆ ಇಡೀ ಕೆಲಸದ ಉಸ್ತುವಾರಿ ನಡೆಸುತ್ತಿದ್ದವರೇ ಈ ಜಾನ್. ಅವರಿಗೀಗ ಎಪ್ಪತ್ತೈದು ವರ್ಷ. ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾದಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷ ಕಾಲ ಕೆಲಸ ಮಾಡಿ ಈಗ ರಿಟೈರ್ಡ್ ಆಗಿದ್ದಾರೆ. ನಮ್ಮನ್ನು ಪರಿಚಯಿಸಿಕೊಳ್ಳಲು ಗೋಡೆಯ ಮೇಲೆ ನಿಂತಿದ್ದ ಜಾನ್ ನಿಧಾನಕ್ಕೆ ಏಣಿಯ ಮೆಟ್ಟಿಲಿಳಿದು ಬಂದರು. ಸರಳವಾದ ಪ್ಯಾಂಟು ಶರ್ಟ್ ತೊಟ್ಟಿದ್ದ ಈ ಜಾನ್ ಎಂಬ ವ್ಯಕ್ತಿ ಹಿಂದೂ ದೇವಾಲಯವೊಂದರ ಪುನರ್ನಿರ್ಮಾಣದ ಜವಾಬ್ದಾರಿ ಹೊತ್ತಿದ್ದು ಗಮನಿಸಿ ನಮಗೆ ಕುತೂಹಲ ಎನಿಸಿತು.

ಈ ಪುರಾತನ ವಿಗ್ರಹಗಳ ಅಥವಾ ದೇವಾಲಯಗಳ ರಿಪೇರಿ ಕೆಲಸ ಅಂದರೆ ಮನೆಗಳ ಅಥವಾ ಸಿಟಿ ಟೆಂಪಲ್‌ಗಳ ರಿಪೇರಿ ತರದ ಸಲೀಸು ಕೆಲಸವಲ್ಲ.


ನಮ್ಮ ಕೆಲಸ ಮುಗಿಸಿಕೊಂಡು ಜಾನ್ ಉಳಿದುಕೊಂಡಿದ್ದ 10x10 ಅಡಿಯ ಚಪ್ಪಡಿಕಲ್ಲಿನ ವಸತಿಗೆ ಹೋದಾಗ ನಮಗೆ ಹೊಸ ಜಗತ್ತನ್ನೇ ಜಾನ್ ಪರಿಚಯಿಸಿದರು.

ಜಾನ್‌ಗೆ ಇಡೀ ಇಂಡಿಯಾದ, ಅಷ್ಟೇ ಏಕೆ, ದಕ್ಷಿಣ ಏಷಿಯಾದ ದೇಶಗಳ ಒಂದೂವರೆ ಸಾವಿರ ವರ್ಷಗಳ ಶಿಲ್ಪಕಲಾ ಶಾಸ್ತ್ರದ ಪರಿಚಯವಿದೆ. ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾದಲ್ಲಿ ಜಾನ್ ಕೆಲಸ ಮಾಡುತ್ತಿದ್ದಾಗ ಇಂಡಿಯಾ ಪೂರ್ತಿ ಓಡಾಡಿದ್ದಾರೆ. ಗುಜರಾತ್, ಒರಿಸ್ಸಾದ ಪುರಿ ದೇವಾಲಯ, ಹಂಪೆಯ ದೇವಾಲಯಗಳು, ತಮಿಳುನಾಡಿನ ಮಹಾಬಲಿಪುರಂ ದೇವಾಲಯಗಳ ಪುನರ್ ನಿರ್ಮಾಣದಲ್ಲೆಲ್ಲಾ ಜಾನ್‌ರ ಶಿಲ್ಪಕಲಾಜ್ಞಾನ ಹಾಗೂ ಪರಿಣತಿಯ ಕೊಡುಗೆ ಇದೆ.

ಹಂಪೆಯಲ್ಲಿ ಈಗ ತಲೆಯೆತ್ತಿರುವ ಅತ್ಯಮೂಲ್ಯ ಮ್ಯೂಸಿಯಂ ಸಹ ಜಾನ್‌ರ ಶ್ರಮದ ಫಲವೆ.

ಅವರ ಕೆಲಸ ಅದೆಷ್ಟು ಸಂಕೀರ್ಣ ಹಾಗೂ ಸವಾಲಿನದು ಎಂದು ತಿಳಿಯಲು ಒಂದು ಉದಾಹರಣೆ ಕೊಡುತ್ತೇನೆ ನೋಡಿ.

ಒರಿಸ್ಸಾದ ಪುರಾತನ ದೇವಾಲಯವೊಂದರಲ್ಲಿನ ಸ್ತ್ರೀ ದೇವತೆಯರ ವಿಗ್ರಹಗಳ ಎರಡೆರಡು ಕೈಗಳು ಮುರಿದು ಬಿದ್ದಿವೆ ಎಂದಿಟ್ಟುಕೊಳ್ಳಿ. ಜಾನ್ ತರಹದವರು ಅದರ ರಿಪೇರಿಗೆ ಕೈಹಾಕುವಾಗ ಆ ವಿಗ್ರಹಗಳು ಯಾವ ಶತಮಾನದ್ದು, ಯಾವ ರಾಜನ ಆಳ್ವಿಕೆಯದ್ದು, ಸಾಧ್ಯವಾದರೆ



ಸೀಬಿ ದೇವಾಲಯದ ಒಂದು ನೋಟ

ಯಾವ ಶಿಲ್ಪಿ, ಯಾವ ಶೈಲಿಯದ್ದು ಎಂಬುದನ್ನೆಲ್ಲಾ ಗಮನಿಸುತ್ತಾರೆ. ಆ ದೇವತೆಗೆ ನಾಲ್ಕು ಕೈಗಳಿದ್ದರೆ ಯಾವ ಕೈಯಲ್ಲಿ ಹೂವಿರಬೇಕು, ವೀಣೆ ಯಾವ ಕೈಲಿರಬೇಕು, ಆಶೀರ್ವಾದದ ಭಂಗಿಯ ಕೈ ಯಾವುದಿರಬೇಕು, ಆಯುಧ ಯಾವ ಕೈಲಿರಬೇಕೆಂಬುದನ್ನೆಲ್ಲಾ ನಮ್ಮ ವಾಸ್ತುಶಿಲ್ಪ ಪರಂಪರೆಯನ್ನು ಗಮನಿಸಿ ನಿರ್ಧರಿಸಬೇಕಾಗುತ್ತದೆ.

ಜಾನ್ ಇಂಥದ್ದರಲ್ಲಿ ಅಪ್ರತಿಮ ಜ್ಞಾನಿ.

ಇವರ ಸಾಧನೆಗಳ ಪಟ್ಟಿಯಲ್ಲಿ 1958ರಲ್ಲಿ ಹೈದರಾಬಾದ್‌ನ ನಾಗಾರ್ಜುನ ಸಾಗರದ ದ್ವೀಪದಲ್ಲಿ ನೆಹರು ಪ್ರಾರಂಭಿಸಿದ ಮ್ಯೂಸಿಯಂ ಇದೆ. ಕೊಲ್ಕತ್ತಾದ ಬುದ್ಧಗಯಾ, ಸಾರಾನಾಥ, ಮದ್ರಾಸ್‌ನ ಸೆಂಟ್ ಜಾರ್ಜ್ ಪೋರ್ಟ್ ಮ್ಯೂಸಿಯಂ, ಹಂಪಿಯ ಮ್ಯೂಸಿಯಂನ ಸ್ಥಾಪನೆಗಳ ಹಿಂದಿನ ಕೊಡುಗೆ ಇದೆ. ಹಂಪಿಯಲ್ಲಿರುವ ಶ್ರೀ ಕೃಷ್ಣದೇವರಾಯನ ವಿಗ್ರಹವು ತಿರುಪತಿಯ ವಿಗ್ರಹದ **replica**. ಅದನ್ನು ಮಾಡಿಕೊಟ್ಟವರೂ ಸಹ ಇದೇ ಜಾನ್. ಹಂಪಿಯಲ್ಲಿ ಈಗ ಪುನರ್‌ನಿರ್ಮಿಸಿರುವ ದಸರಾ ದಿಬ್ಬದ ಕೆಲಸದಲ್ಲೂ ಜಾನ್ ಇದ್ದರಂತೆ.

ಅವತ್ತು ಮಧ್ಯಾಹ್ನವಿಡೀ ಜಾನ್ ತಮ್ಮ ಬದುಕಿನ ಅನೇಕ ಘಟನೆಗಳನ್ನು, ಓಡಾಡಿದ ತಾಣಗಳ ವಿವರಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಇಂದಿರಾ ಗಾಂಧಿ ಪ್ರಧಾನಿಯಾಗಿದ್ದಾಗೊಮ್ಮೆ ಜಾನ್ ಹಾಗೂ ಇನ್ನಿತರ ಪುರಾತನ ಶಿಲ್ಪ ಶಾಸ್ತ್ರಜ್ಞರನ್ನು ಕಾಂಬೋಡಿಯಾ ದೇಶಕ್ಕೆ ಕಳಿಸಿದ್ದರಂತೆ. ಅಲ್ಲಿನ ಸರ್ಕಾರ 3ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದ ಸೂರ್ಯವರ್ಮ ನಿರ್ಮಿಸಿರುವ ಸೂರ್ಯ ದೇವಾಲಯದ ಪುನರ್ ನಿರ್ಮಾಣಕ್ಕೆ ಭಾರತದ ಪರಿಣಿತರ ನೆರವು ಕೇಳಿತ್ತಂತೆ. "ಕರ್ನಾಟಕದ ಪ್ರಸಿದ್ಧ ಹರಿಹರ ದೇವಾಲಯದ ವಿಗ್ರಹವೇ ಒಮ್ಮೆ ಬಿರುಕು ಬಿಟ್ಟಾಗ ಅದನ್ನು ಸರಿಪಡಿಸಿ ಕೊಟ್ಟದ್ದು ನಾನೇ" ಅಂತಲೂ ಜಾನ್ ಹೇಳಿದರು.

"Nature is the first enemy of monument" ಎನ್ನುತ್ತಾ ಕಾಲನ ಹೊಡೆತಕ್ಕೆ ಸಿಲುಕಿ ಜೀರ್ಣವಾಗಿ ಹೋದ ಅನೇಕ ಪುರಾತನ ದೇವಾಲಯಗಳ, ಸ್ಮಾರಕಗಳ ಘಟನೆಗಳನ್ನೆಲ್ಲಾ ವಿವರಿಸಿದರು.

ಅವರ ಮಾತುಗಳನ್ನು ಕೇಳುತ್ತಾ ಕುಳಿತಿದ್ದ ನಮಗೆ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಜಾನ್‌ರ ಪುಟ್ಟ ವಸತಿಯ ಅನತಿ ದೂರದಲ್ಲಿ ಒಂದು ಕಲ್ಯಾಣಿ ಇತ್ತು. ಅಲ್ಲಿನ ಮೆಟ್ಟಲುಗಳ ಮೇಲೆ ಯಾರೊ ಕೂತಿದ್ದರು. ದನ-ಕುರಿ ಮೇಯಿಸುತ್ತಿದ್ದ ಒಂದಿಬ್ಬರು ಬೃಹತ್ ಆಲದಮರದ ಕೆಳಗೆ ಕೂತು ವಿಶ್ರಮಿಸಿಕೊಳ್ಳುತ್ತಿದ್ದರು. ಆಗ ಟಿಪ್ಪುವಿನ ಅಚ್ಚುಮೆಚ್ಚಿನ ಮೃಗಯಾವಿಹಾರದ ತಾಣವಾಗಿತ್ತಂತೆ ಸೀಬಿ.

ನಾನೊಮ್ಮೆ ಜಾನ್‌ರತ್ತ ನೋಡಿದೆ. ಭರತಖಂಡದ ಶ್ರೇಷ್ಠ ಶಿಲ್ಪಶಾಸ್ತ್ರ ತಜ್ಞನೊಬ್ಬ ಕುಗ್ರಾಮವೊಂದರಲ್ಲಿ ನೆಲೆಸಿ ನಮ್ಮೊಂದಿಗೆ ಕುಳಿತು ಮಾತನಾಡುತ್ತಿದ್ದಾರೆ. ಕೆಲಸದಿಂದ ನಿವೃತ್ತನಾದರೂ ಜಾನ್‌ರಿಗಿದ್ದ ವಿಷಯ ಜ್ಞಾನವನ್ನು ನೋಡಿ ಈಗಲೂ ಪುರಾತತ್ವ ಇಲಾಖೆಯು ದೇಶದ ಯಾವುದೇ ಮೂಲೆಯಲ್ಲಾಗಲೀ ಒಂದು ಪ್ರಾಚೀನ ದೇಗುಲವೊ, ವಿಗ್ರಹವೊ ಶಿಥಿಲಗೊಂಡರೆ ತಕ್ಷಣ ಸಹಾಯ ಮಾಡುವಂತೆ ಜಾನ್‌ಗೆ ಮನವಿ ಕಳಿಸುತ್ತದೆ. ಈ ಜಾನ್ ನಿಂತ ಹೆಜ್ಜೆಯಲ್ಲೇ ಹೊರಟುಬಿಡುತ್ತಾರೆ. ತಮ್ಮ ಕೆಲಸಕ್ಕೆ ಎಷ್ಟು ಹಣ ಕೊಡುತ್ತೀರಿ, ಊಟ-ವಸತಿ ಸೌಲಭ್ಯ ಹೇಗೆ... ಈ ತರಹದ ಒಂದೇ ಒಂದು ಪ್ರಶ್ನೆಯನ್ನು ಜಾನ್ ಕೇಳುವುದಿಲ್ಲ.

ಸೀಬಿಯಂತಹ ಕುಗ್ರಾಮದಲ್ಲಿ ಕಳೆದ ಒಂದು ವರ್ಷದಿಂದ ಜಾನ್ ವಾಸವಿದ್ದಾರೆ. ಅವರಿರುವ ವಸತಿ ಚಪ್ಪಡಿಕಲ್ಲಿನದ್ದು, ಅಡುಗೆ ತಾವೇ ಮಾಡಿಕೊಳ್ಳುತ್ತಾರೆ. ಎಷ್ಟೇ ಅಪರಿಚಿತ ಜನ, ಅಪರಿಚಿತ ಸ್ಥಳವಾಗಿರಲಿ ಜಾನ್ ಕೈಗೆತ್ತಿಕೊಂಡ ಕೆಲಸ ಪೂರ್ಣಗೊಳಿಸದೆ ಬಿಡುವುದಿಲ್ಲ.

ಅವರ ವೈಶಿಷ್ಟ್ಯವೇನೆಂದರೆ ನಾವಾಗಿ ಕೇಳದ ಹೊರತು ಅವರು ತಮ್ಮ ಬಗ್ಗೆ ಏನನ್ನು ಹೇಳಿಕೊಳ್ಳುವುದಿಲ್ಲ. ಜಾನ್ ಆಂಧ್ರದ ಗುಂಟೂರಿನವರಂತೆ.

ಈ ಜಾನ್ ನಿಜಕ್ಕೂ ಅಪರೂಪದ ವ್ಯಕ್ತಿ. ಅವರ ಒಂದಷ್ಟು ಫೋಟೊ ತೆಗೆದು ಹೊರಡುವಾಗ ನಾನು ಕೇಳಿದೆ.

"ಸಾರ್ ನಿಮ್ಮ ಪೂರ್ತಿ ಹೆಸರೇನು?"

ಇಡೀ ಭರತಖಂಡದ ಉದ್ದಗಲಕ್ಕೂ ಓಡಾಡುತ್ತಾ, ಶಿಥಿಲಗೊಂಡ ಪ್ರಾಚೀನ ಹಿಂದೂ ದೇವಾಲಯಗಳನ್ನೆಲ್ಲಾ ಸರಿಪಡಿಸುತ್ತಾ ಆ ಕೆಲಸದಲ್ಲೇ ಸಾರ್ಥಕತೆ ಕಾಣುತ್ತಿರುವ ಆ ಶಿಲ್ಪಕಲಾ ತಜ್ಞನ ಪೂರ್ತಿ ಹೆಸರನ್ನು ನಾನು ತಿಳಿಯ ಬಯಸಿದ್ದೆ.

ವೃದ್ಧ ಜಾನ್ ನಸುನಗುತ್ತಾ

"ಷೇಕ್ ಮಹಮದ್ ಜಾನ್" ಅಂದರು.

• ಪಾರ್ವತೀಶ

ಉಷಾ ಪಟವಾರಿಯ ಸಾಧನೆಯನ್ನು ಮೆಚ್ಚಿ ಅದೇ ಇಲಾಖೆಯ ಜನರಲ್. ಮ್ಯಾನೇಜರ್ ಹುದ್ದೆಯನ್ನು ದಯಪಾಲಿಸಿದ್ದರೆ, ಮುನಿರಾಜುಗೆ ರಾಮನಗರ ಜಿಲ್ಲೆಗೆ ಬಡ್ತಿಯೊಂದಿಗೆ ವರ್ಗಾವಣೆ ಮಾಡಿ ಇದೇ ಇಲಾಖೆಯ ಅಧೀನ ಕಾರ್ಯ ದರ್ಶಿ ಬಿ.ಕಮಲಮ್ಮ ಆದೇಶ ಹೊರಡಿಸಿದ್ದಾರೆ. ಈ ಆದೇಶದಲ್ಲಿ ಲೊಕಾಯುಕ್ತ ಕೇಸಿನ ಬಗ್ಗೆಯಾಗಲಿ ಅಥವಾ ಇಲಾಖಾ ವಿಚಾರಣೆ ಬಾಕಿಯಿರುವ ಬಗ್ಗೆಯಾಗಲಿ ಕನಿಷ್ಟ ಉಲ್ಲೇಖವೂ ಇಲ್ಲ.



ಸದಾನಂದ ಸರ್ಕಾರ ಮಕ್ಕಳ ಊಟ ಕದ್ದವರಿಗೆ ಬಡ್ತಿ

ಭ್ರಷ್ಟ ಅಧಿಕಾರಿಗಳ ಮನೆ ಅಥವಾ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆದು ಭ್ರಷ್ಟರನ್ನು ಬಂಧಿಸಿದ ನಂತರ ಮುಂದೇನಾಗುತ್ತದೆ? ಆ ಭ್ರಷ್ಟ ಅಧಿಕಾರಿಗಳಿಗೆ ಇನ್ನೂ ಉತ್ತಮ ಆದಾಯವಿರುವ ಹುದ್ದೆಗಳಿಗೆ ಪ್ರಮೋಷನ್ ನೀಡಲಾಗುತ್ತದೆ. ಹೌದು, ಇದು ಸದಾನಂದ ಗೌಡ ಸರ್ಕಾರದ ನೀತಿ. ಈ ಕಹಿಸತ್ಯವನ್ನು ನಂಬುವುದು ಕಷ್ಟ. ಆದರೆ ಬಿಜೆಪಿಯ ಸಾಧಕರಿಗೆ ಅಸಾಧ್ಯವಾದುದು ಯಾವುದೂ ಇಲ್ಲವಾದ್ದರಿಂದ ನಾವು ನಂಬಲೇಬೇಕು. ವಿವರಗಳನ್ನು ನೋಡಿ.

ಅಪೌಷ್ಠಿಕತೆಯಿಂದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನೂರಾರು ಎಳೆಯ ಕಂದಮ್ಮಗಳು ಸಾವನ್ನಪ್ಪಿದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾಧ್ಯಮಗಳಲ್ಲಿ ಸುದ್ದಿಯಾಗಿ ಸರ್ಕಾರ ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಆದರೆ ವಿಪರ್ಯಾಸವೇನೆಂದರೆ ಕೇಂದ್ರ ಸರ್ಕಾರದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಐಸಿಡಿಎಸ್) ಕಳೆದ 35 ವರ್ಷಗಳಿಂದಲೂ ಚಾಲ್ತಿಯಲ್ಲಿದ್ದು ಅದಕ್ಕಾಗಿ ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ಈ ಬಾಬತ್ತಿಗೆ ಸುಮಾರು 600 ಕೋಟಿಗಳನ್ನು ಈ ಸಾಲಿನ ವೆಚ್ಚಕ್ಕಾಗಿ ಒದಗಿಸಲಾಗಿದೆ., ಹಳ್ಳಿಗಳಲ್ಲಿ ಮತ್ತು ನಗರದ ಕೊಳಗೇರಿಗಳಲ್ಲಿ ಅಸ್ತಿತ್ವದಲ್ಲಿರುವ ಅಂಗನವಾಡಿಗಳ ಮೂಲಕ ಬಡಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಒದಗಿಸುವುದೇ ಈ ಯೋಜನೆಯ ಉದ್ದೇಶ. ಆದರೆ ಕರ್ನಾಟಕವನ್ನು ಭೂತಗಳಂತೆ ಕಾಡುತ್ತಿರುವ ಭ್ರಷ್ಟ ಅಧಿಕಾರಿಗಳು ಬಡ ಮಕ್ಕಳ ಅನ್ನಕ್ಕೂ ಅಮರಿಕೊಂಡು ಅವರನ್ನು ಸಾವಿನಂಚಿಗೆ ದೂಡುತ್ತಿದ್ದಾರೆ.

ಮಕ್ಕಳ ಅನ್ನ ಕದಿಯಲು ಅಧಿಕಾರಿಗಳು ಹೂಡಿದ ತಂತ್ರ ಮಾತ್ರ ಸ್ವಲ್ಪ ಭಿನ್ನ. ಇದಕ್ಕಾಗಿ ತಮಿಳುನಾಡಿನ ಮೂಲದ 'ಕ್ರಿಸ್ಟಿ ಫ್ರೈಡ್‌ಗ್ರಾಮ್ ಇಂಡಸ್ಟ್ರೀಸ್' ಎಂಬ ದರೋಡೆ ಕಂಪನಿಗೆ ಪ್ಯಾಕ್ ಮಾಡಿದ ಆಹಾರವನ್ನು ಸರಬರಾಜು ಮಾಡಲು ಹೊರಗುತ್ತಿಗೆ ನೀಡಿದ್ದಾರೆ. ಈ ದುಷ್ಟ ಕಂಪನಿ ಮತ್ತು ಅಧಿಕಾರಿಗಳು ಸೇರಿಕೊಂಡು ದನಗಳಿಗೆ ಹಾಕುವ ತೌಡಿನಂತಹ ಆಹಾರವನ್ನು ಬಡಮಕ್ಕಳಿಗೆ ಉಣಬಡಿಸುತ್ತಿದ್ದಾರೆ. ಪರಿಣಾಮವಾಗಿ ಅಪೌಷ್ಠಿಕತೆ ಮುಂತಾದ ರೋಗರುಜಿನಗಳಿಂದ ಮಕ್ಕಳು ಎಲುಬಿನ ಹಂದರದಂತಾಗಿ ಸಾಯುತ್ತಿದ್ದರೆ, ಇಲಾಖೆಯ ಅಧಿಕಾರಿಗಳ ಆಸ್ತಿಪಾಸ್ತಿಗಳು ಬೆಳೆಯುತ್ತಾ ಹೋಗುತ್ತಿವೆ.


ಹೀಗೆ ಅಪೌಷ್ಠಿಕತೆಯಿಂದ ಸಾಯುತ್ತಿರುವ ಬಡಮಕ್ಕಳ ಹಣವನ್ನೂ ನುಂಗಿಹಾಕುತ್ತಿರುವ ನರರೂಪ ರಾಕ್ಷಸ ಅಧಿಕಾರಿಗಳ ವಿರುದ್ಧ ಕೆಲವು ಸಂಘ ಸಂಸ್ಥೆಗಳು ಲೋಕಾಯುಕ್ತಕ್ಕೆ ಮೊರೆ ಹೋಗಿದ್ದರು. ಪರಿಣಾಮವಾಗಿ ಲೋಕಾಯುಕ್ತ ಪೊಲೀಸರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಶ್ರೀಮತಿ ಶಾಮ್ಲಾ ಇಕ್ಬಾಲ್, ಜಂಟಿ ನಿರ್ದೇಶಕಿ ಉಷಾ ಪಟವಾರಿ ಮತ್ತು ಸಹಾಯಕ ನಿರ್ದೇಶಕ ಎಂ.ಮುನಿರಾಜು ಎಂಬ ಮೂರುಜನ ಅಧಿಕಾರಿಗಳ ಮನೆ ಮತ್ತು ಕಚೇರಿ ಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ಆಸ್ತಿಪಾಸ್ತಿಗಳನ್ನು ಮತ್ತು ದಾಖಲಾತಿಗಳನ್ನು ವಶಪಡಿಸಿಕೊಂಡಿದ್ದರು. ಜೊತೆಗೆ ಕ್ರಿಸ್ಟಿ ಫ್ರೈಡ್‌ಗ್ರಾಮ್ ಕಂಪನಿಯ ಕಚೇರಿ ಮತ್ತು ಆಹಾರ ತಯಾರಿಕಾ ಘಟಕಗಳ ಮೇಲೂ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ಸಾವಿರಾರು ಆಹಾರದ ಪೊಟ್ಟಣಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಈ ಆಹಾರ ಪೊಟ್ಟಣಗಳನ್ನು ಪರೀಕ್ಷಿಸಿದಾಗ ಕಂಡುಬಂದಿರುವ ಅಂಶಗಳು ಆಘಾತಕಾರಿ



ಯಾಗಿವೆ. ಪೊಟ್ಟಣದ ಮೇಲೆ ಮುದ್ರಿತವಾಗಿರುವ ಪೌಷ್ಠಿಕಾಂಶಗಳ ವಿವರಗಳಿಗೂ ವಾಸ್ತವವಾಗಿ ಆಹಾರದಲ್ಲಿದ್ದ ಅಂಶಗಳಿಗೂ ಅಜಗಜಾಂತರ ವ್ಯತ್ಯಾಸವಿದ್ದುದಲ್ಲದೆ, ಅವು ಮಕ್ಕಳ ಆರೋಗ್ಯಕ್ಕೆ ಮಾರಕವಾಗಬಹುದಾದ ಸಾಧ್ಯತೆಯನ್ನು ಅಧ್ಯಯನಗಳು ದೃಢಪಡಿಸಿವೆ.

ಸಹಾಯಕ ನಿರ್ದೇಶಕ ಮುನಿರಾಜುವಿನ ಕಚೇರಿಯ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಪೊಲೀಸರು ಟೇಬಲ್ಲಿನ ಮೇಲಿದ್ದ ಸಿಡಿಯನ್ನು ವಶಪಡಿಸಿಕೊಳ್ಳುತ್ತಿದ್ದಂತೆ ಅಲ್ಲೇ ಇದ್ದ ಮುನಿರಾಜು ಪಟಕ್ಕನೆ ಆ ಸಿಡಿಯನ್ನು ಕಸಿದುಕೊಂಡು ಅಧಿಕಾರಿಗಳ ಎದುರಿನಲ್ಲೇ ಅದನ್ನು ಮುರಿದು ಪುಡಿಪುಡಿ ಮಾಡಿಬಿಟ್ಟ. ಈ ವಿಷಯವನ್ನು ತಮ್ಮ ಮೇಲಧಿಕಾರಿಗಳ ಗಮನಕ್ಕೆ ತಂದು ಅವರ ಸೂಚನೆಯ ಮೇರೆಗೆ ಈತನನ್ನು ಬಂಧಿಸಿ ಜೈಲಿಗೆಗಟ್ಟಿದ್ದರು. ಈ ಅವ್ಯವಹಾರಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳು ಆ ಸಿಡಿಯಲ್ಲಿದ್ದಿರಬಹುದೆಂದು ಭಾವಿಸಿರುವ ಲೋಕಾಯುಕ್ತ ಪೊಲೀಸರು ಸಾಕ್ಷ್ಯ ನಾಶದ ಕೇಸನ್ನು ಸಹ ದಾಖಲಿಸಿದ್ದಾರೆ. ಈ ಮೂವರು ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ವಿರೋಧಿ ಕಾಯಿದೆಯಡಿ ಪ್ರಕರಣ ದಾಖಲಾಗಿದೆ.



ಇಷ್ಟೆಲ್ಲಾ ಆದಮೇಲೆ ಸಂಬಂಧಿಸಿದ ಇಲಾಖೆ ಮತ್ತು ಸರ್ಕಾರ ಕೈಗೊಂಡ ಕ್ರಮಗಳೇನು ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಆದರೆ ಸದಾನಂದಗೌಡರ ಸರ್ಕಾರದ ಯೋಗ್ಯತೆಯನ್ನು ಅರ್ಥಮಾಡಿಕೊಳ್ಳಲು ಅವರು ತೆಗೆದುಕೊಂಡಿರುವ ಈ ನಾಚಿಕೆಗೆಟ್ಟ ಕ್ರಮವೇ ಸಾಕ್ಷಿ. ಉಷಾ ಪಟವಾರಿಯ ಸಾಧನೆಯನ್ನು ಮೆಚ್ಚಿ ಅದೇ ಇಲಾಖೆಯ ಜನರಲ್ ಮ್ಯಾನೇಜರ್ ಹುದ್ದೆಯನ್ನು ದಯಪಾಲಿಸಿದ್ದರೆ, ಮುನಿರಾಜುಗೆ ರಾಮನಗರ ಜಿಲ್ಲೆಗೆ ಬಡ್ತಿಯೊಂದಿಗೆ ವರ್ಗಾವಣೆ ಮಾಡಿ ಇದೇ ಇಲಾಖೆಯ ಅಧೀನ ಕಾರ್ಯ ದರ್ಶಿ ಬಿ.ಕಮಲಮ್ಮ ಆದೇಶ ಹೊರಡಿಸಿ ದ್ದಾರೆ. ಈ ಆದೇಶದಲ್ಲಿ ಲೊಕಾಯುಕ್ತ ಕೇಸಿನ ಬಗ್ಗೆಯಾಗಲಿ ಅಥವಾ ಇಲಾಖಾ ವಿಚಾರಣೆ ಬಾಕಿಯಿರುವ ಬಗ್ಗೆ ಯಾಗಲಿ ಕನಿಷ್ಟ ಉಲ್ಲೇಖವೂ ಇಲ್ಲ.

ಶಹಬ್ಬಾಸ್!!

ಇದು ಸಂಘಪರಿವಾರದ ಆಣತಿಯಂತೆ ರಾಜ್ಯವನ್ನು ಪರಿಪಾಲಿಸಲು ನಿಂತಿರುವ ಸದಾನಂದ ಗೌಡ ಸರ್ಕಾರದ ನೀತಿ!!! ಇಂಥ ಮಾನಗೇಡಿ ಆದೇಶ ಹೊರಡಿಸಿರುವ ಈ ಕಮಲಮ್ಮ ಎಂಬ ಹಿರಿಯ ಅಧಿಕಾರಿ ಯಾರು ಅಂತೀರಾ? ಈಕೆ ಈ ಹಿಂದೆ 2007 ರಲ್ಲಿ, ಜಕ್ಕೂರು ವಿಮಾನ ತರಬೇತಿ ಸಂಸ್ಥೆಗೆ ಸಂಬಂಧಿಸಿದ ಗುತ್ತಿಗೆ ಅವ್ಯವಹಾರದಲ್ಲಿ ರಾಜ್ಯಪಾಲರ ಸಹಿಯನ್ನೇ ಫೋರ್ಜರಿ ಮಾಡಿ ಸಿಕ್ಕಿಬಿದ್ದಿದ್ದಾಕೆ. ಈ ಬಗ್ಗೆ ತನಿಖೆ ನಡೆಸಿದ್ದ ಸಿಓಡಿಯವರು ತಮ್ಮ ವರದಿಯಲ್ಲಿ ಹೆಸರಿಸಿದ್ದ 3 ಮಂದಿ ಅಧಿಕಾರಿಗಳಲ್ಲಿ ಈ ಕಮಲಮ್ಮನೂ ಒಬ್ಬಳು. ಬಹುಶಃ ಇಂಥಾ ಕ್ರಿಮಿನಲ್ ಫೋರ್ಜರಿ ಅಧಿಕಾರಿ ಇಲಾಖೆಯ ಮಂತ್ರಿ ಬ್ಲೂಬಾಯ್ ಪಾಟೀಲನಿಗೆ ಬಹಳ ಅಚ್ಚುಮೆಚ್ಚಾಗಿ ಕಂಡಿರಬೇಕು. ಇಂಥಾ ದೊಡ್ಡ ದೊಡ್ಡ ಕಳ್ಳರೆಲ್ಲಾ ಸೇರಿಕೊಂಡು ಹಾಡುಹಗಲು ಸಿಕ್ಕಿಬಿದ್ದಿರುವ ತಮ್ಮ ವೃತ್ತಿ ಬಾಂಧವರನ್ನು ರಕ್ಷಿಸುತ್ತಿರುವ ರೀತಿಯನ್ನು ಕಂಡು ಬಿಜೆಪಿಯ ಕೆಲವು ಕಾರ್ಯಕರ್ತರಿಗೇ ಅಸಹ್ಯ ಹುಟ್ಟಿದೆ.

ಈ ಅಸಹ್ಯಕರ ಬೆಳವಣಿಗೆ ಮಾಧ್ಯಮಗಳಲ್ಲಿ ಬೆಳಕಿಗೆ ಬರುತ್ತಿದ್ದಂತೆ ಲೊಕಾಯುಕ್ತ ಅಧಿಕಾರಿಗಳೂ ಸಹ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸುವಂಥಾ ಮಾತನ್ನಾಡಿದರು. "ದಾಳಿ ಹಾಗೂ ಬಂಧನ ನಡೆದ ದಿನವೇ ಸರ್ಕಾರಕ್ಕೆ ಆ ಬಗ್ಗೆ ಮಾಹಿತಿ ನೀಡಿದ್ದೇವೆ, ಹೀಗೆ ಅಕ್ರಮಗಳಡಿ ಬಂಧನಕ್ಕೊಳಗಾದ 48 ಗಂಟೆಗಳ ಒಳಗಾಗಿ ಅಂಥಾ ಅಧಿಕಾರಿಯನ್ನು ಅಮಾನತ್ತುಗೊಳಿಸಬೇಕೆಂದು ಸೇವಾ ನಿಯಮಗಳೇ ಹೇಳುತ್ತಿವೆ. ಹೀಗಿದ್ದರೂ ಇಲಾಖೆ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ?" ಎಂದು ಪ್ರಶ್ನಿಸಿದರು. ಹೀಗೆ ತಮ್ಮ ಮಾನ ಬೀದಿಗೆ ಬಂದು ಫಜೀತಿಗಿಟ್ಟುಕೊಳ್ಳುವುದು ಗ್ಯಾರಂಟಿ ಅನಿಸಿದ ಮೇಲೆ ಸದರಿ ಇಲಾಖೆ ಮುನಿರಾಜುನನ್ನು ಅಮಾನತುಗೊಳಿಸುವ ಮತ್ತೊಂದು ಆದೇಶ ಹೊರಡಿಸಿ ತನ್ನ ಮುಖ ಉಳಿಸಿಕೊಳ್ಳುವ ಹತಾಶ ಪ್ರಯತ್ನ ನಡೆಸಿದೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಕನಿಷ್ಠ ಪ್ರಜ್ಞೆ ಈ ಸರ್ಕಾರಕ್ಕಿದ್ದಿದ್ದರೆ ಆ ಅಧಿಕಾರಿಯನ್ನು ಮತ್ತೊಂದು ಜಿಲ್ಲೆಯ ಉನ್ನತ ಹುದ್ದೆಗೆ ಅಷ್ಟೊಂದು ತರಾತುರಿಯಲ್ಲಿ ವರ್ಗಾವಣೆ ಮಾಡಬೇಕಿದ್ದ ಅನಿವಾರ್ಯತೆ ಏನಿತ್ತು ಎಂಬ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿಲ್ಲ, ಭ್ರಷ್ಟರನ್ನು ರಕ್ಷಿಸಲಿಕ್ಕಾಗಿಯೇ ಈ ಎಲ್ಲಾ ಕಸರತ್ತು ನಡೆಸಿರುವುದು ಅಂಗೈ ಹುಣ್ಣಿನಂತೆ ಎದ್ದು ಕಾಣುತ್ತಿದೆ.

ಆದರೆ ಉಷಾ ಪಟವಾರಿ ಎಂಬ ಧೂರ್ತ ಅಧಿಕಾರಿಣಿಯನ್ನು ಜತನದಿಂದ ರಕ್ಷಿಸಿ ಉನ್ನತ ಹುದ್ದೆಯಲ್ಲೇ ಮುಂದುವರೆಸಿರುವ ಸರ್ಕಾರ ಕ್ರಮೇಣ ಆ ಕೇಸನ್ನು ಮುಚ್ಚಿಹಾಕಲು ನಿರ್ಧರಿಸಿದೆ ಎಂದು ನಂಬಲು ಸಾಕಷ್ಟು ಕಾರಣಗಳಿವೆ.

ಕರ್ನಾಟಕದ ಪರಮಭ್ರಷ್ಟ ಯಡ್ಡಿ ಅಧಿಕಾರದಿಂದ ತೊಲಗಿ, ಈಗ ಹಸನ್ಮುಖಿ ಸದಾನಂದ ಗೌಡನನ್ನು ಸೀಟಿನಲ್ಲಿ ಕೂರಿಸುವುದರಿಂದ ಭ್ರಷ್ಟಾಚಾರಕ್ಕೆ ಸ್ವಲ್ಪವಾದರೂ ಕಡಿವಾಣ ಬೀಳಬಹುದೆಂದು ಕೆಲವರು ಭಾವಿಸಿದ್ದರು. ಆದರೆ ಅಂಥವರು ತಮ್ಮ ಅಭಿಪ್ರಾಯವನ್ನು ಇದೀಗ ಬದಲಿಸಿಕೊಳ್ಳಬೇಕಾಗಿ ಬಂದಿದೆ. ಕಾರಣ ಇಷ್ಟೆ. ಈ ಸದಾನಂದನ ಸರ್ಕಾರದ ಮೊಟ್ಟ ಮೊದಲ ಸಾಧನೆಯೆಂದರೆ ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸಿದ್ದು, ಗಟ್ಟಿಮುಟ್ಟಾಗಿದ್ದ ಕೇಸುಗಳನ್ನು ಹಳ್ಳಹಿಡಿಸಿ ಭ್ರಷ್ಟರನ್ನು ವ್ಯವಸ್ಥಿತವಾಗಿ ರಕ್ಷಿಸುತ್ತಿರುವುದು! ಮತ್ತೊಂದು ಕಡೆ ಪರಮಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ನೀಡುವ, ಬಡ್ತಿ ನೀಡುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾನೆ.

ಇಂಥಾ ಅಪಾಢಭೂತಿಗಳು ಅಧಿಕಾರದಲ್ಲಿ ಕೂತಿರುವುದು ರಾಜ್ಯದ ಜನತೆಯ ದೌರ್ಭಾಗ್ಯವಲ್ಲದೆ ಮತ್ತೇನು?

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಮಕ್ಕಳ ಅನ್ನ ಕದ್ದು ಕೂಡಿಟ್ಟ ಸಂಪತ್ತು!

ಶಮಾಳ ಕಾಂಪ್ಲೆಕ್ಸ್ ಉಷಾಳ ಚಿನ್ನ ಮುನಿರಾಜು ಲ್ಯಾಂಡ್

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಶಾಮ್ಲಾ ಇಕ್ಬಾಲ್ ಎಂಬ ಐಎಎಸ್ ಅಧಿಕಾರಿಣಿ ಮೂಲತಃ ಕೇರಳದವಳು. ಈಕೆ ಮಹಿಳಾ ಮತ್ತು ಮಕ್ಕಳ ಇಲಾಖೆಯ ನಿರ್ದೇಶಕಿಯ ಸೀಟಿನಲ್ಲಿ ಕೂತ ನಂತರ ಮೊದಲೇ ಅದ್ವಾನವಾಗಿದ್ದ ಇಲಾಖೆ ಮತ್ತಷ್ಟು ಅಧೋ ಗತಿಗೆ ಇಳಿದಿದೆ.

ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡ ಆಸ್ತಿಗಳ ಪಟ್ಟಿಯಲ್ಲಿರುವಂತೆ ಶಾಮ್ಲಾ ಇಕ್ಬಾಲ್ ಬೆಂಗಳೂರಿನ ಜನನಿಬಿಡ ಚರ್ಚ್ ಸ್ಟ್ರೀಟ್‌ನಲ್ಲಿ ಒಂದು ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಿಸಿದ್ದಾಳೆ. ಒಂದು ದುಬಾರಿ ಬೆಲೆಯ ಮನೆಯನ್ನು ಹಾಗು ಕೆಲವು ನಿವೇಶನಗಳನ್ನು ಖರೀದಿಸಿದ್ದಾಳೆ. ಇವುಗಳ ಜೊತೆ ಕೆಜಿಗಟ್ಟಲೆ ಬಂಗಾರ, ವಜ್ರ, ಪ್ಲಾಟಿನಂ ಮುಂತಾದ ಒಡವೆಗಳು, ಜೊತೆಗೆ 65 ಲಕ್ಷ ರೂ.ಗಳ ಬ್ಯಾಂಕ್ ಠೇವಣಿಯ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಇವುಗಳಲ್ಲದೆ ಸುಮಾರು 9 ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ಮತ್ತು ಕೆಲವು ಲಾಕರ್‌ಗಳನ್ನು ಹೊಂದಿದ್ದು ಅವುಗಳ ವಿವರ ಇನ್ನೂ ತಿಳಿದುಬಂದಿಲ್ಲ, ಈ ಎಲ್ಲಕ್ಕೂ ಕಳಸವಿಟ್ಟಂತೆ ಆಕೆಯ ಬಂಗಲೆಯ ಮುಂದೆ ಕೆಎ 03 ಎಮ್‌ಎಲ್ 7393 ನಂಬರಿನ ಟೊಯೋಟಾ ಇನ್ನೋವಾ ಕಾರೊಂದು ನಿಂತಿತ್ತು. ಈ ಮಾಲುಗಳನ್ನು ವಶಪಡಿಸಿಕೊಂಡ ತಂಡದ ಅಧಿಕಾರಿಯೊಬ್ಬರು ಹೇಳುವ ಪ್ರಕಾರ ಈ ಕಾರು ಕ್ರಿಸ್ಟಿ ಕಂಪನಿ ನೇರವಾಗಿ ಈಕೆಗೆ ನೀಡಿದ ಕೊಡುಗೆಯಾದ್ದರಿಂದ ಇದು ಇವರಿಬ್ಬರ ನಡುವಿನ ಭ್ರಷ್ಟ ವ್ಯವಹಾರಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ.

ಇನ್ನೂ ಉಷಾ ಪಟವಾರಿಯ ಮನೆಯಿಂದ ಸುಮಾರು 5 ಲಕ್ಷ ನಗದು ಮತ್ತು ಬಂಗಾರದ ಒಡವೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಷ್ಟೇ ಅಲ್ಲ, ಈಕೆ ಹೊಂದಿದ್ದ ಬ್ಯಾಂಕ್ ಖಾತೆಗಳ ಸಂಖ್ಯೆ ಎಷ್ಟಿರಬಹುದು ಒಮ್ಮೆ ಊಹಿಸಿ. ನಾಲ್ಕು...? ಆರು...? ಎಂಟು...? ಊಹೂಂ, ಬರೋಬ್ಬರಿ 30 ಬ್ಯಾಂಕ್ ಖಾತೆಗಳ ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಅದರ ತನಿಖೆಯ ವಿವರಗಳು ಇನ್ನೂ ಹೊರಬಂದಿಲ್ಲ.

ಇನ್ನೂ ಮೂರನೇ ಆಸಾಮಿಯೇ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಮುನಿರಾಜು. ಮಕ್ಕಳ ಕಂಟಕ ಕಂಪನಿಯೊಂದಿಗಿನ ಎಲ್ಲಾ ಡೀಲಿಂಗ್‌ಗಳನ್ನು ಈತನೇ ನಿಭಾಯಿಸುತ್ತಿದ್ದನೆಂದು ಲೋಕಾಯುಕ್ತ ಪೊಲೀಸರು ಊಹಿಸುತ್ತಿದ್ದಾರೆ. ಬಸವೇಶ್ವರ ನಗರದಲ್ಲಿರುವ ಈತನ ಮನೆಯ ಮೇಲೆ ನಡೆಸಿದ ದಾಳಿಯಲ್ಲಿ ಮಾಲೂರಿನ ಬಳಿ 15 ಎಕರೆ ಭೂಮಿ ಖರೀದಿಸಿರುವ ದಾಖಲೆಗಳ ಜೊತೆಗೆ, ನಗರದ ವಿಜಯನಗರದಲ್ಲಿ ಮತ್ತು ಮೈಸೂರಿನಲ್ಲಿ ನಿವೇಶನ ಹೊಂದಿರುವ ದಾಖಲೆಗಳನ್ನು, ಜೊತೆಗೆ ಒಂದಷ್ಟು ಬಂಗಾರ ಹಾಗೂ ನಗದನ್ನೂ ವಶಪಡಿಸಿಕೊಂಡಿದ್ದಾರೆ.

ಹಸಿವಿನಿಂದ ನರಳುತ್ತಿರುವ ಬಡಮಕ್ಕಳ ಅನ್ನವನ್ನು ಕದ್ದು ಈ ರೀತಿ ಅಕ್ರಮ ಆಸ್ತಿ ಗಳಿಸುತ್ತಿರುವ ಅಯೋಗ್ಯ ಅಧಿಕಾರಿಗಳಿಗೆ ಮತ್ತು ಅವರಿಗೆ ಸರ್ವವಿಧದಲ್ಲೂ ಬೆಂಬಲಿಸುತ್ತಿರುವ ಸರ್ಕಾರಕ್ಕೆ ಯಾವ ಶಿಕ್ಷೆ ಕೊಡಬೇಕು?



ಏಪ್ರಿಲ್‌ನಲ್ಲಿ ಮತ್ತೆ ಬಂಡಾಯ!

ಇದು ಏಪ್ರಿಲ್ ಕ್ರಾಂತಿಯಂತೆ. ಸದಾನಂದ ಗೌಡರನ್ನು ಕೆಳಗಿಳಿಸಿ ಯಡಿಯೂರಪ್ಪನವರಿಗೆ ಪಟ್ಟಕಟ್ಟುವ ಮಹತ್ವದ ನಿರ್ಧಾರವನ್ನು ಬಿಜೆಪಿ ರಾಷ್ಟ್ರಾಧ್ಯಕ್ಷ ಗಡ್ಕರಿ ಏಪ್ರಿಲ್ ಎರಡನೇ ವಾರದಲ್ಲಿ ಪ್ರಕಟಿಸುತ್ತಾರಂತೆ. ರಾಷ್ಟ್ರ ನಾಯಕ ಅಡ್ವಾಣಿಯನ್ನು ಅವರ 'ಮಾನಸ ಪುತ್ರ' ಅನಂತ್‌ರನ್ನು ಈಗಾಗಲೇ ಯಡ್ಡಿ ಪರ ಪಳಗಿಸಿದ್ದಾಗಿದೆಯಂತೆ. ಹೈಕಮಾಂಡ್ ವರಿಷ್ಠ ಅರುಣ್ ಜೇಟ್ಲಿ ಯಾವತ್ತಿದ್ದರೂ ಯಡ್ಡಿ ಪರ ಅಂತೆ. ಉಳಿದಂತೆ ಸುಷ್ಮಾ, ಜೋಷಿ, ರಾಜನಾಥ್, ನಾಯ್ಡು ಅರೆಮನಸ್ಸಿದ್ದರೂ ಮುಂಬರುವ ಲೋಕಸಭಾ ಚುನಾವಣೆಯ ಅನಿವಾರ್ಯಕ್ಕೆ ಬಿದ್ದು ತಮ್ಮ ಯಡ್ಡಿ ವಿರೋಧಿ ಮನಸ್ಥಿತಿಗೆ ತಾತ್ಕಾಲಿಕ ತೆರೆ ಎಳೆದಿದ್ದಾರಂತೆ. ಇಷ್ಟಾದ ಮೇಲೆ ಮತ್ತೆ ಯಡ್ಡಿಗೆ ಪಟ್ಟ ಕಟ್ಟಲು ಯಾವ ಅಡ್ಡಿ ಯಾರ ಕಡ್ಡಿ? ಅದಕ್ಕಂತಲೇ ಸಾಹೇಬರು ಮಾರ್ಚ್ 30ಕ್ಕೆ ಚಹಾಕೂಟ ಕರೆದಿದ್ದಾರೆ.



ಇದು ಯಡ್ಡಿ ಪರಮಾಪ್ತ ವಲಯದ ಕಾನ್ಫಿಡೆನ್ಸು. ಭ್ರಮೆ ಮರೀಚಿಕೆಯೋ ಅರೆಬರೆ ವಾಸ್ತವವೋ ಎಲ್ಲವೂ ಅಯೋಮಯ. ಹುಬ್ಬಳ್ಳಿ ಸಮಾವೇಶ ವಾಯಿತು. ವೈಷ್ಣೋದೇವಿಯ ನೆಪದಲ್ಲಿ ದೆಹಲಿ ಸುತ್ತಿ ಬಂದಿದ್ದಾಯ್ತು, ಅಲ್ಲಿಂದ ಶಾಸಕರನ್ನೆಲ್ಲ ಹೊತ್ತೊಯ್ದು ರೆಸಾರ್ಟಿನಲ್ಲಿ ಕೂಡಿದ್ದಾಯ್ತು, ಮತ್ತೆ ದೆಹಲಿಗೆ ಹೋಗಿ ಅಡ್ವಾಣಿಯ ದರ್ಶನ ಮಾಡಿದ್ದಾಯ್ತು. ಈಗ ಮತ್ತೆ ಚಹಾಕೂಟ......!



ಇಲ್ಲಿ ಗಮನಿಸಬೇಕಾದ ಒಂದು ಸೂಕ್ಷ್ಮವೆಂದರೆ ಯಡ್ಡಿ ಏನೇ ರಾಜ್ಯ ಪ್ರವಾಸ, ಸಂಸದರ ನಿಯೋಗ, ಹುಟ್ಟುಹಬ್ಬದ ರ್‍ಯಾಲಿ, ರೆಸಾರ್ಟು ಪಾರ್ಟಿ ಎಂದೆಲ್ಲ ಮೈ ಪರಚಿಕೊಂಡರೂ ಅದಕ್ಕೆ ಹೈಕಮಾಂಡ್ ಸ್ಪಂದನೆ ಸೊನ್ನೆಯೆ. ಒಂದು ಹಂತದಲ್ಲಿ ಅರುಣ್ ಜೇಟ್ಲಿ ಯಡ್ಡಿ ಪರ ವಾಲಿದ್ದರು. ಗಡ್ಕರಿಗೂ ಮನಸ್ಸಿತ್ತು. ಉಳಿದಂತೆ ಅಡ್ವಾಣಿ ಹೊರತಾಗಿ ಮಿಕ್ಕೆಲ್ಲ ನಾಯಕರೂ 'ಹಾಳಾಗಿಹೋಗಲಿ... ಇದೊಂದು ಸಾರಿ ಛಾನ್ಸ್ ಕೊಟ್ಟು ನೋಡಿ' ಎಂಬ ನಿರ್ಧಾರಕ್ಕೆ ಬಂದುಬಿಟ್ಟಿದ್ದರು. ಮುಂಬರುವ ಚುನಾವಣೆಯಲ್ಲಿ ತನ್ನ ಬದುಕಿನ ಕೊನೆಯ ಅವಕಾಶವೋ ಎಂಬಂತೆ ಪ್ರಧಾನಿ ಪಟ್ಟದ ಕನಸು ಹೊತ್ತ ಅಡ್ವಾಣಿ ಕೂಡ ಒಲ್ಲದ ಮನಸ್ಸಿನಿಂದ ಯಡ್ಡಿ ಪರ ಮೆದುವಾಗಿದ್ದರು. ಅಷ್ಟರಲ್ಲೇ ಎದುರಾಗಿದ್ದು ಸಿಬಿಐ ಪ್ರಶ್ನೆ.

• ರಾ. ಸೋಮನಾಥ್

ಬಳ್ಳಾರಿಯ ಗಣಿಕಪ್ಪ ಕುರಿತಂತೆ ಯಡ್ಡಿ ಮತ್ತು ಜಿಂದಾಲ್ ಖದೀಮರ ಮಧ್ಯೆ ನಡೆದ 'ಲೇವಾದೇವಿ'ಯನ್ನು ಸಿಬಿಐ ತನಿಖೆಗೆ ಒತ್ತಾಯಿಸಿ ಧಾರವಾಡದ ಸಮಾಜ ಪರಿವರ್ತನಾ ಸಂಸ್ಥೆಯ ಮುಖ್ಯಸ್ಥ ಹಿರೇಮಠ್ ಸುಪ್ರೀಂ ಕೋರ್ಟಿಗೆ ಸಲ್ಲಿಸಿರುವ ಅರ್ಜಿ ಇನ್ನೂ ಇತ್ಯರ್ಥಗೊಂಡಿಲ್ಲ. ಸಿಬಿಐ ತನಿಖೆ ಬೇಕೋ ಬೇಡವೋ ಎಂದು ಸಿಇಸಿ ಅರ್ಥಾತ್ ಕೇಂದ್ರ ಉನ್ನತಾಧಿಕಾರ ಸಮಿತಿ ನಿರ್ಧರಿಸುವುದಕ್ಕೇ ಇನ್ನೂ ಮೀನಮೇಷ ಮುಗಿದಿಲ್ಲ. ಹಾಗೊಮ್ಮೆ ಯಡ್ಡಿಯನ್ನು ಮತ್ತೆ ಮುಖ್ಯಮಂತ್ರಿ ಮಾಡಿದ್ದೇ ಆದರೆ ಕೇಂದ್ರದ ಕಾಂಗ್ರೆಸ್ ಸರ್ಕಾರ ಸಿಇಸಿಯನ್ನು ಛೂಬಿಟ್ಟು ಮತ್ತೆ ಸಿಬಿಐ ತನಿಖೆ ಬೇಕೆಂದು ಪಗಡೆ ಉರುಳಿಸಿಬಿಟ್ಟರೆ?

ಆಗ ಸಿಬಿಐ ಕೈ ಮುಲಾಜಿಲ್ಲದೆ ಯಡ್ಡಿಯ ಹೆಗಲ ಮೇಲಿರುತ್ತದೆ!



ಬಿಜೆಪಿಯ ಮುಖ್ಯಮಂತ್ರಿಯೊಬ್ಬನನ್ನು ಅನಾಮತ್ತಾಗಿ ಜೈಲಿಗೆ ಹಾಕಿಸಿ ರಾಷ್ಟ್ರದಲ್ಲಿ ಫಜೀತಿ ಮಾಡಲು ಕಾಂಗ್ರೆಸ್ ಹಸಿದ ತೋಳದಂತೆ ಹೊಂಚಿ ಕೂತಿರುವಾಗ ಈ ಪರಿಸ್ಥಿತಿಯಲ್ಲಿ ಸದಾನಂದ ಗೌಡರನ್ನಿಳಿಸುವ ದುಸ್ಸಾಹಸಕ್ಕೆ ಬಿಜೆಪಿ ವರಿಷ್ಠರಾದರೂ ಹೇಗೆ ಕೈಯಿಟ್ಟರು. ಇದನ್ನೆಲ್ಲ ಲೆಕ್ಕ ಹಾಕಿಯೇ ಗಡ್ಕರಿ ಮತ್ತು ಜೇಟ್ಲಿ ಕೂತು ಮಾತಾಡಿ ಯಡ್ಡಿಗೆ ಬಜೆಟ್ ಅಧಿವೇಶನ ಮುಗಿಯುವ ತನಕ ಕಾಯುವಂತೆ ಪೂಸಿ ಹೊಡೆದಿದ್ದರು. ಮಾರ್ಚ್ ಕಳೆಯಲಿ ಏಪ್ರಿಲ್‌ನಲ್ಲಿ ನಾವೇ ಬೆಂಗಳೂರಿಗೆ ಬರ್ತೀವಿ. ಎಲ್ಲರೂ ಒಟ್ಟಿಗೆ ಕೂತು ಒಂದು ನಿರ್ಧಾರಕ್ಕೆ ಬರೋಣ ಎಂದು ಗಡ್ಕರಿ ತಾಕೀತು ಮಾಡಿದ್ದು ಕೂಡ ಅಷ್ಟರ ಒಳಗೆ ಸಿಇಸಿ ತನ್ನ ನಿರ್ಧಾರವನ್ನು ಸುಪ್ರೀಂಕೋರ್ಟಿನಲ್ಲಿ ಪ್ರಕಟಿಸಬಹುದೆಂಬ ನಿರೀಕ್ಷೆಯಿಂದಲೇ.



ಹಿರೇಮಠ್ ಅರ್ಜಿಯ ವಿಚಾರಣೆ ಏಪ್ರಿಲ್ 12ಕ್ಕೆ ಮುಂದೂಡಲ್ಪಟ್ಟಿದೆ. ಅವತ್ತೇನಾದರೂ ಸಿಇಸಿ ಸಿಬಿಐ ತನಿಖೆ ಬೇಕೇಬೇಕೆಂದು ಹಠಕ್ಕೆ ಬಿತ್ತೆಂದರೆ ಮತ್ತೆ ಯಡ್ಡಿ ಮುಖ್ಯಮಂತ್ರಿಯಾಗುವುದು ನೆನೆಗುದಿಗೆ ಬಿದ್ದಂತೆಯೇ. ಸಿಬಿಐ ತನಿಖೆಯನ್ನು ಅಪ್ರಸ್ತುತಗೊಳಿಸುವತ್ತ ಏನೆಲ್ಲ ವಾದ ಮಂಡಿಸಬೇಕೋ ಅದೆಲ್ಲವನ್ನು ಯಡ್ಡಿ ಈಗಾಗಲೇ ವಕೀಲರನ್ನು ಬಿಟ್ಟು ಸಿಇಸಿಯೆದುರು ಮಾಡಿಸಿದ್ದಾಗಿದೆ. ಅಲ್ಲಿಗೆ ಸಿಇಸಿ ಯಡ್ಡಿ ವಿರುದ್ಧ ತೋರಬೇಕಾಗಿದ್ದ ಎಲ್ಲಾ ಕಾನೂನು ಪ್ರಕ್ರಿಯೆಗಳನ್ನೂ ಮುಗಿಸಿದಂತಾಗಿದೆ. ಏಪ್ರಿಲ್ 12 ಕ್ಕೆ ಸಿಇಸಿಯ ಅಂತಿಮ ನಿರ್ಣಯ ಸ್ಪಷ್ಟಗೊಳ್ಳಲಿದೆ. ಸಿಇಸಿಯಾಗಲಿ, ಸುಪ್ರೀಂಕೋರ್ಟಾಗಲಿ ತನ್ನ ವಿರುದ್ಧ ಸಿಬಿಐ ಅಸ್ತ್ರ ಬಳಸುವುದಿಲ್ಲ ಎಂದು ಯಡ್ಡಿಗೆ ಖಾತರಿಯಾಗಿರಬೇಕು ಅಥವಾ ಅವರ ವಕೀಲರ ಅತಿಯಾದ ಆತ್ಮವಿಶ್ವಾಸವನ್ನೇ ಯಡ್ಡಿ ನಂಬಿ ಕೂತಿರಬೇಕು. ಅದಕ್ಕೇ ಬಜೆಟ್ ಅಧಿವೇಶನದ ವಿರುದ್ಧ ರೆಸಾರ್ಟ್ ಪ್ರಹಸನಕ್ಕೆ ಕೈಯಿಟ್ಟರು. ಹೇಗೋ ಬೀಸೋ ದೊಣ್ಣೆ ತಪ್ಪಲೆಂದು ಬಜೆಟ್ ಮುಗಿಯುವ ತನಕ ಕಾಯುವಂತೆ ಹೈಕಮಾಂಡ್ ತೇಪೆ ಹಾಕಿತಾದರೂ ಈಗ ಯಡ್ಡಿಯ ಸಹನೆ ತನ್ನ ಪರಮಾವಧಿಯನ್ನು ಮುಟ್ಟಿಬಿಟ್ಟಿದೆ. ಬಜೆಟ್ ಮುಗಿಯುವ ತನಕ ಕಾದಿರುವಂತೆ ಸೂಚಿಸಿದ ಹೈಕಮಾಂಡ್ ಈಗ ತನ್ನ ಮಾತನ್ನು ನಡೆಸಿಕೊಡಲೇಬೇಕು. ಹೇಗೂ ಮಾತಿಗೆ ಕಟ್ಟುಬಿದ್ದ ಹೈಕಮಾಂಡ್ ಅನ್ನು ಇದೇ ನೆಪದಲ್ಲಿ ಸಿಲುಕಿಸಿಕೊಂಡು ತನ್ನ ಕಾರ್ಯ ಸಾಧಿಸಿಕೊಳ್ಳಬೇಕೆಂಬ ದೃಢ ನಿರ್ಧಾರಕ್ಕೆ ಯಡ್ಡಿ ಬಂದಿದ್ದಾರೆ. ಅದರ ಪ್ರತಿಫಲವೇ ಮಾರ್ಚ್ 30 ಟೀ ಪಾರ್ಟಿ!

ಅದು ಯಡ್ಡಿಯ ಹತಾಶೆ ಮತ್ತು ದೌರ್ಬಲ್ಯದ ಲಕ್ಷಣವೂ ಹೌದು. ಹುಬ್ಬಳ್ಳಿ ಸಮಾವೇಶ ಮತ್ತು ಗೋಲ್ಡನ್ ಪಾಮ್ಸ್ ರೆಸಾರ್ಟ್ ಬಂಡಾಯದ ನಂತರ ನಡೆದ ಘಟನೆಗಳಾದರೂ ಎಂಥವು?

ಆತನಕ ತನ್ನ ಪಾಡಿಗೆ ತೆಪ್ಪಗಿದ್ದ ಬಾಲಚಂದ್ರ ಜಾರಕಿಹೊಳಿ ಇದ್ದಕ್ಕಿದ್ದಂತೆ ಯಡ್ಡಿ ವಿರುದ್ಧ ತೊಡೆತಟ್ಟಿದ್ದಲ್ಲದೆ ಅಸ್ನೋಟಿಕರ್, ಸಂಪಂಗಿ ಗ್ಯಾಂಗ್ ಕಟ್ಟಿಕೊಂಡು ದೆಹಲಿಗೆ ನಿಯೋಗ ಕೊಂಡೊಯ್ದು ಯಡ್ಡಿ ವಿರುದ್ಧ ಲಾಬಿಗಿಳಿಯುತ್ತಾರೆ. ದೆಹಲಿಯಲ್ಲಿ ತಾನು ಗಡ್ಕರಿ ಮತ್ತು ಅಡ್ವಾಣಿಯನ್ನು ಕಂಡು ಯಡ್ಡಿ ವಿರುದ್ಧ ನಡೆಸಿದ ಕಾರ್ಯಾಚರಣೆಯ ವಿವರಗಳನ್ನೆಲ್ಲ ಪತ್ರಿಕಾಗೋಷ್ಠಿ ಕರೆದು ಗುಡುಗುತ್ತಾರೆ. ಇದಾದ ಮರುದಿನಕ್ಕೇ ಮಂತ್ರಿ ಕಾಗೇರಿ, ಲಿಂಬಾವಳಿ ಇತ್ಯಾದಿ ಆರೆಸ್ಸೆಸ್ ನಿಷ್ಠರ ಎರಡು ತಂಡ ಯಡ್ಡಿ ವಿರುದ್ಧ ದೆಹಲಿ ಕಾರ್ಯಾಚರಣೆಗಿಳಿದಿದೆ. ಬೆನ್ನಲ್ಲಿ ಈಶ್ವರಪ್ಪ ಮತ್ತು ಸಿ.ಎಂ. ಸದಾನಂದ ಗೌಡ ಸೇರಿಕೊಂಡು ಯಡ್ಡಿ ವಿರುದ್ಧದ ಲಿಂಗಾಯತರನ್ನೆಲ್ಲ ಒಟ್ಟುಗೂಡಿಸುತ್ತಾರೆ.

ಯಡ್ಡಿ ವಿರುದ್ಧ ಲಿಂಗಾಯತ ಪಾಳಯದಲ್ಲಿರುವವರಾದರು ಎಂಥವರು?


ಎಸ್.ಕೆ. ಬೆಳ್ಳುಬ್ಬಿ, ತುಮಕೂರಿನ ಸೊಗಡು ಶಿವಣ್ಣ, ಬೆಳಗಾವಿಯ ಅಭಯ್ ಪಾಟೀಲ್, ಚರಂತಿಮಠ, ರವೀಂದ್ರ ನಾಥ್, ದೊಡ್ಡನಗೌಡ ಪಾಟೀಲ್; ಹೀಗೆ ಬಿಜೆಪಿಯ ಯಡ್ಡಿ ವಿರೋಧಿ ಹಿಂಡು ಕಮ್ಮಿಯದೇನಲ್ಲ. ಇಂಥ ತನ್ನೆಲ್ಲಾ ವಿರೋಧಿಗಳನ್ನು ಒಗ್ಗೂಡಿಸಿ ಬುಗುರಿ ಆಡಿಸುತ್ತಿರುವುದೇ ಸದ್ಯ ಜೆಡಿಎಸ್ ಪಾಳಯದಲ್ಲಿರುವ ಬಸನಗೌಡ ಯತ್ನಾಳ್ ಎಂಬ ಅಳುಕು ಯಡ್ಡಿಗಿದೆ. ಇದಿಷ್ಟೇ ಅಲ್ಲ, ನಿನ್ನೆಮೊನ್ನೆಯ ತನಕ ಯಡ್ಡಿಯ ಜೊತೆಗಿದ್ದು ಈಗ ತಿರುಗಿಬಿದ್ದಿರುವ ಡಿ.ಬಿ. ಚಂದ್ರೇಗೌಡರಂಥ ಒಕ್ಕಲಿಗ ವೈಟ್‌ಕಾಲರ್‌ಗಳನ್ನೂ ಡೀವಿ-ಈಶ್ವರಪ್ಪ ಗ್ಯಾಂಗ್

ಕೈಕೊಟ್ಟ ಅಶೋಕ್ ಮತ್ತು ಗೌಡರ ಲಾಬಿ

ಏಪ್ರಿಲ್ ಎರಡನೇ ವಾರದ ಹೊತ್ತಿಗೆ ಒಂದೋ ಸದಾನಂದ ಗೌಡರ ಪದಚ್ಯುತಿಯಾಗಿರುತ್ತದೆ ಅಥವಾ ಶೆಟ್ಟರ್ ಮುಖ್ಯಮಂತ್ರಿಯಾಗಿರುತ್ತಾರೆ!


ಮೇಲುನೋಟಕ್ಕೆ ಈ ಎರಡೂ ಸಾಧ್ಯತೆಗಳು ಒಂದೇ ಕ್ರಿಯೆಯ ಎರಡು ಮುಖಗಳಲ್ಲವೆ?

ಇಲ್ಲ ಎನ್ನುತ್ತಾರೆ ಯಡ್ಡಿಯ ಪರಮಾಪ್ತ ಮಂತ್ರಿಯೊಬ್ಬರು. ಹಾಗೊಮ್ಮೆ ಹೈಕಮಾಂಡ್ ಗೌಡರನ್ನು ಇಳಿಸಲು ಒಪ್ಪದೇ ಹೋದರೆ ಅಥವಾ ಮುಖ್ಯಮಂತ್ರಿಯಾಗಿ ಶೆಟ್ಟರ್‌ರನ್ನು ನೇಮಿಸದೇ ಹೋದರೆ ಯಡ್ಡಿಗೆ ಬಂಡಾಯ ಅನಿವಾರ್ಯವಾಗುತ್ತದೆ. ಕನಿಷ್ಠ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾದರೂ ಯಡ್ಡಿ ಸರ್ಕಾರವನ್ನು ಬುಡಮೇಲು ಮಾಡಲೇಬೇಕು. ಹೈಕಮಾಂಡ್‌ಗೊಂದು ಪಾಠ ಕಲಿಸುವುದಕ್ಕಾದರೂ ಯಡ್ಡಿ ಬಣ ತಿರುಗಿಬೀಳಲೇಬೇಕಾಗಿದೆ. ಇಂಥ ಲೆಕ್ಕ ಹಾಕಿಯೇ ಯಡ್ಡಿ ಮಾರ್ಚ್ 30 ರ ಟೀ ಪಾರ್ಟಿಗೆ ಕೈ ಹಾಕಿದ್ದಾರೆ.



ಸದ್ಯ ಜಗದೀಶ್ ಶೆಟ್ಟರ್ ಯಡ್ಡಿಗೆ ನಿಷ್ಠರಾಗೇ ಇದ್ದಾರಾದರೂ ಅದು ಶಾಶ್ವತವೇನಲ್ಲ. ಡಿ.ಬಿ. ಚಂದ್ರೇಗೌಡರಿಗೆ 'ನೀವೇ ಮುಖ್ಯಮಂತ್ರಿಯಾಗ್ತೀರಿ, ಎಂದು ಯಾವ ತಲೆಕೆಟ್ಟ ಪಾರ್ಟಿ ಭವಿಷ್ಯ ನುಡಿದಿದ್ದಾನೋ ಗೊತ್ತಿಲ್ಲ, ಆದರೆ ಯಡ್ಡಿ ತಲೆ ಕೆಡಿಸಿಕೊಂಡಿದ್ದು ಚಂದ್ರೇಗೌಡರಿಗಾಗಿ ಅಲ್ಲ, ಬದಲಿಗೆ ಗೃಹ ಮಂತ್ರಿ ಆರ್. ಅಶೋಕ್‌ಗಾಗಿ. ನಿನ್ನೆಮೊನ್ನೆಯ ತನಕ ಯಡ್ಡಿ ನಮ್ಮೆಲ್ಲರ ಪ್ರಶ್ನಾತೀತ ನಾಯಕ ಎಂದು ಎಲ್ಲೆಂದರಲ್ಲಿ ಜೈಕಾರ ಹಾಕಿದ್ದ ಆರ್. ಅಶೋಕ್ ಬೆಂಗಳೂರಿನ ಅರ್ಧ ಡಜನ್ ಶಾಸಕರನ್ನು ಕಟ್ಟಿಕೊಂಡು ಯಡ್ಡಿ ಮನೆ ಸುತ್ತಿ ಪೋಜು ಕೊಟ್ಟಿದ್ದೇ ಕೊಟ್ಟಿದ್ದು.

ಯಾವತ್ತು ಡೀವಿ ಮತ್ತು ಡೀಜಿ ಅರ್ಥಾತ್ ಸದಾನಂದ ಗೌಡ ಮತ್ತು ದೇವೇಗೌಡರ ಜಂಟಿ ಕಾರ್ಯತಂತ್ರವಾಗಿ ಒಕ್ಕಲಿಗರ ಆತ್ಮಾಭಿಮಾನದ ಪ್ರಶ್ನೆಯನ್ನು ಹುಟ್ಟುಹಾಕಲಾಯ್ತೋ ಆಗಲೇ ಅಶೋಕ್ ನಿಷ್ಠೆ ಬದಲಾಗಿತ್ತು. ಅದಕ್ಕೆ ತಕ್ಕಂತೆ ಆದಿಚುಂಚನಗಿರಿ ಬಾಲಗಂ ಸ್ವಾಮಿ ಒಕ್ಕಲಿಗರ ರಣಕಹಳೆ ಮೊಳಗಿಸಿಬಿಟ್ಟರು. ಒಕ್ಕಲಿಗರ ಮತ್ತೊಬ್ಬ ಸ್ವಾಮೀಜಿ ಕೆಂಗೇರಿಯ ಕುಮಾರ ಚಂದ್ರಶೇಖರನಾಥರೂ ಮುಖ್ಯಮಂತ್ರಿಯ ಪರ ಶಂಖ ಮೊಳಗಿಸಿದ್ದು, ಒಕ್ಕಲಿಗರ ಸಂಘವೇ ಹುಚ್ಚೆದ್ದು ಮುಖ್ಯಮಂತ್ರಿಯ ಬೆನ್ನಿಗೆ ನಿಂತಿದ್ದು; ಇತ್ಯಾದಿಗಳನ್ನೆಲ್ಲ ಕಂಡೂ ಅಶೋಕ್ ಯಡ್ಡಿಯನ್ನು ಬೆಂಬಲಿಸುವುದುಂಟೆ?



ನಂಬಿದ ಅಶೋಕನೇ ಕೈಕೊಟ್ಟ ಮೇಲೆ ಇನ್ನು ಯಾರು ಯಾವತ್ತು ಕೈಕೊಟ್ಟರೂ ಅಚ್ಚರಿಯಿಲ್ಲ. ನನಗಿಲ್ಲದ ಮುಖ್ಯಮಂತ್ರಿಗಿರಿ ಯಾರಿಗೆ ಇದ್ದರೆಷ್ಟು ಬಿಟ್ಟರೆಷ್ಟು ಎಂದಿದ್ದೇ ಸರ್ಕಾರದ ಬುಡಕ್ಕೇ ಬಾಂಬ್ ಇಡಲು ನಿರ್ಧರಿಸಿದ್ದಾರೆ ಯಡ್ಡಿ. ಬಿಜೆಪಿ ಸರ್ಕಾರದ ಆಯಸ್ಸು ಇನ್ನೆಷ್ಟು ದಿನವೋ?

ಹಾಕಿಕೊಂಡಾಗಿದೆ. ಗೃಹ ಮಂತ್ರಿ ವಿರುದ್ಧ ಒಳಗೊಳಗೇ ಯಡ್ಡಿ ಜೊತೆ ...ದ್ದು ರಾಜರಾಜೇಶ್ವರಿ ನಗರದ ಶಾಸಕ ಎಂ. ... ಅಧಿಕಾರವಿದ್ದಷ್ಟೂ ಕಾಲ ಯಡ್ಡಿಗೆ ...ನುತಿದ್ದ ಶ್ರೀನಿವಾಸ್ ಈಗ ಸಿ.ಎಂ. ಗೌಡರ ಹಿತೈಷಿ. ಅಲ್ಲಿಗೆ ಯಡ್ಡಿ ವಿರುದ್ಧ ...ಪಾಳಯದ ಯಲಹಂಕ ವಿಶ್ವನಾಥ್, ... ರೆಡ್ಡಿ, ಸುರೇಶ್ ಗೌಡ, ಯೋಗೇಶ್ವರ್ ...ವರಿಂದ ಸಂಸದ ಡಿ.ಬಿ. ಚಂದ್ರೇಗೌಡ ...ದ. ಶ್ರೀನಿವಾಸ್‌ರನ್ನು ಡೀವಿ ...ಯಾಯ್ತು.

...ಕಡೆ ಲಿಂಗಾಯತರಲ್ಲೇ ಇದ್ದ ಯಡ್ಡಿ ...ಗಳನ್ನೆಲ್ಲ ಸದಾನಂದ ಗೌಡ ಬುಟ್ಟಿಗೆ ...ಡಾಯ್ತು. ಮತ್ತೊಂದೆಡೆ ಬಾಲಚಂದ್ರ ...ಳಿ ನೇತೃತ್ವದಲ್ಲಿ ಹಿಂದುಳಿದ ವರ್ಗದ ಮತ್ತು ...ಸಕರನ್ನೂ ಯಡ್ಡಿ ವಿರುದ್ಧ ಎತ್ತಿಕಟ್ಟಿದಂತಾಯ್ತು. ಯಡ್ಡಿಯ ಪರಮಾಪ್ತನಂತಿದ್ದ ಒಕ್ಕಲಿಗ ...ಸದರನ್ನು ಸೆಳೆದಂತಾಯ್ತು. ಇದೆಲ್ಲದಕ್ಕೂ ಕಾಗೇರಿ, ಲಿಂಬಾವಳಿ ನೇತೃತ್ವದಲ್ಲಿ ಮೂಲ ...ಚೆಡ್ಡಿಗಳಷ್ಟೇ ಅಲ್ಲದೆ ಬ್ರಾಹ್ಮಣರನ್ನೂ ಯಡ್ಡಿ ...ತ್ತಿಕಟ್ಟಿದಂತಾಯ್ತು. ಯಾರೆಲ್ಲ ಯಡ್ಡಿ ಪರವೂ ...ರೋಧಿಗಳೂ ಎನ್ನಿಸಿಕೊಳ್ಳದೆ ತಟಸ್ಥವಾಗಿದ್ದರೋ ...ಲ್ಲ ತನ್ನ ಬುಟ್ಟಿಗೆ ಹಾಕಿಕೊಳ್ಳುವುದು ಸದಾನಂದ ...ತಿನಿತ್ಯದ ಕಾಯಕವಾಯಿತು.

...ಣದ ತನಕ ರೆಸಾರ್ಟ್ ಷೋ ಆಫ್, ದೆಹಲಿ ...ಹಿ ಸಂಗ್ರಹಣೆ ಎಂದೆಲ್ಲ ದಿನಕ್ಕೊಂದು ಪಟಾಕಿ ... ಯಡ್ಡಿಗೆ ಏಕಾಏಕಿ ತನ್ನ ವಿರುದ್ಧವೇ ವಿವಿಧ ... ಬೀದಿಗಿಳಿದು ದಾಳಿ ನಡೆಸಲಾರಂಭಿಸಿದ್ದು ...ಜೀರ್ಣವಾಗದ ಸಂಗತಿಯಾಗಿತ್ತು. ಊಹಿಸಲು ...ಬಂತೆ ಜಾರಕಿಹೊಳ್ಳಿ ಅಸ್ನೋಟಿಕರ್ ಪಡೆ ...ನುಗ್ಗಿ ಯಡ್ಡಿ ವಿರುದ್ಧ ಹಾವಳಿ ಆರಂಭಿಸಿತು. ...ದೆಡೆ ಲಿಂಬಾವಳಿ, ಕಾಗೇರಿ ದಾಳಿ ...ಕೊಂಡರು. ಇನ್ನೊಂದೆಡೆ ಡಿ.ಬಿ. ಚಂದ್ರೇಗೌಡರ ...ಂತ್ರ. ಇದೆಲ್ಲವನ್ನೂ ಡೀವಿ ಮತ್ತು ಈಶ್ವರಪ್ಪ ...ಡೇ ಮಾಡಿಸುತ್ತಿದ್ದಾರೆಂಬುದು ಯಡ್ಡಿಗೆ ...ಗಿಯಿತು. ಅಲ್ಲಿಗೆ ಪರಿಸ್ಥಿತಿ ದಿನೇದಿನೇ ತನ್ನ ...ರುಗುತ್ತಿರುವುದು ನಿಚ್ಚಳವಾಗತೊಡಗಿತ್ತು.

... ಸಂದಿಗ್ಧದಲ್ಲೇ ಯಡ್ಡಿ ಬಜೆಟ್ ಬಹಿಷ್ಕಾರದ ...ಂಬಂತೆ ದೆಹಲಿಗೆ ಬಂದಿದ್ದಾರೆ. ಗಡ್ಕರಿ, ಜೇಟ್ಲಿ ...ವರೆಲ್ಲ ಏಪ್ರಿಲ್ ತನಕ ಕಾಯಿರಿ, ಬಜೆಟ್ ...ಯಾಗಲಿ ಎಂದೆಲ್ಲ ತಾಳ್ಮೆ ವಹಿಸುವಂತೆ ...ಂಡರೆ ರಾಷ್ಟ್ರನಾಯಕ ಅಡ್ವಾಣಿ ಮಾತ್ರ ನೇರವಾಗಿ ...ಉಗಿದಂತೆ 'ಡೋಂಟ್ ವೇಸ್ಟ್ ಮೈ ಟೈಮ್. ...ಮಯ ಹಾಳು ಮಾಡಬೇಡಿ. ನನಗೆ ಬೇರೆ ... ಎಂದಿದ್ದೇ ಮುಖ ತಿರುಗಿಸಿಬಿಟ್ಟರು. ಹೂಗುಚ್ಛ ...ತು ಬೆಂಬಲಿಗರ ಸಮೇತ ಅಡ್ವಾಣಿಯ ಮನೆ ... ಹೋಗಿದ್ದ ಯಡ್ಡಿಗೆ ಹತ್ತೇ ನಿಮಿಷದಲ್ಲಿ ಅಡ್ವಾಣಿ ...ಶವಾಗಿ ಹೋಗಿತ್ತು.

... ಅಡ್ವಾಣಿಯ ಮನೆಯಿಂದ ಹತಾಶರಾಗಿ ... ಯಡ್ಡಿಗೆ ಈಶ್ವರಪ್ಪ ಪತ್ರಿಕಾಗೋಷ್ಠಿ ಕರೆದು ... ಕಾರಣಕ್ಕೂ ಮುಖ್ಯಮಂತ್ರಿ ಬದಲಾಗುವುದಿಲ್ಲ ...ವಿಷ್ಠರು ಹೇಳಿದ್ದಾರೆಂಬ ಮಾತು ಬರಸಿಡಿಲಿನಂತೆ ...ಸಿತು. ಸಂಭವಿಸುತ್ತಿರುವ ಪ್ರತಿಯೊಂದು ...ವೂ ತನಗೆ ವಿರುದ್ಧವಾಗಿಯೇ ಜರುಗುತ್ತಿದೆ ...ಗೂ ಮಾರ್ಚ್ 30 ಕ್ಕೆ ಬಜೆಟ್ ಅಧಿವೇಶನ ...ತ್ತಿದೆ. ಆದಾದನಂತರ ಶುರುವಾಗುವುದು ಏಪ್ರಿಲ್. ...ರ್ಥ ಸಮಯ ಕಳೆಯುತ್ತಿದ್ದರೆ ಅದು ...ಗಿ ತನ್ನ ಬಲವನ್ನೇ ಕ್ಷೀಣಿಸುತ್ತದೆಯೇ ಹೊರತು ...ೂ ಕಮ್ಮಿಯೇ ಎನ್ನಿಸಿತು.

...ಯ ಕೊಟ್ಟರೆ ಅದು ವಿರೋಧಿ ಪಾಳಯಕ್ಕೇ ...ಸಿ ತನ್ನ ಕಾರ್ಯಾಚರಣೆಯನ್ನು ತೀವ್ರಗೊಳಿಸಲು ...ಸೂಕ್ತ ಕಾಲವಿಲ್ಲ ಎಂದು ಯಡ್ಡಿ ನಿರ್ಧರಿಸಿದ್ದಾರೆ. ... ತನ್ನನ್ನು ನಿರ್ಲಕ್ಷಿಸುತ್ತಿರುವ ಹೈಕಮಾಂಡ್, ...ಗುತ್ತಿರುವ ಸದಾನಂದ ಗೌಡ, ಹೆಚ್ಚುತ್ತಿರುವ ...ಉದ್ಧಟತನ, ಜೊತೆಗೆ ತಿರುಗಿಬಿದ್ದ ಲಿಂಗಾಯತ ...ಂದು ಮತ್ತು ಜಾರಕಿಹೊಳಿ ಪಟಾಲಮ್ಮಿನ ...ಲ್ಲವನ್ನೂ ಲೆಕ್ಕ ಹಾಕಿದ ಯಡ್ಡಿಗೆ ಅಂತಿಮವಾಗಿ ...ದ್ದು ತನ್ನ ಹತಾಶೆ ಮತ್ತು ಓಪ್ಪೊಟ್ಟುಸಿಕೆ ಮಾತ್ರ. ..., ತಾಳ್ಮೆ ವಹಿಸಿದರೆ ಅದು ತನ್ನ ಅವನತಿಯಲ್ಲದೇ ... ಅಲ್ಲ ಅಷ್ಟಿಸಿ ಮಾರ್ಚ್ 30 ರ ಚಹಾಕೂಟಕ್ಕೆ ...ದ್ದಾರೆ. ಬಹುಶಃ ಮಾರ್ಚ್ 30 ರಂದೇ ಸದಾನಂದ ...ಬರಹ ನಿರ್ಧಾರವಾಗಬಹುದು. ಹೆಚ್ಚೆಂದರೆ ...ಪ್ರಿಲ್ ಎರಡನೇ ವಾರಕ್ಕೆ, ಮುಂದು ...ಬಹುದು. ಯಡ್ಡಿಯ ತಾಳ್ಮೆ ಮತ್ತು ಸದಾನಂದ ...ಎಂ. ಗಿರಿ ಎರಡಕ್ಕೂ ಆಯಸ್ಸು ಕಮ್ಮಿ. ❀

ಅರಸಯ್ಯನ ಪ್ರಾಣಕ್ಕೆ ಜೈಲಲ್ಲೂ ಆಪತ್ತು

ಇದ್ದಕ್ಕಿದ್ದಂತೆ ಬನಶಂಕರಿಯ ರೌಡಿ ಅರಸಯ್ಯನನ್ನು ಪರಪ್ಪನ ಅಗ್ರಹಾರ ಜೈಲಿಂದ ಬೆಳಗಾವಿಯ ಹಿಂಡಲಗಾ ಜೈಲಿಗೆ ಕಮಾನೆತ್ತಿದ್ದಾರಂತೆ ಜೈಲಧಿಕಾರಿಗಳು. ಜೊತೆಗೆ ಸೈಕಲ್ ರವಿ ಸಹಚರ ಬಳ್ಳನನ್ನೂ ಕಳಿಸಿದ್ದಾರಂತೆ. ಅರಸಯ್ಯನ ಬಲಗೈ ಬಂಟ ಮುತ್ತ ಅಲ್ಲದೆ ಇನ್ನೂ ಒಂದು ಡಜನ್ ರೌಡಿಗಳನ್ನು ಎತ್ತಿದ್ದೇ ಬೆಳಗಾವಿ ಜೈಲಿಗೆ ಅಟ್ಟಿದ ಜೈಲಾಧಿಕಾರಿಗಳ ಈ ನಿರ್ಧಾರಕ್ಕೆ ಕಾರಣವಾದದ್ದು ಫೆಬ್ರವರಿ 20 ರ ಜೈಲು ಫೈಟಿಂಗ್!



ಆವತ್ತು ಮಧ್ಯಾಹ್ನ ಮಾಮೂಲಿನಂತೆ ಕೈದಿಗಳ ಇಂಟರ್‌ವ್ಯೂ ಇತ್ತು. ತನಗೆ ಇಂಟರ್‌ವ್ಯೂ ಹಾಕಿದ್ದ ಯಾರನ್ನೋ ನೋಡಲೆಂದು ಸಂದರ್ಶನ ಕೊಠಡಿ ಬಳಿ ಅರಸಯ್ಯನ ಜೊತೆ ಬನಶಂಕರಿಯ ಹಳೇ ಚೈನ್ ಸ್ನಾಚರ್ ಮುತ್ತ ಎಂಬಾತನೂ ಇದ್ದ. ಸದ್ಯ ಈತ ಅರಸಯ್ಯನ ಬಾಡಿಗಾರ್ಡ್ ಅಂತೆ. ಸಾಲದೆಂಬಂತೆ ಸರಿಸುಮಾರು ಹದಿನೈದಿಪ್ಪತ್ತು ಮಂದಿ ಸಹಚರರ ಜೊತೆಗೆ ಇದೇ ಬನಶಂಕರಿಯ ಕಿರಾತಕ ಪಾತಕಿ ಬಳ್ಳನೂ ಇದ್ದ. ಅದೇ ಹೊತ್ತಿಗೆ ಯಾರೋ ಕಿಟ್ಟಿ ಎಂಬ ಪುಡಿ ರೌಡಿಯೊಬ್ಬ ಸಂಶಯಾಸ್ಪದವಾಗಿ ಅರಸಯ್ಯನ ಗ್ಯಾಂಗ್ ಸುತ್ತ ಠಳಾಯಿಸಿಕೊಂಡಿದ್ದ.

ತಾವು ಹೋಗಿಬಂದಲೆಲ್ಲ ಸದ್ದಿಲ್ಲದೇ ಹಿಂಬಾಲಿಸುತ್ತಿದ್ದ ಆ ಪುಡಿ ರೌಡಿಯ ಬಗ್ಗೆ ಮಾಹಿತಿ ಕಲೆಹಾಕಿದ ಅರಸಯ್ಯನಿಗೆ ತಕ್ಷಣವೇ ಗೊತ್ತಾಗಿದ್ದು ಅದು ತನ್ನ ಆಜನ್ಮವೈರಿಗಳಾದ ಕುಟ್ಟಿ-ಪಳನಿಯಲ್ಲೇ ಜೈಲು ಸ್ಕೆಚ್ಚು!


ಅಲ್ಯೂಮಿನಿಯಂ ಬಾಬು ಹತ್ಯೆಗೆ ಸ್ಕೆಚ್ಚು ಹಾಕಿದ್ದನೆಂದು ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಕೈಗೆ ಸಿಕ್ಕಿಬಿದ್ದು ಜೈಲು ಪಾಲಾಗಿದ್ದ ಅರಸಯ್ಯನನ್ನು ಜೈಲಲ್ಲೇ ಮುಗಿಸಿಬಿಡಲು ಕುಟ್ಟಿ-ಪಳನಿ ಹೊಂಚು ಹಾಕಿದ್ದರು. ಇವರಿಬ್ಬರೂ ಅರಸಯ್ಯನಿಂದ ಕೊಲೆಯಾಗಿದ್ದ ರಂಗನಾಥನ ಖಾಸಾ ತಮ್ಮಂದಿರು. ಷಣ್ಮುಗ ಅಲಿಯಾಸ್ ಕುಟ್ಟಿ ಅಣ್ಣನಾದರೆ ಶೇಖರ್ ಅಲಿಯಾಸ್ ಪಳನಿಯೇ ಕೊನೆಯವನು. ಜಿಮ್ ಸೋಮ ಎಂಬ ಮೀಟರ್ ಬಡ್ಡಿ ಖದೀಮನ ಮಾತು ಕೇಳಿ ತನ್ನನ್ನು ನಡುರಸ್ತೆಯಲ್ಲೇ ಅಟ್ಟಾಡಿಸಿ ಕತ್ತರಿಸಿದ ರಂಗನಾಥನನ್ನು ಅರಸಯ್ಯ ಕೊಂದು ಹಾಕಿದ್ದ.



ಸೈಕಲ್ ರವಿ


ಅಲ್ಲಿಯತನಕ ಅರಸಯ್ಯನಿಗೆ ಬೆಂಬಲವಾಗಿದ್ದವನು ಜಲ್ಲಿ ವೆಂಕಟೇಶ. ಅದೇನಾಯಿತೋ ಅರಸಯ್ಯನ ದುಶ್ಮನ್ ಜಿಮ್ ಸೋಮ ಮತ್ತು ಜಲ್ಲಿ ವೆಂಕಟೇಶರ ಮಧ್ಯೆ ದೋಸ್ತಿ ಚಿಗುರಿತು. ಇದರ ಪ್ರತಿಫಲವೆಂಬಂತೆ ಅರಸಯ್ಯನಿಂದ ಹತನಾಗಿದ್ದ ರಂಗನಾಥನ ತಮ್ಮಂದಿರು ಜಲ್ಲಿ ವೆಂಕಟೇಶನ ಜೊತೆಗೂಡಿದರು. ಅರಸಯ್ಯನ ತಮ್ಮ ಸಿದ್ಧಲಿಂಗನನ್ನು ಕುಟ್ಟಿ-ಪಳನಿ ಮುಂತಾದವರೆಲ್ಲ ಸೇರಿ ಅನ್ಯಾಯವಾಗಿ ಕೊಂದುಬಿಟ್ಟರು.

ಅಲ್ಲಿಯತನಕ ಜಲ್ಲಿಯ ಜೊತೆಗಿದ್ದ ಅಲ್ಯೂಮಿನಿಯಂ ಬಾಬುವಿಗೂ ಅರಸಯ್ಯನಿಗೂ ಅದೆಂಥದೋ ದೋಸ್ತಿ ಕುದುರಿತ್ತು, ಪರಿಣಾಮವಾಗಿ ಅಲ್ಯೂಮಿನಿಯಂ ಬಾಬು ಕೈಯಲ್ಲಿ ಜಲ್ಲಿ ಕೊಲೆಯಾದ. ಆವತ್ತು ಜಲ್ಲಿ ಹತ್ಯೆಯಲ್ಲಿ ಬಾಬು ಜೊತೆ ಕೈಜೋಡಿಸಿದ ಮತ್ತೊಬ್ಬ ಪಾತಕಿಯೇ ಮೈಕೋ ರವಿ. ಈ ಹೊತ್ತಿಗೆ ಉದಯ ಟೀವಿಯಲ್ಲಿ ರಾಘವೇಂದ್ರ ಎಂಬಾತನ ರೆಡ್ ಅಲರ್ಟ್ ಎಂಬ ಕ್ರೈಮ್ ಸೀರಿಯಲ್ ಬರುತ್ತಿತ್ತು, ಇದಕ್ಕೆ ಜಯನಗರ ಒಂಭತ್ತನೇ ಬ್ಲಾಕಿನ ಜಿಮ್ ಸೋಮನ ಸಹಚರ ಮೋಹನ್ ಎಂಬಾತನೂ ಪಾಲುದಾರನಾಗಿದ್ದ. ಮಾಹಿತಿಗೋ, ವಸೂಲಿಗೋ ಗೊತ್ತಿಲ್ಲ, ಪರಮೇಶ ಎಂಬ ಪುಡಿ ರೌಡಿಯೊಬ್ಬನನ್ನು ರೆಡ್ ಅಲರ್ಟ್‌ನ ವರದಿಗಾರನನ್ನಾಗಿ ನೇಮಿಸಿಕೊಂಡಿದ್ದರು.



ಈತನ ಅಳ್ಳಾಟಿ ಬುದ್ಧಿ, ಪೊಲೀಸ್ ಚಮಚಾಗಿರಿ ಇತ್ಯಾದಿಗೆ ರೋಸತ್ತ ಮೈಕೋ ರವಿ ತಲೆಕೆಟ್ಟು ಪರಮೇಶನನ್ನೇ ಕತ್ತರಿಸಿ ಕೊಂದು ಹಾಕಿದ. ಹೇಗೂ ಮೈಕೋ ರವಿ ಜಲ್ಲಿ ವೆಂಕಟೇಶನ ಕೊಲೆಯಲ್ಲಿದ್ದನಲ್ಲ, ಪರಮೇಶನ ಹುಡುಗರು ಜಲ್ಲಿ ಶಿಷ್ಯನ ಜೊತೆ ಸೇರಿ ಕೊನೆಗೆ ಮೈಕೋ ರವಿಯನ್ನೇ ಮುಗಿಸಿಬಿಟ್ಟರು. ಜಲ್ಲಿಯ ಹತ್ಯೆಯ ವೇಳೆ ಅರಸಯ್ಯ ಜೈಲಿನಲ್ಲಿದ್ದ. ಹಾಗೇ ಜೈಲಿಂದ ಬಂದವನು ತನಗಿನ್ನು ಘಾತಕದ ಹಾದಿಯೇ ಸಾಕೆಂದು ಬೆಂಗಳೂರನ್ನೇ ಬಿಟ್ಟು ದೂರದ ಕುಣಿಗಲ್ಲಿನ ತನ್ನ ಹುಟ್ಟೂರನ್ನು ಸೇರಿಕೊಂಡಿದ್ದ.

ಹಾಗೇ ಹಳ್ಳಿ ಸೇರಿಕೊಂಡಿದ್ದ ಅರಸಯ್ಯನನ್ನು ಇನ್ಸ್‌ಪೆಕ್ಟರ್ ಉಮೇಶ್ ಹಿಡಿದು ಜೈಲಿಗೆ ದಬ್ಬಿದ್ದು ಅಂತಿಮವಾಗಿ ಪರಪ್ಪನ ಅಗ್ರಹಾರ ಜೈಲು ಫೈಟಿಂಗಿಗೆ ಕಾರಣವಾಯಿತು. ಆವತ್ತು ಸಂದರ್ಶನ ಕೊಠಡಿಗೆ ಬಂದಿದ್ದ ಅರಸಯ್ಯನನ್ನು ಅಟ್ಯಾಕ್ ಮಾಡಿ ಮುಗಿಸುವುದು ಆತನ ಕಡುವೈರಿಗಳಾದ ಕುಟ್ಟಿ-ಪಳನಿಯ ಸ್ಕೆಚ್ ಆಗಿತ್ತು, ಜೊತೆಗೆ ಜಲ್ಲಿ ವೆಂಕಟೇಶನ ಬಂಟ ಸುಬ್ಬನೂ ಕೈಜೋಡಿಸಿದ್ದ. ಜೈಲಿನ ಸೆಲ್ ಒಂದರಲ್ಲಿ ಕುಟ್ಟಿ-ಪಳನಿ-ಸುಬ್ಬ-ಮಾತ್ರವಲ್ಲದೆ ಇನ್ನೂ ಇಪ್ಪತ್ತು ಮಂದಿಯ ಗ್ಯಾಂಗ್ ಅರಸಯ್ಯನಿಗಾಗಿ ಹೊಂಚಿ ಕೂತಿತ್ತು. ಅರಸಯ್ಯ ಸಂದರ್ಶನ ಕೊಠಡಿಯ ಬಳಿ ಬಂದಿದ್ದೇ ತಡ ದಾಳಿ ನಡೆಸುವುದು ಅವರ ಉದ್ದೇಶವಾಗಿತ್ತು.



ಕತ್ತಿಗುಪ್ಪೆ ಲಿಂಗ

ಆದರೆ ದಾಳಿಗೆ ಮೊದಲೇ ಅರಸಯ್ಯನ ಕಣ್ಣಿಗೆ ಕುಟ್ಟಿಯ ಹುಡುಗ ಬಿದ್ದುಬಿಟ್ಟ. ತನ್ನನ್ನು ಸದ್ದಿಲ್ಲದೇ ಹಿಂಬಾಲಿಸುತ್ತಿದ್ದ ಆತನನ್ನು ನೋಡಿದ್ದೇ ತಡ ಅರಸಯ್ಯನ ಹುಡುಗರು ಅಟ್ಟಾಡಿಸಿ ಬಡಿದಿದ್ದಾರೆ. ಪಕ್ಕದಲ್ಲೇ ಪಹರೆಗಿದ್ದ ಜೈಲು ಸಿಬ್ಬಂದಿ ಧಾವಿಸಿ ಬಂದಿದ್ದೇ ಹೊಡೆಯುತ್ತಿದ್ದ ಅರಸಯ್ಯನ ಹುಡುಗರನ್ನು ಬಡಿದಿದ್ದಾರೆ. ಯಾವತ್ತು ತಮ್ಮ ಹುಡುಗನನ್ನೇ ಹಿಡಿದು ಅರಸಯ್ಯನ ಹುಡುಗರು ಹೊಡೆದದ್ದು ಗೊತ್ತಾಯಿತೋ ಕುಟ್ಟಿ, ಪಳನಿ, ಸುಬ್ಬಾ ಮುಂತಾದ ಇಪ್ಪತ್ತಕ್ಕೂ ಹೆಚ್ಚು ಮಂದಿ ಪೋರ್ಕಿಗಳ ಗ್ಯಾಂಗ್ ಅರಸಯ್ಯನ ಮೇಲೆ ದಾಳಿಗೆ ನುಗ್ಗಿದೆ.



ಕೌನ್ಸಿಲರ್ ರಾಮಮೂರ್ತಿ

ಬಹುಶಃ ಜೈಲು ಸಿಬ್ಬಂದಿ ಜಾಗ್ರತೆ ವಹಿಸಿ ಅರಸಯ್ಯನ ಗ್ಯಾಂಗಿನ ಮೇಲೆ ಲಾಠಿ ಚಾರ್ಜ್ ಮಾಡದೇ ಹೋಗಿದ್ದರೆ ಆವತ್ತು ಕುಟ್ಟಿ-ಪಳನಿ ಗ್ಯಾಂಗಿಗೂ ಅರಸಯ್ಯನ ಪಡೆಗೂ ಭೀಕರ ಮಾರಾಮಾರಿಯೇ ನಡೆದುಹೋಗುತ್ತಿತ್ತು, ಜೈಲು ಸಿಬ್ಬಂದಿಯ ಮುಂಜಾಗ್ರತೆಯಿಂದಾಗಿ ಮಾರಾಮಾರಿ ತಪ್ಪಿತು. ಇದರಿಂದಾಗಿ ಮತ್ತೊಮ್ಮೆ ತಾಪತ್ರಯಕ್ಕೆ ಸಿಲುಕಿದ್ದು ಅರಸಯ್ಯನೆ. ಅರಸಯ್ಯ ಆತನ ಬಾಡಿಗಾರ್ಡ್ ಮುತ್ತು ಮತ್ತು ಸೈಕಲ್ ರವಿ ಶಿಷ್ಯ ಬಳ್ಳನನ್ನು ಹಿಡಿದದ್ದೇ ಹಿಂಗ್ಗಾಮುಗ ಬಡಿದ ಜೈಲಧಿಕಾರಿಗಳು ದೂರದ ಬೆಳಗಾವಿ ಜೈಲಿಗೆ ಇಡೀ ಅರಸಯ್ಯನ ಗ್ಯಾಂಗನ್ನು ಕಮಾನೆತ್ತಿದ್ದಾರೆ.

ಮೇಲುನೋಟಕ್ಕಿದು ಎರಡು ಶತ್ರು ತಂಡಗಳ ನಡುವಿನ ಗ್ಯಾಂಗ್‌ವಾರ್‌ನಂತೆ ಕಂಡರೂ ಇದರ ಬದಿ ವಿವರಗಳನ್ನು ಕೆದಕುತ್ತಾ ಹೋದಂತೆಲ್ಲ ಬನಶಂಕರಿಯ ದರ್ಟಿ ಪಾಲಿಟಿಕ್ಸ್ ಅನಾವರಣಗೊಳ್ಳುತ್ತದೆ. ಜೈಲಲ್ಲಿ ಅರಸಯ್ಯನ ಹತ್ಯೆಗೆ ಯತ್ನಿಸಿದ್ದು ಆತನ ಕಡುವೈರಿಗಳಾದ ಕುಟ್ಟಿ-ಪಳನಿಯೇ ಆದರೂ ಅವರ ಜೊತೆ ಜಲ್ಲಿ ವೆಂಕಟೇಶನ ಹುಡುಗ ಸುಬ್ಬನೂ ಕೈಜೋಡಿಸಿದ್ದಾನೆ. ಜೊತೆಗೆ ಕತ್ತಿಗುಪ್ಪೆ ಲಿಂಗನ ಹುಡುಗರೂ ಸೇರಿದ್ದಾರೆ. ಅಲ್ಲಿಗೆ ಲಿಂಗನ ಹುಡುಗರು ಮತ್ತು ಜಲ್ಲಿ ವೆಂಕಟೇಶನ ಗ್ಯಾಂಗ್ ಪರಸ್ಪರ ಅರಸಯ್ಯನ ವಿರುದ್ಧ ಕೈ ಜೋಡಿಸಿದಂತಾಯ್ತು.

ಇದಲ್ಲದೆ ನಿನ್ನಮೊನ್ನೆಯ ತನಕ ಅರಸಯ್ಯನ ಜೊತೆಗಿದ್ದ ಅಲ್ಯೂಮಿನಿಯಂ ಬಾಬು ಈಗ ಅರಸಯ್ಯನ ವಿರುದ್ಧ ತಿರುಗಿಬಿದ್ದಿದ್ದಾನೆ. ರಂಗನಾಥನ ಕೊಲೆ, ಅದಕ್ಕೂ ಮುನ್ನ ಸತೀಶನ ಹತ್ಯೆ ಆನಂತರ ಸುಬ್ರಹ್ಮಣ್ಯಪುರದ ಡಬಲ್ ಮರ್ಡರ್‌ನಲ್ಲಿದ್ದ ಗುಂಡಾ ಅಲಿಯಾಸ್ ಶಿವಕುಮಾರ್ ಕೂಡ ಈಗ ಅರಸಯ್ಯನಿಂದ ದೂರಾಗಿದ್ದಾನೆ. ಹೀಗಿದ್ದೂ ನಿಶ್ಚಿಂತೆಯಿಂದ ಅರಸಯ್ಯ ಓಡಾಡಿಕೊಂಡಿದ್ದನೆಂದರೆ ಅದಕ್ಕೆ ಕಾರಣನಾದವನು ಜಯನಗರ 9 ನೇ ಬ್ಲಾಕಿನ ಬಿಜೆಪಿ ಕೌನ್ಸಿಲರ್ ಮತ್ತು ಹಾಲಿ ನಗರ ಯೋಜನೆ ಸ್ಥಾಯಿ ಸಮಿತಿಯ ಅಧ್ಯಕ್ಷ ಸಿ.ಕೆ. ರಾಮಮೂರ್ತಿ!

ಇವತ್ತಲ್ಲಾ ನಾಳೆ ಶಾಸಕ ವಿಜಯ್‌ಕುಮಾರ್‌ರನ್ನು ತುಳಿದು ತಾನು ಜಯನಗರಕ್ಕೆ ಎಮ್ಮೆಲ್ಲೆಯಾಗುವ ಭ್ರಮೆ ರಾಮಮೂರ್ತಿಗಿದೆ. ಅದಕ್ಕೆ ಅರಸಯ್ಯನನ್ನು ಮುಂದಿಟ್ಟುಕೊಂಡು ಸಣ್ಣಪುಟ್ಟ ಗ್ಯಾಂಗುಗಳನ್ನೆಲ್ಲ ನಿಕಾಲಿ ಮಾಡುವುದು ರಾಮಮೂರ್ತಿಯ ಉದ್ದೇಶ. ಅರಸಯ್ಯನಿಗೆ ಏನೇ ಅಂಡರ್‌ವರ್ಲ್ಡ್ ಸಹವಾಸ ಸಾಕು ಎನ್ನಿಸಿ ಬೆಂಗಳೂರು ಬಿಟ್ಟು ಹಳ್ಳಿ ಸೇರಿಕೊಂಡರೂ ಆತನಿಗೆ ಮತ್ತೆ ಮತ್ತೆ ಪಂಪ್ ಹೊಡೆದು ಫೀಡ್ ಮಾಡಿ ಫೀಲ್ಡಿಗೆ ಕರೆತರುವವನು ಬಿಜೆಪಿ ಕೌನ್ಸಿಲರ್ ರಾಮಮೂರ್ತಿ!

ಈಗ ಇದೇ ರಾಮಮೂರ್ತಿಯ ದುರಾಶೆ ತೀರಿಸಲು ಹೋದ ಅರಸಯ್ಯ ಅಲ್ಯುಮಿನಿಯಂ ಬಾಬುವನ್ನು ಮುಗಿಸ ಹೊರಟಿದ್ದಾನಾ? ಅದು ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಕಿವಿಗೆ ಬಿದ್ದಿದ್ದು ಹೇಗೆ? ಅಥವಾ ಅರಸಯ್ಯ ತನ್ನ ನಿಯಂತ್ರಣ ತಪ್ಪಿ ಹಳ್ಳಿ ಸೇರಿಕೊಳ್ಳುವುದು ರಾಮಮೂರ್ತಿಗೆ ಇಷ್ಟವಿಲ್ಲವೆ? ಅರಸಯ್ಯ ಪಾಪಕೂಪವನ್ನು ತೊರೆದು ಹೋದರೆ ತಮಗೆಲ್ಲಿ ನಷ್ಟವಾಗುತ್ತೋ ಎಂದು ಬಿಜೆಪಿಯವರೇ ಪೊಲೀಸರನ್ನು ಬಿಟ್ಟು ಅರಸಯ್ಯನನ್ನು ಹಿಡಿದು ತಂದು ಜೈಲಿಗಟ್ಟಿರಬಹುದಾ?

ಒಂದಂತೂ ಸತ್ಯ. ಜೈಲು ಫೈಟಿಂಗ್ ಸದ್ಯಕ್ಕೆ ನಿಂತಿದೆ ನಿಜ. ಆದರೆ ಇದೇ ಕೊನೆಯಲ್ಲ, ಅರಸಯ್ಯನ ಎಲ್ಲಾ ದುಷ್ಮನ್‌ಗಳೂ ಒಂದಾಗಿದ್ದಾರೆ. ಪರಸ್ಪರ ಕೈಜೋಡಿಸಿದ್ದಾರೆ. ಹಳೇ ಪಾತಕಿ ಶಿವಕಾಳಿ, ಪ್ರಗತಿಪುರದ ಸಿದ್ಧ ರಾಜ, ನಾಗ, ಬಳ್ಳಾರಿ, ಶಿವ, ಚಿನ್ನಮ್ಮ, ಮಲ್ಲೇಶ್ವರದ ಗಿರೀಶ ಅಲಿಯಾಸ್ ಶೂಟ್, ಮಂಡ್ಯದ ಧರ್ಮ, ಮೆಜೆಸ್ಟಿಕ್‌ನ ಭದ್ರಿ, ಯಲಹಂಕದ ರೆಡ್ಡಿ, ಶ್ರೀನಗರದ ಸೀನ ಉರ್ಫ್ ಭೂತ ಮತ್ತು ಟಿಬೆಟ್ ಮಂಜುನಾಥ ಸಾಧಾರಣ ಮಟ್ಟಗಿನ ಹುಡುಗರನ್ನು ಬಿಟ್ಟರೆ ಮತ್ತಾರೂ ಅರಸಯ್ಯನ ಜೊತೆಗಿಲ್ಲ.

ಇಂಥಾ ಸ್ಥಿತಿಯಲ್ಲಿ ಬನಶಂಕರಿಯಲ್ಲಿ ಬೀಳುವ ಮುಂದಿನ ಹೆಣ ಯಾರದಾಗಬಹುದು?

ನಿರ್ಧರಿಸುವುದು ಬಿಜೆಪಿ ಕೌನ್ಸಿಲರ್ ರಾಮಮೂರ್ತಿಯಾ ಅಥವಾ ಬಿಜೆಪಿ ಸರ್ಕಾರದ ಪೊಲೀಸರಾ?

-ರಾ.ಸೋ.

ಹುಬ್ಬಳ್ಳಿ- ಧಾರವಾಡ ಪೋಲೀಸ್ ಕಮೀಷನರ್ ರಾಮಚಂದ್ರರಾವ್ ಲೂಟಿ!

ಅವಳಿನಗರಗಳಲ್ಲಿ ಪೊಲೀಸರಿಂದಲೇ ಹಗಲುದರೋಡೆ ನಡೆಯುತ್ತಿದೆ. ಸ್ವತಃ ಪೊಲೀಸ್ ಕಮೀಷನರ್ ಕೆ.ರಾಮಚಂದ್ರರಾವ್ ತಮ್ಮ ಸ್ವಜಾತಿಯ ಮೂವರು ಅಧಿಕಾರಿಗಳ ಒಂದು ತಂಡವನ್ನು ಕಟ್ಟಿ ಆ ಅಧಿಕಾರಿಗಳನ್ನು ವಸೂಲಿಗೆ ನಿಲ್ಲಿಸಿದ್ದಾರೆ. ಒಬ್ಬೊಬ್ಬರೂ ದಿನಕ್ಕೆ ಇಂತಿಷ್ಟು ಹಣ ತಂದರೇನೇ ತನ್ನವರು ಎಂದು ಒಪ್ಪಿಕೊಳ್ಳುತ್ತೇನೆ ಎಂಬ ಸಾಹೇಬರ ಪರವಾನಗಿಗೆ ತಕ್ಕಂತೆ ಅವರೆಲ್ಲ 'ಪ್ರಾಮಾಣಿಕ'ವಾಗಿ ದುಡಿಯುತ್ತಿದ್ದಾರೆ. ಈ ಭ್ರಷ್ಟ ಅಧಿಕಾರಿಗಳೆಂದರೆ ಕಸಬಾಪೇಟೆಯ ಇನ್ಸ್‌ಪೆಕ್ಟರ್ ಲೋಕೇಶ, ಧಾರವಾಡ ಶಹರದ ತುಳಜಪ್ಪ ಎಸ್.ಸುಲ್ಪಿ ಮತ್ತು ಹಳೇ ಹುಬ್ಬಳ್ಳಿಯ ಪ್ರದೀಪ ಚಲುವಾದಿ. ಇವರಿಂದಾಗಿ ಅವಳಿನಗರಗಳಲ್ಲಿ ಅಕ್ರಮ ಕುಳಗಳಿಗೆ ಲಂಗುಲಗಾಮು ಹಾಕುವವರೇ ಇಲ್ಲದಂತಾಗಿ ಎಲ್ಲಾ ಹಡಾಲು ದಂಧೆಗಳು ಬಿಂದಾಸಾಗಿ ಬಾಯ್ತೆರೆದು ನಿಂತಿವೆ.



ರಾಮಚಂದ್ರ ರಾವ್


ಬಂದ ಹೊಸತರಲ್ಲಿ ಅವಳಿ ನಗರಕ್ಕೊಬ್ಬ ಖಡಕ್ ಖಾಕಿ ಬಂದರು ಎಂಬ ರೂಮರ್ ತೇಲಿಬಿಟ್ಟಿದ್ದ ರಾಮಚಂದ್ರರಾವ್ ತಮ್ಮ ಗಡಸುತನವನ್ನು ನಾಲ್ಕೇ ತಿಂಗಳಿಗೆ ಕಳೆದುಕೊಂಡುಬಿಟ್ಟರು. ಇವರ 'ಪರಾಕ್ರಮದ' ಕೃಪೆಯಿಂದಲೇ ಇವತ್ತು ಅಕ್ರಮ ಸರಾಯಿ, ಸ್ಪಿರಿಟು, ನಕಲಿ ಸೀಮೆಎಣ್ಣೆ, ವೇಶ್ಯಾವಾಟಿಕೆ, ಮಟಕಾ, ಜೂಜು ಅಡ್ಡೆಗಳ ಕುಳಗಳು ನಡುಬೀದಿಯಲ್ಲಿ ನಿಂತು ಬಿಂದಾಸಾಗಿ ಗರಿಗರಿ ನೋಟು ಎಣಿಸುತ್ತಿದ್ದಾರೆ. ಪೊಲೀಸರಿಗೆ ಬರಬೇಕಾದ ಹಣ ಸರಿಯಾದ ವೇಳೆಗೆ ತಲುಪದಿದ್ದಾಗ ಮಾತ್ರ ರೇಡು, ಕೇಸು ಎಂಬ ಡ್ರಾಮಾ ಮಾಡುವ ಖಾಕಿಗಳು ಒಂದಕ್ಕೆ ಎರಡರಷ್ಟು ಹಣ ಸುಲಿದು ಇಡೀ ಅವಳಿನಗರದ ವಾತಾವರಣವನ್ನೇ ಗಬ್ಬೆಬ್ಬಿಸಿದ್ದಾರೆ.




ಸಂಜು ಕಾಟ್ವೆ

ಜಾತಿ ಮಾಫಿಯಾದ ವಸೂಲಿ ಶೈಲಿ

ಕಮೀಷನರ್ ರಾಮಚಂದ್ರರಾವ್ ಈಗ ಯಾವ ಆ್ಯಂಗಲ್‌ನಿಂದ ನೋಡಿದರೂ ಪ್ರಾಮಾಣಿಕನಂತೆ ಕಾಣುತ್ತಿಲ್ಲ, ಏಕೆಂದರೆ ಇವರೇ ನೇಮಿಸಿರುವ ಪೊಲೀಸ್ ಮೂವರು ಇನ್ಸ್‌ಪೆಕ್ಟರ್‌ಗಳು ಅವಳಿನಗರವನ್ನು ಮೂರು ಭಾಗವನ್ನಾಗಿಸಿ ವಿಂಗಡಿಸಿಕೊಂಡು ಹರಿದು ಮುಕ್ಕುತ್ತಿದ್ದಾರೆ. ಜೊತೆಗೆ ಈ ಮೂವರೂ ಸ್ವತಃ ತಾವೇ ಆಯುಕ್ತರೆಂಬಂತೆ ವರ್ತಿಸತೊಡಗಿದ್ದಾರೆ. ಧಾರವಾಡ ಭಾಗಕ್ಕೆ ತುಳಜಪ್ಪ ಸುಲ್ಪಿಯೇ ರಾಜನಾದರೆ, ಹುಬ್ಬಳ್ಳಿ ಶಹರಕ್ಕೆ ಪ್ರದೀಪ್ ಚಲುವಾದಿಯೇ ಪಾಳೇಗಾರ. ಹಾಗೆಯೇ ಗ್ರಾಮೀಣ ಭಾಗಕ್ಕೆ ಲೋಕೇಶನೇ ದೊರೆ.



ಸೀಮೆಎಣ್ಣೆ ಸಂಜಯ



ಕಾಶಿ ಖೋಡೆ


ತಮ್ಮ ತಮ್ಮ ಪ್ರಾಂತ್ಯದಲ್ಲಿ ವಸೂಲಿ ದಂಧೆಯನ್ನು ಬಲು ಜೋರಾಗಿಯೇ ನಡೆಸುತ್ತಿರುವ ಈ ಮೂವರು ಸದ್ಯ ಕೋಟಿಗಳ ಲೆಕ್ಕದಲ್ಲಿ ತೂಗುತ್ತಿದ್ದಾರೆ. ಇವರ ಆಶಿಸ್ತು ಎಷ್ಟು ಬೆಳೆದಿದೆ ಎಂದರೆ ತಮಗಿಂತ ಹಿರಿಯ ಅಧಿಕಾರಿಗಳಿಗೂ ಸೆಲ್ಯೂಟ್ ಹೊಡೆಯುವುದಿಲ್ಲ, ಇವರ ದರ್ಬಾರು ಕಂಡೇ ಹಿರಿಯ ಅಧಿಕಾರಿಗಳು ಏನನ್ನೂ ಪ್ರಶ್ನಿಸದೆ ತಮ್ಮಷ್ಟಕ್ಕೆ ತಾವು ಎಂಬಂತೆ ಇದ್ದಾರೆ. ಹಾಗೊಮ್ಮೆ ಅವರೇನಾದರೂ ಈ ತ್ರಿಮೂರ್ತಿಗಳ ವಿರುದ್ಧ ಕಮೀಷನರ್‌ಗೆ ದೂರು ನೀಡಿದರೆ ಅಂತಹ ಅಧಿಕಾರಿಗಳಿಗೇ ಈ ಮೂವರು ಫಿಟಿಂಗ್ ಇಡುತ್ತಾರೆ.

ಫಿಟಿಂಗ್‌ನಿಂದ ದೂರಾದರು

ಅವಳಿನಗರದ ಖಾಕಿ ವಲಯದ ಅನಭಿಷಕ್ತ ದೊರೆಗಳಂತೆ ಮೆರೆಯುತ್ತಿರುವ ಸುಲ್ಪಿ, ಲೋಕೇಶ ಮತ್ತು ಪ್ರದೀಪ್ ತಮ್ಮ ವಸೂಲಿ ದಂಧೆಗೆ ಎದುರಾಗಿ ನಿಂತ ಪಿ.ಸಿ.ಗಳಿಂದ ಹಿಡಿದು ಡಿ.ಸಿ.ಪಿಗಳವರೆಗೂ - ಅವರು ಯಾರೇ ಆಗಿದ್ದರೂ - ಅವರಿಗೆಲ್ಲ ಸೈಲೆಂಟಾಗಿ 'ಫಿಟಿಂಗ್' ಇಟ್ಟು ಅವರನ್ನು ಸೈಡ್‌ಲೈನ್ ಮಾಡುತ್ತಾರೆ. ಹೀಗೆ ಇವರಿಂದ ಫಿಟಿಂಗ್ ಇಡಿಸಿಕೊಂಡು ಕಮೀಷನರ್‌ರೊಂದಿಗೆ ಸಂಬಂಧ ಕಡಿದುಕೊಂಡವರ ಪಟ್ಟಿಯೂ ದೊಡ್ಡದಾಗಿದೆ.

ಕಸದಲ್ಲಿಯೂ ರಸ ತೆಗೆಯುವ ಕಲೆಯನ್ನು ಕರಗತ ಮಾಡಿಕೊಂಡಿರುವ ಕಾನೂನು ಸುವ್ಯವಸ್ಥೆಯ ಡಿ.ಸಿ.ಪಿ. ಪ್ರತಾಪನ್ ಮತ್ತು ಆಯುಕ್ತ ರಾಮಚಂದ್ರರಾವ್ ನಡುವಿನ ಸಂಬಂಧ ಈಗ ಅಷ್ಟಕ್ಕಷ್ಟೇ. ಪ್ರತಾಪನ್ ಬಂದ ಹೊಸತರಲ್ಲಿ ಆತ ಅವಳಿನಗರವನ್ನು ಮುಕ್ಕುವುದನ್ನು ಕಂಡೇ ಇಡೀ ಖಾಕಿವಲಯ ದಂಗಾಗಿತ್ತು. ಕಮೀಷನರ್ ಇವನನ್ನು ಹತ್ತಿರ ಇರಿಸಿಕೊಂಡಿದ್ದೇ ಈ ಭರ್ತಿ ಲೂಟಿಗೆ ಕಾರಣ ಎಂದು ಅರಿತ ಖಾಕಿ ಮಾಫಿಯಾದ ವಸೂಲಿ ಇನ್ಸ್‌ಪೆಕ್ಟರ್‌ಗಳು ಆತನಿಗೆ ಬತ್ತಿ ಇಟ್ಟರು. ಪ್ರತಾಪನ್‌ನಿಗೆ ಆಮದನಿ ತರುತ್ತಿದ್ದ ಮೂಲಗಳನ್ನೆಲ್ಲಾ ತಾವೇ ಆಕ್ರಮಿಸಿಕೊಂಡರು. ಇದೆಲ್ಲದರ ಪರಿಣಾಮವಾಗಿ ಖುದ್ದು ಪ್ರತಾಪನ್ ತನಗೆ ಪೆನ್ಶನ್ ಆದರೆ ಸಾಕಪ್ಪ ಅನ್ನುವ ಸ್ಥಿತಿಗೆ ಬಂದು ನಿಂತಿದ್ದಾರಂತೆ.

ಗುಪ್ತಚರ ಇಲಾಖೆಯಲ್ಲಿ ಮಾಮೂಲಿ ಸಿಗದೆ ತಲೆಕೆರೆದುಕೊಳ್ಳುತ್ತಿದ್ದ ಎ.ಸಿ.ಪಿ ಎ.ಆರ್.ಬಡಿಗೇರ್ ಹುಬ್ಬಳ್ಳಿ ನಾರ್ತ್‌ಗೆ ಬಂದು ವಕ್ಕರಿಸಿದ್ದಾರೆ. ಈತನೂ ಅವಳಿ ನಗರದ ಪಾತಕಿಗಳಿಗೆ ಆಪ್ತನಾಗಿರುವ ಅಧಿಕಾರಿ. ಯಾವ ಮೂಲೆಯಿಂದ ಎಷ್ಟು ಹಣ ಗೆಬರಬೇಕೆಂಬುದನ್ನು ಕರಗತ ಮಾಡಿಕೊಂಡಿರುವ ಈತ ಹಲವಾರು ವರ್ಷಗಳಿಂದ ಈ ವಲಯದಲ್ಲೇ ಕಳೆದಿದ್ದಾನೆ. ಒಂದು ಕೊಲೆ ಕೇಸಿನಲ್ಲಿ ಈತ ದೊಡ್ಡ ಮಟ್ಟದ ಡೀಲ್ ಕುದುರಿಸಿಕೊಂಡಿದ್ದನ್ನು ಆಯುಕ್ತರ ಕಿವಿಗೆ ಮುಟ್ಟಿಸಲಾಯಿತು. ತ್ರಿಮೂರ್ತಿಗಳಿಂದ ಹೀಗೆ ಫಿಟಿಂಗ್ ಇಡಿಸಿಕೊಂಡ ಬಡಿಗೇರ ಈಗ ತಾನಾಯ್ತು ತನ್ನದಾಯ್ತು ಎಂಬಂತೆ ಸುಮ್ಮನಾಗಿದ್ದಾನೆ.



ಎಸಿಪಿ ಶ್ರೀನಾಥ್ ಜೋಷಿ


ಸೌತ್ ಎ.ಸಿ.ಪಿ ಶ್ರೀನಾಥ ಜೋಷಿ ತ್ರಿಮೂರ್ತಿಗಳ ಉಣ್ಣುವ ಪರಿ ಮತ್ತು ಖಾಕಿ ಮಾಫಿಯಾ ಕಂಡು ಹೆದರಿ ಇಲ್ಲಿಂದ ಕಾಲ್ಕಿತ್ತಿದ್ದಾರೆ. ಹುಬ್ಬಳ್ಳಿ ಸಂಚಾರಿ ಎ.ಸಿ.ಪಿ. ಆಗಿದ್ದ ಡಾ. ಸಂಜೀವ ಪಾಟೀಲ ಸದ್ದಿಲ್ಲದೇ ಧಾರವಾಡಕ್ಕೆ ವರ್ಗ ಮಾಡಿಸಿಕೊಂಡಿದ್ದಾರೆ. ಇನ್ನು ಇದ್ದುದರಲ್ಲೇ ಅಲ್ಪಸ್ವಲ್ಪ ಪ್ರಾಮಾಣಿಕರೆನಿಸಿಕೊಂಡಿರುವ ಬೆಂಡಿಗೇರಿ ಠಾಣೆಯ ರವೀಂದ್ರ ಶಿರೂರ, ಸಬರ್‌ಮನ್ ಠಾಣೆಯ ಪುಟ್ಟಸ್ವಾಮಿ, ವಿದ್ಯಾನಗರದ ಪ್ರಾಣೇಶ ರೊಟ್ಟಿ, ಗೋಕುಲ ಠಾಣೆಯ ಮೋಹನ ಪ್ರಸಾದ, ಹುಬ್ಬಳ್ಳಿ ಟ್ರಾಫಿಕ್‌ನ ಶಿರಕೋಳ, ಧಾರವಾಡ ಸಬರ್‌ಮನ್‌ನ ರವಿನಾಯ್ಕ್, ಸಿಸಿಬಿಯ ಚಲುವಾದಿ, ಅಶೋಕ ನಗರದ ಗುರುದತ್ತ ಮತ್ತು ವಿದ್ಯಾಗಿರಿಯ ಗುರುಮತ್ತೂರ ಕಮೀಷನರ್ ಹಾಕಿರುವ 'ಟಾರ್ಗೆಟ್'ಅನ್ನು ರೀಚ್ ಮಾಡದೆ ಗೋಳಾಡುತ್ತಿದ್ದಾರೆ.



ಡಿಸಿಪಿ ಪ್ರತಾಪನ್

ಖಾಕಿ ಖದೀಮರು

ಅವಳಿನಗರದಲ್ಲಿ ಅಕ್ರಮ ದಂಧೆಗಳಿಗೆ ಟಾನಿಕ್ ನೀಡಿ ಬೆಳೆಸುತ್ತಿರುವ ಆಯುಕ್ತ ರಾಮಚಂದ್ರರಾವ್ ಕೆಲವು ಖಾಕಿ ಅಧಿಕಾರಿಗಳ ಸಂಬಂಧಿಕರಿಗೂ ದೋ ನಂಬರ್ ದಂಧೆಗಳನ್ನು ನಡೆಸಲು ಪರವಾನಗಿ ನೀಡಿದ್ದಾರೆ. ಡಿ.ಸಿ.ಪಿ. ಪ್ರತಾಪನ್‌ನ ಸೋದರ ಸಂಬಂಧಿ ಪರಶುರಾಮ ಕಾಳೆ ಎಂಬಾತನ ಇಸ್ಪೀಟ್ ಅಡ್ಡೆ ದಿನವೊಂದಕ್ಕೆ 20 ಲಕ್ಷ ಟರ್ನ್‌ಓವರ್ ಮಾಡುತ್ತಿದೆ. ಇನ್ನು ಪ್ರತಾಪನ್ ಸಾಹೇಬರ ಶಿಷ್ಯರಾದ ಹುಬ್ಬಳ್ಳಿ ಹೊಸೂರಿನ ಪ್ರಭು ಮತ್ತು ಶಿವು ಹಿರೆಕೆರೂರ ಬ್ರದರ್ಸ್ ನಡೆಸುವ ಇಸ್ಪೀಟ್ ಅಡ್ಡೆ ಒಂದು ದಿನವೂ ಬಂದಾಗಿರುವ ಇತಿಹಾಸವಿಲ್ಲ, ಹಿರೆಕೆರೂರು ಫ್ಯಾಮಿಲಿಯಲ್ಲಿ ಇತ್ತೀಚೆಗೆ ನಡೆದ ಅಪಹರಣ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಪ್ರತಾಪನ್ ಸಾಹೇಬರು ಕಂಡಕಂಡವರನ್ನು ತಂದು ಠಾಣೆಯಲ್ಲಿಟ್ಟು ಬಡಿಯುತ್ತಿದ್ದಾರೆ.



ತುಳಜಪ್ಪ

ಮೈಮೇಲೆ ಖಾಕಿ ತೊಟ್ಟಿದ್ದರೂ ಕೋಟಿ ಲೆಕ್ಕದಲ್ಲಿ ಸುಲಿದಿದ್ದ ಹುಬ್ಬಳ್ಳಿ ಸಂಚಾರಿ ಎ.ಸಿ.ಪಿ. ಎನ್.ಎಸ್. ಪಾಟೀಲನ ಮಗನೇ ನಕಲಿ ಮೊಬೈಲ್ ಬ್ಯಾಟರಿ ದಂಧೆಯ ದೊರೆ ಎಂಬುದು ನಾಲ್ಕು ತಿಂಗಳ ಹಿಂದೆ ಪತ್ತೆಯಾ... ತನ್ನ ಮಗನನ್ನು ಹಿಡಿದ ಪೊಲೀಸರು ಕೇಸ್ ಜಡಿಯ... ತಯಾರಿಯಲ್ಲಿದ್ದಾಗ ಸ್ವತಃ ಎನ್.ಎಸ್.ಪಾಟೀಲರೇ ಆ... ರಾಮಚಂದ್ರರಾವ್‌ನೊಂದಿಗೆ ಡೀಲ್ ಕುದುರಿಸಿಕೊ... ಒಂಭತ್ತು ಲಕ್ಷ ರೂಪಾಯಿ ಕೊಟ್ಟು, ಅವರ ... ಎರಗಿ ಬಂದಿದ್ದರ ಬಗ್ಗೆ ಅದೇ ಖಾಕಿ ವಲಯದಲ್ಲಿ ... ಗುಸು ಹಬ್ಬಿದೆ.

ಬಾಯ್ತೆರೆದಿರುವ ಬಿಂದಾಸ್ ದಂಧೆಗ...

ದಿನವೊಂದಕ್ಕೆ ಒಂದು ಕೋಟಿ ಕ್ಯಾಸ್ ಮಾ... ಮಟ್ಕಾ ದಂಧೆಯ ಪರಶುರಾಮ ಮೇತ್ರಿ... ಸಂಜೀವ ಕಲಾಲ, ಮಧುಸಾ ಮೇತ್ರಿ... ಕಾಳಮ್ಮನ ಅಗಸಿಯ ಖೋಡೆ ಬ್ರ... ಕೃಷ್ಣ ಕಾಟ್ವೆ, ವಿಷ್ಣು ಲದ್ವಾನಂತಹ... ಈಗ ಹೇಳುವವರು ಕೇಳುವ... ಇಲ್ಲದಂತಾಗಿದೆ. ಕ್ರಿಕೆಟ್ ಬುಕ್ಕಿಗ... ವೀರು ಕಟಾರೆ, ಶಂಭು, ಹಬೀಬ ಬ್ರ... ಸ್ಟೇಷನ್ ರೋಡಿನ ಇರಕಲ್, ಅಜ... ಶಿರಾಳಕರ್, ದೊಂದುಸಾ ಇರಕಲ್, ... ಪವಾರ, ಸಂತೋಷ ಬಾಕಳೆ, ಮ... ಓಣಿಯ ಸಂಜು, ಮಂಜು, ... ಮೆಹರ್ವಾಡೆ, ಗಂಗಾಧರ ಮಿ... ಸಂತೋಷ್ ದೇವಗನ್, ಹಳೆ ಹುಬ್ಬ... ಅಲ್ತಾಫ್ ಮತ್ತು ರಫೀಕ್ ಇಂದು ... ಲಕ್ಷಗಳಲ್ಲಿ ತೂಗುತ್ತಿದ್ದಾರೆ. ನಕಲಿ ... ಮತ್ತು ಸ್ಪಿರಿಟ್ ದಂಧೆಯ ಸಂಜೂ ಕಾ... ಗಿರಿ ಹಬಿಬ, ಸದಾನಂದ ಬದ್ಧಿ, ... ಕೋಡೆ, ಜಯರಾಮ ಪವಾರ, ಶ್ರೀ... ಬದ್ದಿ ಮತ್ತು ಕರೀಮ ಪೊಲೀಸರು ಹೇ... ಜಾಗಕ್ಕೆ ಮಾಮೂಲಿಯನ್ನು ಡಿಲೆ... ಮಾಡುತ್ತಿದ್ದಾರೆ.

ನಕಲಿ ಸೀಮೆಎಣ್ಣೆ ದಂಧೆಯಿ... ಗಿಯೇ ಕೋಟಿಯಲ್ಲಿ ತೂಗುತ್ತಿರುವ... ನಗರದ ಸಂಜ್ಯಾ, ಮಂಜ್ಯಾ ... ಧಾರವಾಡದ ಲಂಗಡಾ ಪವಾರನ ದ... ಸ್ವತಃ ಖಾಕಿಗಳೇ ಕಾವಲುಗಾರರಾಗಿ... ಅಕ್ರಮ ಅಕ್ಕಿ ಸಾಗಾಣಿಕೆಯಲ್ಲಿ ರ... ಬಾಛಾ ಮುನವಳ್ಳಿ ಮತ್ತು ಬತ್ತಿ ಫ್ಯಾ... ಗಳು ಪುರುಸೊತ್ತಿಲ್ಲದೆ ದುಡಿಯುತ್ತಿ... ಇದಲ್ಲದೆ ರೇಸ್ ಬೆಟ್ಟಿಂಗ್, ಹವಾ... ಮತ್ತು ಮೀಟರ್ ಬಡ್ಡಿಗಳಂತಹ ದಂಧ... ಯಾರ ಆತಂಕವಿಲ್ಲದೆ ಅವಳಿನಗರ... ಚಾಲ್ತಿಯಲ್ಲಿವೆ. ಅವಳಿನಗರಗಳ ... ಕಡೆ ಇತ್ತೀಚೆಗೆ ನಾಲ್ಕು ಹುಕ್ಕಾ ಬಾರು... ಹುಟ್ಟಿಕೊಂಡಿದ್ದು ಅಲ್ಲೆಲ್ಲ ಪ್ರತಿ ನಿತ್ಯ... ಮಾರೋ ದಮ್' ನಡೆಯುತ್ತಿದೆ.

ಇಲ್ಲಿ ಯಾರು ಯಾವ ದ... ಮಾಡುತ್ತಿದ್ದಾರೆ ಎಂಬುದು ಪೊಲೀಸ್ ರೆಕಾರ್ಡ್... ದಾಖಲಾಗಿದ್ದರೂ ಕಳೆದ ಒಂದೂವರೆ ವರ್ಷ... ಇವರ್‍ಯಾರನ್ನೂ ಯಾರಿಂದಲೂ ಮಾಡಕ್ಯಾಗಿಲ್ಲ, ಯಾಕೆ... ಇವರೆಲ್ಲಾ ದೋ ನಂಬರ್ ದಂಧೆಗಳ ಮೂಲಕ ... ದುಂಡಗಾಗಿದ್ದಲ್ಲದೇ ಆಯುಕ್ತ ರಾಮಚಂದ್ರರಾವ್‌... ದುಂಡಗಾಗಿಸುತ್ತಿದ್ದಾರೆ.


ಚೆಡ್ಡಿ ಶಾಸಕರು ಮತ್ತು ಮಂತ್ರಿಗಳು ತುಂಬಾ ಕ... ವಹಿಸಿ ತಂದು ಗುಡ್ಡೆಹಾಕಿಕೊಂಡಿರುವ ಈ ಖದಿ... ಖಾಕಿಗಳು ಸುಧಾರಿಸುವುದು ಅವಳಿನಗರದ ಜನ ಇವ... ವಿರುದ್ಧ ಬೀದಿಗಿಳಿದಾಗಲೇ ಅನ್ನಿಸುತ್ತೆ.

• ಹುರಳಿಕುಪ್ಪಿ ವಿನ...

ಡ್ರೈವರ್‌ಗಳ ವಸೂಲಿ ಟೀಂ


ಇನ್ಸ್‌ಪೆಕ್ಟರ್‌ಗಳು ಮೊದಲನೆ ದರ್ಜೆಯ ಲೂಟಿಯಲ್ಲಿ ತೊಡಗಿದ್ದರೆ ಪೊಲೀಸ್ ಇಲಾಖೆಯ ಡ್ರೈವರ್‌ಗಳು ಎರಡನೇ ದರ್ಜೆಯ ವಸೂಲಿಗೆ ನಿಂತಿದ್ದಾರೆ. ಹುಬ್ಬಳ್ಳಿ ಸೌತ್‌ನ ಎ.ಸಿ.ಪಿ. ದೇಸೂರ, ಸಂಚಾರಿ ಎ.ಸಿ.ಪಿ. ಎನ್.ಎಸ್.ಪಾಟೀಲ ಮತ್ತು ಸಂಚಾರಿ ವಿಭಾಗದ ಶಂಕರ ಮಾರಿಹಾಳ ನಿತ್ಯ ಎಷ್ಟು ವಸೂಲಿ ಮಾಡಿದರು ಎಂಬ ಮಾಹಿತಿಯನ್ನು ಡ್ರೈವರ್‌ಗಳ ಒಂದು ತಂಡವೇ ಆಯುಕ್ತರಿಗೆ ಮುಟ್ಟಿಸುತ್ತಿದೆ.

ಈ ಹಿಂದೆ ಆಯುಕ್ತರಾಗಿದ್ದ ಗಗನದೀಪ, ನಾರಾಯಣ ನಡುಮನಿ ಸೇರಿದಂತೆ ಹಲವರ ಬಳಿ ಗನ್‌ಮ್ಯಾನ್ ಆಗಿದ್ದುಕೊಂಡು ಅವರನ್ನು ದಾರಿ ತಪ್ಪಿಸಿದ್ದ ಮಾವಿನಕಾಯಿ ಎಂಬ ಊಸರವಳ್ಳಿ ಪೇದೆ ಈಗ ರಾಮಚಂದ್ರರಾವ್ ಬೆನ್ನಿಗೆ ನಿಂತಿದ್ದಾನೆ. ಈತ ಈ ಪೋಸ್ಟ್‌ಗೆ ಬಂದಿದ್ದೇ ತಡ, ತನ್ನ ಲೂಟಿಕೋರ ಪೇದೆ ಮಿತ್ರರನ್ನು ಆಯಕಟ್ಟಿನ ಜಾಗಕ್ಕೆ ತಂದು ಕೂರಿಸಿ ಅವರನ್ನೆಲ್ಲ ಸುಲಿಗೆ ಕೆಲಸಕ್ಕೆ ನಿಯುಕ್ತಿ ಮಾಡಿಸಿದ್ದಾನೆ.



ಶಂಕರ ಮರಿಹಾಳ್


ಇಲಾಖೆಯಿಂದ ಈಗನಿಗೆ ಕೊಟ್ಟಿರುವ ವಸತಿಗೃಹವನ್ನೇ ಬಾಡಿಗೆಗೆ ಬಿಟ್ಟಿರುವ ಖತರ್‌ನಾಕ್ ಮಾವಿನಕಾಯಿ ಸದ್ಯ ಸಿ.ಆರ್. ಪೇದೆಗಳಿಗೆ ಲೀಡರಾಗಿದ್ದಾನೆ. ಇವನೊಂದಿಗೆ ಕಮೀಷನರ್ ಅವರ ಡ್ರೈವರ್‌ಗಳಾದ ಎಂ.ಎಸ್.ಹೊಸಮನಿ, ಗಲಗಲಿ, ಎ.ಆರ್. ಭಂಡಾರಿ ಎಂಬುವವರು ಸೇರಿಕೊಂಡಿದ್ದಾರೆ. ಈ ಮೂವರೂ ಇಲ್ಲಿಯವರೆಗೆ ಕಮಾಯಿ ಮಾಡಿರುವುದೇ ಕೋಟಿ ಹತ್ತಿರ ಬಂದು ನಿಲ್ಲುತ್ತದೆ. ನವನಗರದಲ್ಲಿ ಐಶಾರಾಮಿ ಮನೆ ಹೊಂದಿರುವ ಗಲಗಲಿಗೆ ಬಡ್ಡಿ ಕುಳಗಳಿಂದ ಪ್ರತಿ ತಿಂಗಳು ಬರುವ ಕಮೀಷನ್ನೇ ಎರಡು ಲಕ್ಷ ಮೀರುತ್ತದೆ. ಇನ್ನು ಕಮೀಷನರ್ ಸ್ಕ್ವಾಡ್‌ನ ಪೇದೆಗಳಾದ ಎ.ಆರ್. ನದಾಫ, ಬಸು ಕೊರವರ, ದೇವರಾಜ ಜಂತಲಿ, ಮಂಜು ಗದ್ದಿಕೇರಿಯ ಟೀಮು ಪ್ರತಿನಿತ್ಯ ಮೂರು ಲಕ್ಷದವರೆಗೂ ಕಮೀಷನರ್ ಹೆಸರಲ್ಲಿ ವಸೂಲಿ ಮಾಡುತ್ತಿದೆ. ಅಷ್ಟೇ ಅಲ್ಲ, ಆಮದನಿ ತರುವ ಕೇಸಿನ ಫೈಲ್‌ಗಳನ್ನು ತಿಪ್ಪೆ ಸಾರಿಸುವುದಕ್ಕೂ ಇವರೇ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ.



ಎನ್.ಎಸ್. ಪಾಟೀಲ

ಡುಪಿ-ಚಿಕ್ಕಮಗಳೂರು ಉಪಚುನಾವಣೆ ಫಲಿತಾಂಶದ ಪಾಠವೇನು?

ಾವಳಿ ಮತ್ತು ಮಲೆನಾಡಿನ ಮಂದಿ ಉಪಚುನಾವಣೆ ಐತಿಹಾಸಿಕ ತೀರ್ಪು ನೀಡಿದ್ದಾರೆ. ಧರ್ಮಕಾರಣದ ಗೇಡಿಗಳನ್ನು ಮುಲಾಜಿಲ್ಲದೆ ುದ್ದಾರೆ. ಸೋತ ಬಿಜೆಪಿ ಮತ್ತು ್ ಪಕ್ಷಕಷ್ಟೇ ಅಲ್ಲ, ಗೆದ್ದ ಗೂ ಮತದಾರ ಒಂದೊಂದು ಕಲಿಸಿದ್ದಾನೆ.




ಡುಪಿ-ಚಿಕ್ಕಮಗಳೂರು ಹಿಂದೂತ್ವದ ಮುಖವಾಡದಡಿ ಾರ-ಅನಾಚಾರ- ಅವ್ಯವಹಾರ- ದದಲ್ಲಿ ಸ್ವಚ್ಛಂದವಾಗಿ ತೊಡಗಿಸಿ ಡುವ ಬಿಜೆಪಿ ಭಂಡರ ಕ್ಕಿ ಬುದ್ಧಿ ಹೇಳಿದ್ದಾರೆ; ಗೆದ್ದು ಮಾಡು ತ್ತಿರುವ ಕಾಂಗ್ರೆಸ್‌ನ ಾಟದ ಚಾಂಪಿಯನ್‌ಗಳಿಗೆ ಗಿರದಿದ್ದರೆ ಭರ್ಕತ್ತಾಗುವುದಿಲ್ಲ ಪಾಠ ಹೇಳಿದ್ದಾರೆ. ಹಾಗೆಯೇ ಜಾತ್ಯತೀತ ಮತ ಬೇಳೆ ಬೇಯಿಸಿಕೊಳ್ಳಲು ಹವಣಿಸಿದ್ದ ಘೋಷಿತ ಮಣ್ಣಿನ ಮಗ ಮತ್ತು ಮೊಮ್ಮಗನಿಗೂ ತಾಪತಿ ಮಾಡದಂತೆ ಎಚ್ಚರಿಸಿದ್ದಾರೆ. ಇದೆಲ್ಲಕ್ಕಿಂತ ಯಡ್ಡಿಗೆ-ನೀನು ಪ್ರಚಾರಕ್ಕೆ ಬಂದಿದ್ದರೂ ಬಿಜೆಪಿ ತವಾಗೋದನ್ನು ತಪ್ಪಿಸಲು ಲಿಲ್ಲ- ಎಂಬ ಸ್ಪಷ್ಟ ಸಂದೇಶ ಬೇರೆ ದ್ದಾರೆ.


ಗೆ ನೋಡಿದರೆ ಭಜರಂಗಿ ಕೊಳ್ಳಿ ಆಡಂಬೋಲದಂತಾಗಿರುವ ಉಡುಪಿ ಗಳೂರಿನಲ್ಲಿ ಧರ್ಮಾಂಧರಿಗಿಂತ ಮನೋಭಾವದವರೇ ಜಾಸ್ತಿಯಿ ಆದರೆ ಕಾಂಗ್ರೆಸ್‌ನ ಆಸ್ಕರ್, ಮೊಯ್ಲಿ, ಿ, ಸೊರಕೆ, ಸಾಲಿಯಾನ್‌ಗಳ ಿಂದ ಈ ಜಾತ್ಯತೀತ ಮತಗಳು ಕರಣವಾಗದೆ ಬಿಜೆಪಿ ಕಡಿಮೆ ಮತ ಗೆಲ್ಲುತ್ತಿತ್ತು. ಇದು ಸಂಘಪರಿವಾರದ ುತ್ತುದಾರರಾದ ಚೆಡ್ಡಿ ಡಾನ್ ಕಲ್ಲಡ್ಕ ಭಟ್ಟ, ಆಚಾರ್ಯ, ಕೊಡ್ಗಿ, ಸದಾನಂದ ಗೌಡರ 'ಅಲ್ಪ' ಮತದ ರಣಕ್ಕೆ ಅನುಕೂಲಕರವಾಗಿ ಪರಿಣಮಿಸುತ್ತಿತ್ತು ಕಳೆದ ಲ್ಕು ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಬಿಜೆಪಿ ಉಡುಪಿ ಚಿಕ್ಕಮಗಳೂರಲ್ಲಿ ಗೆದ್ದಿದ್ದೇ ಕಾಂಗ್ರೆಸ್ಸಿಗರ ಸ್ವಪಕ್ಷದ ೇಟ್ ಸೋಲಿಸುವ ಆತ್ಮಹತ್ಯಾತ್ಮಕ ರಾಜಕಾರಣ ತ್ತು!

ದರೆ ಈ ಬಾರಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ರ್ಲಿಮೆಂಟ್ ಕ್ಷೇತ್ರದ 'ದೊಡ್ಡ' ನಾಯಕ ಆಸ್ಕರ್ ಕರೆದು ಸ್ಥಳೀಯವಾಗಿ ಹೆಪ್ಪುಗಟ್ಟಿದ್ದ ಗುಂಪುಗಾರಿಕೆ ನಸ್ಸೆಲ್ಲ ಪರಿಹರಿಸಿ ಪಾರ್ಟಿ ಅಭ್ಯರ್ಥಿ ಗೆಲ್ಲಿಸಿಕೊಂಡು ತೆ ತಾಕೀತು ಮಾಡಿ ಕಳಿಸಿದ್ದರು. ಈ ಆಸ್ಕರ್‌ನ ತೆ-ಉದಾಸೀನತೆ-ಎಲ್ಲ ತರದ ತರಲೆ ಲೀಡರ್‌ಗಳನ್ನು ಸಿಕೊಂಡು ಹೋಗಲಾಗದ ಅಸಾಮರ್ಥ್ಯ ಸೋನಿಯಾ ಕ್ಕೆ ನಿಸ್ಸಂಶಯವಾಗಿ ಸಾಬೀತಾಗಿತ್ತು, ಆಸ್ಕರ್ ಒಬ್ಬೇ ದ್ಧೆ-ನಿಯತ್ತಿನಿಂದ ಕೆಲಸ ಮಾಡಿದ್ದಿದ್ದರೆ ಕಾಂಗ್ರೆಸ್ ಗಿ ಮೂರ್‍ನಾಲ್ಕು ಬಾರಿ ಇಲ್ಲಿ ಸೋಲುವ ಪ್ರಮೇ ಬರುತ್ತಿರಲಿಲ್ಲ. ಬಿಜೆಪಿ ಇವತ್ತು ಉಡುಪಿ ಗಳೂರಲ್ಲಿ ಕೊಬ್ಬಿದ್ದರೆ ಅದಕ್ಕೆ ಆಸ್ಕರ್‌ನ ಹೇತ್ಲಾಂಡಿ ತನವೇ ಕಾರಣ. ದಿಲ್ಲಿಯಲ್ಲಿ ಪದ್ಮಪ್ರಿಯಾ ಭಟ್ ನಿಗೂಢವಾಗಿ ಸತ್ತಾಗ ಆಸ್ಕರ್ ಒಂಚೂರು ಪಕ್ಷ ನಿಷ್ಠೆಯಿಂದ ಕೆಲಸ ಮಾಡಿದಿದ್ದರೆ ಇಡೀ ಪ್ರಕರಣವೇ ಬೇರೆ ಥರವಾಗುತ್ತಿತ್ತು, ಪಾಪಿ ಭಟ್ಟ ಹೆಂಡತಿಯ ಹೆಣವನ್ನು ನಿರಾತಂಕವಾಗಿ ಉಡುಪಿಗೆ ತರಲು ಸಹಕರಿಸಿದ್ದೇ ಆಸ್ಕರ್ ಆಗಿತ್ತು. ಇದು ಕಾಂಗ್ರೆಸ್‌ನ್ನು ಘಾಸಿಗೊಳಿಸಿ ಬಿಜೆಪಿ ಭೂತಗಳನ್ನು ಕೊಬ್ಬಿಸಿಬಿಟ್ಟಿತ್ತು.

ಇದೆಲ್ಲ ಗೊತ್ತಾಗಿಯೇ ಇರಬೇಕು. ದಿಲ್ಲಿ ಕಾಂಗ್ರೆಸ್ ದರ್ಬಾರು ಆಸ್ಕರ್‌ಗೆ ಇಡೀ ಉಪಚುನಾವಣೆಯ ಉಸ್ತುವಾರಿ ವಹಿಸಿ ಪಾರ್ಟಿ ಕ್ಯಾಂಡಿಡೇಟನ್ನು ಗೆಲ್ಲಿಸಿಕೊಂಡು ಬರಲು ಕಟ್ಟಪ್ಪಣೆ ಮಾಡಿತ್ತು. ಹಾಗೆಯೇ ಪೂಜಾರಿ, ಮೊಯ್ಲಿ, ಎಸ್.ಎಂ. ಕೃಷ್ಣ, ಬಿ.ಎಲ್. ಶಂಕರ್, ಸೊರಕೆ, ಮೋಟಮ್ಮ, ತಾರಾದೇವಿಗಳಿಗೂ ಕ್ಯಾತೆ ತೆಗೆಯದಂತೆ ಎಚ್ಚರಿಕೆ ಕೊಟ್ಟಿತ್ತು. ಆಸ್ಕರ್ ಹಗಲಿರುಳೂ ಕ್ಷೇತ್ರದಲ್ಲಿಯೇ ಠಿಕಾಣಿ ಹೂಡಿ ಮಿನಿ ಮಾಂಡಲೀಕರಲ್ಲಿದ್ದ ದ್ವೇಷಾಸೂಯೆ ಹೋಗಲಾಡಿಸಿ, ಅಲ್ಲಲ್ಲಿ ತೇಪೆ ಹಾಕುವ ಕೆಲಸ ಮಾಡಿದ್ದರು. ಪಾರ್ಟಿ ಫಂಡೂ ಸಖತ್ತಾಗಿ










ಒಟ್ಟುಗೂಡಿಸಿದ್ದರು. ಎಂಟೂ ಅಸೆಂಬ್ಲಿ ಕ್ಷೇತ್ರಗಳನ್ನು ನಿಭಾಯಿಸಲು ಒಬ್ಬೊಬ್ಬ ಲೀಡರ್‌ನನ್ನು ನೇಮಿಸಿದ್ದರು. ಎಲ್ಲಿಯಾದರೂ ಅಪಸ್ವರ ಕೇಳಿದರೆ ಅಲ್ಲಿಗೆ ಹೋಗಿ ಪ್ಯಾಚ್‌ಅಪ್ ಮಾಡುತ್ತಿದ್ದರು ಆಸ್ಕರ್.

ಇದಕ್ಕೆ ಸಮಾನಾಂತರವಾಗಿ ಎಸ್.ಎಂ. ಕೃಷ್ಣ ಮೊಯ್ಲಿ ಪೂಜಾರಿ, ಸೊರಕೆ, ಸಾಲಿಯಾನ, ವಗೈರೆಗಳು ತಮ್ಮ ವೈಯಕ್ತಿಕ ಈರ್ಷ್ಯೆ ಮರೆತು ಅಪರೂಪದ ಒಗ್ಗಟ್ಟು ಮೂಡಿಸಿಕೊಂಡಿದ್ದರು. ಇದಕ್ಕೆ ಕ್ಯಾಂಡಿಡೇಟ್ ಜಯಪ್ರಕಾಶ್ ಹೆಗ್ಡೆಯ 'ಫ್ಲೆಕ್ಸಿಬಿಲಿಟಿ'ಯೂ ಪೂರಕವಾಗಿತ್ತು, ಹೀಗಾಗಿ ಕಾಂಗ್ರೆಸ್‌ನ ಕ್ಯಾಂಪೇನಿಂಗ್ ಈ ಬಾರಿ ಸಂಘಟನಾತ್ಮಕ ವಾಗಿತ್ತು, ಇದು ಕಾಂಗ್ರೆಸ್‌ನ ಗೆಲುವಿಗೆ ಪ್ರಮುಖ ಕಾರಣ. ಅದೇರೀತಿ ಕಾಂಗ್ರೆಸ್‌ಗೆ ಈ ಬಾರಿ ಪ್ಲಸ್ ಪಾಯಿಂಟ್ ಆಗಿದ್ದು ಕೆಲಸಗಾರ-ಸಂಸದೀಯ ಪಟು, ಜಾತ್ಯತೀತ ಧೋರಣೆಯ ಜೆಪಿಯ ಜನಾನುರಾಗಿ ವ್ಯಕ್ತಿತ್ವ. ಬಿಜೆಪಿ ಅಭ್ಯರ್ಥಿ ಸುನಿಲ್‌ಕುಮಾರ್ ಎಂಬ ಉಂಡಾಡಿ ಗುಂಡನಿಗಿಂತ ಅನುಭವಿ ಜೆಪಿ ಬೆಟರ್ ಎಂಬ ಭಾವನೆ ಚುನಾವಣೆ ಪ್ರಚಾರದ ಆರಂಭದ ದಿನದಿಂದಲೂ ಜನಮಾನಸದಲ್ಲಿ ಮೂಡಿತ್ತು, ಇದು ಬಿಜೆಪಿಗೆ ಆರಂಭದಲ್ಲೇ ಅಪಶಕುನದಂತೆ ಕಾಡಿತ್ತು.

ಸಿಎಂ ಸದಾನಂದ ಗೌಡ ಈ ಕ್ಷೇತ್ರದಲ್ಲಿ ಎಂಪಿಯಾಗಿ ಗೆದ್ದ ಮತದಂತರದ ದುಪ್ಪಟ್ಟು ಮತದಿಂದ ಈಗ ಬಿಜೆಪಿ ಸೋತಿದೆ. ಅಂದರೆ ಕಾಂಗ್ರೆಸ್ ಪಾರ್ಟಿಯದು ಪ್ರಚಂಡ ವಿಜಯ! ಇದಕ್ಕೇನು ಕಾರಣ ಗೊತ್ತಾ?



ಆರಂಭದಿಂದಲೂ ಬಿಜೆಪಿ ಅನೇಕ ಮೈನಸ್ ಅಂಶಗಳ ನಡುವೆ ಸಿಕ್ಕಿಬಿದ್ದು ಹೈರಾಣಾಗಿ ಹೋಗಿತ್ತು! ಯಡ್ಡಿಯಿಂದ ಹಿಡಿದು ನರ್ಸ್ ರೇಣುಕಾಚಾರ್ಯನ ತನಕ, ಪಾಲೇಮಾರ್‌ನಿಂದ ನಿರಾಣಿ ವರೆಗೆ, ಸವದಿಯಿಂದ ಶೋಭಾ ತನಕದ ಬಿಜೆಪಿಯ ಮುಂಚೂಣಿಯ ಮಹಾನು ಮಹಿಮರ ಹಗಲು ಹಾದರ, ಕಂಡದ್ದೆಲ್ಲ ನುಂಗುವ ಹಪಾಹಪಿ, ಆಡಳಿತದಲ್ಲಿನ ಅಧ್ವಾನ, ಪ್ರಜಾಪೀಡನೆ, ವೇದಾಂತ ಹೇಳುತ್ತಲೇ "....." ಯಲ್ಲಿ ಗಾಳ ಹಾಕುವ ಬುರ್ನಾಸ್ ಬುದ್ಧಿಯಿಂದ ಜನರು ರೋಸತ್ತುಹೋಗಿದ್ದರು. ಕರಾವಳಿ-ಮಲೆನಾಡಿನ ಜನರಿಗಂತೂ ಬಿಜೆಪಿ-ಭಜರಂಗಿಗಳ ಹಿಂದೂ ಹೆಣ್ಣಿನ ಮಾನ, ಗೋಪ್ರಾಣ, ಚರ್ಚ್-ಪಬ್ ಮೇಲಿನ ದಾಳಿ, ಮತಾಂಧ ಹಿಕಮತ್ತುಗಳಿಂದ ಆತಂಕ-ಭಯ ದಿನದಿನವೂ ಜಾಸ್ತಿಯಾಗುತ್ತಿತ್ತು, ಬಿಜೆಪಿಯ ಪುಂಡರಿಗೆ ಅಂಕುಶ ಇಡದಿದ್ದರೆ ಬದುಕು ಬರ್ಬಾದ್ ಆಗುತ್ತದೆಂಬುದು ಖಾತ್ರಿಯಾಗಿ ಹೋಗಿತ್ತು. ಈ 'ಪ್ರಜ್ಞೆ'ಯೇ ಇವತ್ತು ಬಿಜೆಪಿಯನ್ನು ಕರಾವಳಿ-ಮಲೆನಾಡಲ್ಲಿ ಮಣ್ಣು ಪಾಲಾಗಿಸಿದೆ! ದತ್ತ ಅವಧೂತನ ಕೃಪೆಯಿದು!!

ಶಾಸಕರಾದ ಸಿ.ಟಿ. ರವಿ, ರಘುಪತಿ ಭಟ್ಟ, ಹಾಲಾಡಿ ಶ್ರೀನಿವಾಸ್ ಶೆಟ್ಟಿ, ಆಚಾರ್ಯ, ಕೊಡಿಗಿಯಂಥವರ ಪೋಲಿ-ಪುಂಡಾಟದಿಂದ ಬಿಜೆಪಿಗೆ ಸಾಕಷ್ಟು ಡ್ಯಾಮೇಜ್ ಆಗಿತ್ತು, ಬ್ರಾಹ್ಮಣಿಕೆ ಆಟ, ಉಡುಪಿ ಮಠಾಧೀಶರು ಸಾರ್ವಜನಿಕರ ದಾರಿಗೇ ಬೇಲಿ ಹಾಕುವ ದಾದಾಗಿರಿಯಿಂದ ಬಿಜೆಪಿ ಎಂದರೆ ಜನ ಅವಡುಗಚ್ಚುವಂತಾಗಿತ್ತು, ಇದೆಲ್ಲದರ ಪರಿಣಾಮವಾಗಿ ಕಾಂಗ್ರೆಸ್ ಅಲೆ ಎದ್ದಿತ್ತು. ಜೆಡಿಎಸ್ ಲೀಡರ್‌ಗಳಾದ ಅಪ್ಪ-ಮಕ್ಕಳು ಬಿಜೆಪಿ ಗೆಲ್ಲಿಸಿ ಯಡ್ಡಿ ಪಳಗಿಸಲು ಮಾಡಿದ ಮಸಲತ್ತೂ ಜನರಿಗೆ ಸ್ಪಷ್ಟವಾಗಿ ಅರ್ಥವಾಗಿತ್ತು, 'ಪತ್ರಿಕೆ' ಸಮೀಕ್ಷಾ ವರದಿಗಳಲ್ಲಿ ಬರೆದಂತೆ ಸೋಲುವ ಬೋಜೇಗೌಡನಿಗೆ ಓಟು ಹಾಕಿದರೆ ಬಿಜೆಪಿಗೆ ಲಾಭ. ತನ್ಮೂಲಕ ಯಡ್ಡಿ-ಈಶ್ವರಿ-ಸದಾನಂದನಂತಹ ಬಾಯಿ ಬಡುಕರಿಗೆ, ಅವರ ಅನುಯಾಯಿಗಳಾದ ಖತರ್‌ನಾಕ್ ರವಿ, ಭಟ್ಟ, ಜೀವರಾಜ್, ಸುನೀಲ್‌ಗಳ ಮೇಯ್ದಾಟ, ದಾದಾಗಿರಿಗೆ ಮತ್ತಷ್ಟು ಅನುಕೂಲವಾಗುತ್ತದೆಂಬ ದೂರಾಲೋಚನೆ ಮತದಾರ ಮಾಡಿದ್ದ. ಜೆಡಿಎಸ್‌ನ ಕುಮಾರ ಸ್ವಾಮಿಯ ಪರೋಕ್ಷವಾಗಿ ಸಿಎಂ ಸದಾ ಮೇಲೆ ನಿಯಂತ್ರಣ ಸಾಧಿಸುವ ಸೆಕ್ಯುಲರ್ ಮುಖವಾಡ 'ಕೋಜಾ' ಕಿತಾಪತಿ ಜನರಿಗೆ ಅರ್ಥವಾಗಿತ್ತು. ಹೀಗಾಗಿ ಜೆಡಿಎಸ್ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಬಿಜೆಪಿ ಗೆಲ್ಲಿಸಲಾಗಲಿಲ್ಲ. ಆದರೆ ಜೆಡಿಎಸ್ ಪಡೆದಿರುವ 72,080 ರಷ್ಟು ಮತಗಳು ಮುಂದಿನ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಆ ಪಾರ್ಟಿಗೆ ಬುನಾದಿ ಆದೀತು ಅಷ್ಟೇ!

ಗಲೀಜು ಬಿಜೆಪಿ ಬಗ್ಗೆ ಜನರಲ್ಲಿ ಅದೆಷ್ಟು ಅಸಹ್ಯ ಮೂಡಿಸಿದೆ ಎಂಬುದನ್ನು ಅಷ್ಟೂ ಅಸೆಂಬ್ಲಿ ಸೆಗ್ಮೆಂಟ್‌ಗಳಲ್ಲಿ ಆ ಪಾರ್ಟಿ ಅನುಭವಿಸಿದ ಹೀನಾಯ ಹಿನ್ನಡೆಯೇ ತೋರಿಸುವಂತಿದೆ. ಕಾರ್ಕಳ ಬಿಜೆಪಿ ಅಭ್ಯರ್ಥಿ ಸುನೀಲ್‌ಕುಮಾರ್‌ನ ತವರೂರು. ಅಲ್ಲಿಂದಾತ ಒಮ್ಮೆ ಶಾಸಕನೂ ಆಗಿದ್ದ. ಅಂದು ತಾನು ಸ್ಥಳೀಯ ಬಹುಸಂಖ್ಯಾತ ಬಿಲ್ಲವರ ಕುಲತಿಲಕನೆಂದು ಬೋಂಗು ಬಿಟ್ಟು ಜನರನ್ನು ದಿಕ್ಕುತಪ್ಪಿಸಿ ಗೆದ್ದಿದ್ದ. ಆದರೆ ಈ ಅರೆಬಿಲ್ಲವ, ಬ್ರಾಹ್ಮಣಿಕೆ ಸಂಸ್ಕಾರದ ಪ್ರಳಯಾಂತಕನೆಂಬುದು ಜನರಿಗೆ ಕೆಲವೇ ದಿನದಲ್ಲಿ ಅರ್ಥವಾಗಿತ್ತು. ಅಂದು ಆತನ ಬಗ್ಗೆ ಜನರಲ್ಲಿ ಹುಟ್ಟಿದ ಅಪನಂಬಿಕೆ ಇವತ್ತಿಗೂ ಕ್ಷೇತ್ರದಲ್ಲಿದೆ. ಹೀಗಾಗಿ ಆತ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ. ಈ ಬಾರಿಯೂ ಆತನಿಂದ ಕ್ಷೇತ್ರದ ಬಿಲ್ಲವರ ಮನ ಗೆಲ್ಲಲಾಗಲಿಲ್ಲ. ಚಿಕ್ಕಮಗಳೂರಲ್ಲಿ ಜೆಡಿಎಸ್ ಕಾಂಗ್ರೆಸ್‌ನ ಒಂದಷ್ಟು ಮತ ಕಸಿದಿರುವುದರಿಂದ ಬಿಜೆಪಿಗಿಲ್ಲಿ 2122 ಮತದಂತರ ಸಿಕ್ಕಿದೆ. ಉಳಿದೆಲ್ಲೆಡೆ ಕಾಂಗ್ರೆಸ್‌ನ ಜೆಪಿಗೇ ಹೆಚ್ಚು ಓಟು ಬಂದಿದೆ. ಮತ ಎಣಿಕೆಗೂ ಮೊದಲೇ ಬಿಜೆಪಿಗರಿಗೆ ಸೋಲು ಖಾತ್ರಿಯಾಗಿತ್ತು, ಹಾಗಾಗಿ ಅಭ್ಯರ್ಥಿ ಸುನೀಲ್ ಮತ ಎಣಿಕೆ ಕೇಂದ್ರದತ್ತ ತಲೆ ಹಾಕಲೇ ಇಲ್ಲ.

ಈ ಚುನಾವಣಾ ಫಲಿತಾಂಶದಿಂದ ಒಂದಂತೂ ಖಾತ್ರಿಯಾಗಿದೆ. ಜನಿವಾರದ ಬಿಗಿ ಬಂಧನದಲ್ಲಿದ್ದ ಕರಾವಳಿ-ಮಲೆನಾಡಿನ ಶೂದ್ರರು ನಿಧಾನಕ್ಕೆ ಮುಕ್ತಿ ಹೊಂದುತ್ತಿದ್ದಾರೆ. ಬಿಜೆಪಿ ಭೂಪರ ಅಸಲೀ ಅವತಾರ ಹಿಂದೂತ್ವದ ಅಮಲೇರಿಸಿಕೊಂಡಿದ್ದ ಅಬ್ರಾಹ್ಮಣರಿಗೆ ಅರ್ಥವಾಗುತ್ತಿದೆ. ಹೀಗಾಗಿ ಕಾಂಗ್ರೆಸ್ ಗೆದ್ದಿದೆ; ಜನದ್ರೋಹಿ ಬಿಜೆಪಿ ಸೋತಿದೆ. ಬಿಜೆಪಿಯ ಭ್ರಷ್ಟಾಚಾರ-ಅನಾಚಾರ- ಅನೈತಿಕ ಆಟದ ವಿರುದ್ಧ ನೀಡಿದ ತೀರ್ಪಿದು. ಕೋಮುವಾದಕ್ಕೆ ಹಾಕಿದ ದೊಡ್ಡ ಧ್ವನಿಯ ಧಿಕ್ಕಾರವಿದು! ಇದೆಲ್ಲ ಬಿಜೆಪಿಗಿಂತ ವಿಜಯೋತ್ಸವದಲ್ಲಿ ಮೈಮರೆಯು ತ್ತಿರುವ ಕಾಂಗ್ರೆಸ್ ಕಿಂಗ್‌ಗಳಿಗೆ ಅರ್ಥವಾಗಬೇಕಿದೆ. ಗೆದ್ದು ಗದ್ದಲ ಮಾಡುತ್ತಿರುವ ಕಾಂಗ್ರೆಸ್ ಮಂದಿಗೆ ಮುಂದಿದೆ ಮಾರಿ ಹಬ್ಬ (ಅಸೆಂಬ್ಲಿ ಇಲೆಕ್ಷನ್) ಎಂಬ ಎಚ್ಚರ ಇರಲಿ. ಒಟ್ಟಿನಲ್ಲಿ ಬಿಜೆಪಿ ಸೋಲು 'ಹಿಂದೂತ್ವ ಹಿಂಸೆ'ಯಿಂದ ಹೈರಾಣಾಗಿದ್ದ ಕರಾವಳಿಗರ-ಮಲೆನಾಡಿಗರ ದಿಗ್ವಿಜಯ; ಬಿಜೆಪಿಯ ಮುಖಂಡರ ದುರಾಡಳಿತ-ದುಷ್ಟತನ-ಕಚ್ಚೆ ಹರುಕತನದಿಂದ ಅವಮಾನಿತರಾಗಿದ್ದ ಜನರ ಸಾತ್ವಿಕ ಸಿಟ್ಟಿನ ಸಂಕೇತ!

• ನಹುಷ

ಂಸದ ಜೆಪಿ ಮಾಡಬೇಕಾದ ಕೆಲಸಗಳು!

ಕ್ರೆಟ್ (ಬಿಜೆಪಿ) ಕಿಲ್ಲರ್ ಜಯಪ್ರಕಾಶ್ ಹೆಗ್ಡೆ ತನ್ನನ್ನು ನಂಬಿ ಗೆಲ್ಲಿಸಿದ ಋಣ ತೀರಿಸಲು ತಕ್ಷಣ ಕಾರ್ಯ ಪ್ರವೃತ್ತರಾಗಬೇಕಾಗಿದೆ. ಕೆಲಸಕ್ಕೆ ಹುಚ್ಚು ವಿಜಯೋತ್ಸವ, ಅಭಿನಂದನಾ ಸಮಾರಂಭಗಳಿಂದ ಕೂಡಲೆ ಬರಬೇಕಿದೆ. ಭಟ್ಟಂಗಿಗಳು ಮತ್ತು ಅಪರೂಪಕ್ಕೆ ಗೆದ್ದಿರುವ ಕಾಂಗ್ರೆಸ್‌ನ ನಾಯಕರಾದ ಆಸ್ಕರ್, ಮೊಯ್ಲಿ, ಕೃಷ್ಣ ಮುಂತಾದವರು ತಮಗೆ ತಾರೀಫು ಮಾಡಿಕೊಳ್ಳುವ ಸಭೆ-ಸಮಾರಂಭ ನಿಲ್ಲಿಸಿ ಜೆಪಿಗೆ ಜನಪರ ಮಾಡಲು ಬಿಡಬೇಕಿದೆ. ಜೆಪಿ ವಿಜಯೋತ್ಸವದಿಂದ ಎಷ್ಟು ಬೇಗ ಬರುತ್ತಾರೋ ಅಷ್ಟು ಅವರಿಗೂ ಮತ್ತವರ ಕಾಂಗ್ರೆಸ್ ಪಾರ್ಟಿಗೂ ಕರ! ಸಂಸದ ಹೆಗ್ಡೆ ಎರಡೂ ಜಿಲ್ಲೆಗಳ ಸಮಸ್ಯೆಗಳತ್ತ ಬಹುಬೇಗ ಹರಿಸುವಂತಾಗಲಿ......

ಜೆಪಿ ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಗಮನಹರಿಸಬೇಕಿದೆ. ಜನಸಾಮಾನ್ಯರಿಗೆ ನಿತ್ಯ ಕಿರುಕುಳ ಕೊಡುವ ಸರ್ಕಾರಿ ಕಚೇರಿಗಳಲ್ಲಿನ ಲಂಚಾವತಾರ, ಹಕ್ಕುಪತ್ರ, ಪಡಿತರ ಚೀಟಿ, ಪಿಂಚಣಿ ಸಮಸ್ಯೆ, ಕರಾವಳಿಯ ಬೆಸ್ತರ ಬೇಗುದಿ, ಮಲೆನಾಡಿನ ಅಡಿಕೆ-ಕಾಫಿ ಬೆಳೆಗಾರರ ಸಂಕಟ, ಹುಲಿ ಸಂರಕ್ಷಣಾ ಯೋಜನೆ ಎಂಬ ಆದಿವಾಸಿಗಳ ಸತಾಯಿಸುವ ಪ್ರಾಜೆಕ್ಟ್‌ಗಳ ಬಗ್ಗೆ ಜೆಪಿ ದೂರಗಾಮಿ ಪರಿಣಾಮ ಕಂಡುಹಿಡಿಯಲು ಈಗಿಂದಲೇ ಪ್ರಯತ್ನ ಪ್ರಾರಂಭಿಸಬೇಕಾಗಿದೆ.


* ಮಣಿಪಾಲದ ಬಂಡವಾಳಶಾಹಿ ಪೈಗಳ ದೊಡ್ಡಸ್ತಿಕೆ ತೋರಿಸಲು ಅರ್ಥಾತ್ ಜನಸಾಮಾನ್ಯರನ್ನು ಗೋಳು ಹೊಯ್ದುಕೊಳ್ಳಲೆಂದೇ ಪುರೋಹಿತಶಾಹಿ ಆಡಳಿತಗಾರ ದಿವಂಗತ ವಿ.ಎಸ್. ಆಚಾರ್ಯ ಉಡುಪಿ ಜಿಲ್ಲಾಧಿಕಾರಿ ಕಚೇರಿಯನ್ನು ಮಣಿಪಾಲದ ಎಂಡ್ ಪಾಯಿಂಟ್‌ನಲ್ಲಿ ಸ್ಥಾಪಿಸಿದ್ದರು. ಈಗದನ್ನು ಸುಲಭವಾಗಿ ಜನಸಾಮಾನ್ಯರ ಕೈಗೆ ಎಟುಕುವಂತೆ ಉಡುಪಿ ನಗರಕ್ಕೆ ಸ್ಥಳಾಂತರಿಸಲು ಜೆಪಿ ಮುಂದಾಗಬೇಕು. ಈ ವೈಭವದ ಡಿಸಿ ಆಫೀಸು ಆಚಾರ್ಯರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕಿಡುವ 'ಪುಣ್ಯ' ಕೆಲಸಕ್ಕಷ್ಟೇ ಬಳಕೆಯಾಗಿತ್ತೇ ವಿನಃ ಜನಸಾಮಾನ್ಯರಿಗೆ ಇದರಿಂದ ಪ್ರಯೋಜನ ಏನಾಗಿಲ್ಲ.
* ಉಡುಪಿಯ ಚಟದಾರ ಶಾಸಕ ರಘುಪತಿ ಭಟ್ಟನ ಧರ್ಮಪತ್ನಿ ಪದ್ಮಪ್ರಿಯಾ ಸಾವಿನ ಪ್ರಕರಣ ಮುಚ್ಚಿಹೋಗಲು ರಾಜ್ಯ ಬಿಜೆಪಿ ಸರ್ಕಾರವಷ್ಟೇ ಕಾರಣವಲ್ಲ; ಕೇಂದ್ರದ ಯುಪಿಎ (ಕಾಂಗ್ರೆಸ್) ಸರ್ಕಾರವೂ ಅಷ್ಟೇ ಹೊಣೆ. ಆಸ್ಕರ್‌ನಂಥ ಕಾಂಗ್ರೆಸ್ ನಾಯಕರು ಅಂದು ಭಟ್ಟನಿಗೆ ಹೆಲ್ಪ್ ಮಾಡದಿದ್ದರೆ ಭಟ್ಟ ದಿಲ್ಲಿ ಪೊಲೀಸರ ಪಾಲಾಗುವುದು ಗ್ಯಾರಂಟಿಯಾಗಿತ್ತು. ಚುನಾವಣೆ ಹೊತ್ತಲ್ಲಿ ಕಾಂಗ್ರೆಸ್ ಲೀಡರ್‌ಗಳು ಬೀದಿ-ಬೀದಿಯಲ್ಲಿ ಈ ಪದ್ಮಪ್ರಿಯಾ ನಿಗೂಢ ಸಾವಿನ ಕತೆ ಎತ್ತಿಯಾಡಿದ್ದಾರೆ. ಈ ಕಾರಣಕ್ಕಾದರೂ ಸಂಸದ ಜೆಪಿ ಸದ್ರಿ ಪ್ರಕರಣವನ್ನು ಸಿಬಿಐ ತನಿಖೆಗೆ ಕೊಡಿಸಲು ಪ್ರಯತ್ನಿಸಬೇಕು.
* ಪಡುಬಿದ್ರಿಯ ನಂದಿಕೂರಲ್ಲಿ ಬಿಜೆಪಿ ಲೀಡರ್‌ಗಳ ಒತ್ತಾಸೆಯಿಂದ ಸ್ಥಾಪನೆಗೊಂಡಿರುವ ಕಲ್ಲಿದ್ದಲು ವಿದ್ಯುತ್ ಸ್ಥಾವರ ಸುತ್ತಲಿನ ಜನರ ಬದುಕನ್ನು ನರಕ ಮಾಡಿಬಿಟ್ಟಿದೆ. ಈ ಪ್ರಳಯಾಂತಕ ಯೋಜನೆ ಬಂದ್ ಮಾಡಿಸುವ ಧೈರ್ಯವನ್ನು ಜೆಪಿ ಜರೂರಾಗಿ ತೋರಿಸಬೇಕಿದೆ. ಇದಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಾಗಬೇಕಾದ ಕೆಲಸವನ್ನು ಸಂಸದ ಜೆಪಿ ಪ್ರಾಮಾಣಿಕವಾಗಿ ಮಾಡಲಿ ಎಂಬುದು ಯೋಜನಾ ಬಾಧಿತರ ನಿರೀಕ್ಷೆ. ಈ ಸಮಸ್ಯೆ ಬರೀ ಕರಾವಳಿಯ ಬೆಸ್ತರ, ರೈತರದಷ್ಟೇ ಅಲ್ಲ, ಇಡೀ ಪಶ್ಚಿಮ ಘಟ್ಟಕ್ಕೆ ನೇಣು ಹಾಕುವ ಪರಿಸರ ಸಮಸ್ಯೆಯಿದು!
* ದಶಕಗಳಿಂದ ಕೋಟಿ-ಕೋಟಿ ನುಂಗುತ್ತಿರುವ ಕುಂದಾಪುರದ ವಾರಾಹಿ ನೀರಾವರಿ ಯೋಜನೆಯ ಲೂಟಿಯತ್ತ ಸಂಸದ ಜೆಪಿ ಕಣ್ಣು ಹಾಯಿಸಬೇಕಿದೆ. ಈ ಯೋಜನೆಯಿಂದ ರೈತರಿಗೇನೂ ಪ್ರಯೋಜನವಿಲ್ಲ. ಕಳ್ಳ ಕಂಟ್ರಾಕ್ಟರ್-ಅಧಿಕಾರಿ-ರಾಜಕಾರಣಿಗಳ ತಿಜೋರಿ ತುಂಬುವ ಯೋಜನೆ ಇದು. ಈ ಯೋಜನೆಯನ್ನು ಮುಂದುವರಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಈ ಯೋಜನಾ ಪ್ರದೇಶದಲ್ಲೀಗ ಕೃಷಿ ಗದ್ದೆಗಳೇ ಇಲ್ಲ, ರೈತರು ಕೃಷಿ ಮಾಡೋದನ್ನು ನಿಲ್ಲಿಸಿ ಅದ್ಯಾವುದೋ ಕಾಲವಾಗಿದೆ. ಆದರೆ ಯೋಜನೆ ಮಾತ್ರ ಕುಂಟುತ್ತ ಸಾಗಿದೆ. ಈ ಕೋಟಿ ಲೂಟಿ ಯೋಜನೆಯನ್ನು ಸ್ಥಗಿತ ಮಾಡಿಸಿ, ಈಗಾಗಲೇ ಈ ಯೋಜನೆಯಿಂದ ಕಳ್ಳ ಕುಬೇರರಾದವರ ವಿರುದ್ಧ ತನಿಖೆ ಮಾಡಿಸುವ ಕರ್ತವ್ಯಪ್ರಜ್ಞೆ ಜೆಪಿಗೆ ಬರಲಿ.

ಇತ್ತ ಎಂಪಿ ಜೆಪಿ ಗಮನ ಹರಿಸುವರಾ? ಹಾಗಂತ ಉಡುಪಿ-ಚಿಕ್ಕಮಗಳೂರಿನ ಜನ ಕೇಳುತ್ತಿದ್ದಾರೆ.

ಕಳ್ಳತನಕ್ಕೆ ಬೆಂಬಲ ನೀಡುವುದು ಎಷ್ಟು ಸರಿ?

ದಿನಾಂಕ 28.3.2012 ರ ಪತ್ರಿಕೆಯಲ್ಲಿ ನನ್ನ ಕುರಿತು ಬಷೀರ್ ಬರೆದ ಲೇಖನವನ್ನು ಓದಿದೆ. ಈ ಕುರಿತು ನನ್ನ ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ನನ್ನ ಅನುಮತಿ ಇಲ್ಲದೆ ನನ್ನ ಕತೆಯನ್ನು ಕದ್ದು ಸಿನಿಮಾ ಮಾಡಿದ್ದಾನೆಂದು ತಿಳಿದಾಗ ಬಷೀರ್‌ಗೆ ಖುಷಿಯಾಗಿತ್ತಂತೆ! "ಇಂತಹ ಕಳವುಗಳು ವ್ಯಾಪಕವಾಗಿ ನಡೆಯಬೇಕಾಗಿದೆ. ಲೇಖಕರು ಅದಕ್ಕೆ ಅನುಮತಿ ನೀಡದಿದ್ದರೆ ಅದನ್ನು ಕದಿಯಬೇಕು. ಒಂದು ಸಮುದಾಯಕ್ಕೆ ಲಾಭವಾಗುವುದಾದರೆ ಇಂತಹ ಅನ್ಯಾಯಗಳನ್ನು ಸಹಿಸಿಕೊಳ್ಳಬೇಕು" ಎಂದು ಬಷೀರ್ ಬ್ಯಾರಿ ಸಮುದಾಯಕ್ಕೆ ಕರೆ ಕೊಟ್ಟಿದ್ದಾರೆ. ಓರ್ವ ಪತ್ರಕರ್ತ, ಸಮಾಜಕ್ಕೆ ಮಾರ್ಗದರ್ಶನ ನೀಡಬೇಕಾದವರು ಸಮುದಾಯಕ್ಕೆ ಕಳ್ಳತನ ಮಾಡಲು, ಮತ್ತೊಬ್ಬರ ವಸ್ತುವನ್ನು ಅಪಹರಿಸಿ ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳಲು, ಮತ್ತೊಬ್ಬರನ್ನು ವಂಚಿಸಲು ರಾಜಾರೋಷವಾಗಿ ಪತ್ರಿಕೆಯ ಮುಖಾಂತರ ಕರೆ ಕೊಡುವುದಾದರೆ ಈ ಕರೆ ಈ ಸಮುದಾಯ ತಲುಪಿದ ನೈತಿಕ ಅಧಃಪತನವನ್ನು ಸೂಚಿಸುತ್ತದೆ.



ಇಸ್ಲಾಂ ಧರ್ಮದ ಪ್ರವಾದಿಗಳು ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯನ್ನು ಬೋಧಿಸಿದ್ದಾರೆಯೇ ಹೊರತು ಕಳ್ಳತನ ಮತ್ತು ವಂಚನೆಯನ್ನಲ್ಲ. ಇಸ್ಲಾಂ ಧರ್ಮ ನಿಷೇಧಿಸಿದ ಏಳು ಮಹಾಪಾಪಗಳಲ್ಲಿ ವಿಧವೆಯರು ಮತ್ತು ಅನಾಥಮಕ್ಕಳ ಸ್ವತ್ತುಗಳ ಅಪಹರಣವೂ ಒಂದು. ನಾನು ಓರ್ವ ವಿಧವೆ. ನನ್ನ ಅತ್ಯುತ್ತಮ ಸಾಹಿತ್ಯ ಕೃತಿಯೊಂದನ್ನು ಈ ರೀತಿ ಕದ್ದು ಅದು ತನ್ನದೇ ಕೃತಿಯೆಂದು ಪ್ರಚಾರ ಮಾಡಿ ನನ್ನನ್ನು ವಂಚಿಸಿ ಲಾಭ ಪಡೆಯುವುದು ಧರ್ಮ ಸಮ್ಮತವಾಗುತ್ತದೆಯೇ? ಬಷೀರ್‌ನಂತಹವರಿಗೆ ಧರ್ಮಸಮ್ಮತವಾಗಬೇಕಾಗಿಯೂ ಇಲ್ಲ, ಬಿಡಿ. ಇಸ್ಲಾಂ ಸಮಾಜ ಇಂತಹ ಕಳ್ಳತನ, ಮೋಸ, ವಂಚನೆ ಮಾಡಿ ಸುಧಾರಣೆಯಾಗಬೇಕಾದ ಅಗತ್ಯವಿದೆಯೇ? ಅಂದರೆ ಈ ಸಮಾಜ ಈ ರೀತಿ ವಂಚಕರ ಸಮೂಹವಾಗಿಯೇ ಬೆಳೆಯಲಿ ಎಂಬುದು ಬಷೀರ್‌ರ ಆಶಯವೇ? ಕಳ್ಳತನ ಮತ್ತು ಮೋಸವನ್ನು ಈ ರೀತಿ ಪ್ರೋತ್ಸಾಹಿಸುವುದು ಸಂವಿಧಾನಬಾಹಿರ ಅಥವಾ ನಿಯಮಬಾಹಿರ ಕ್ರಮವಾಗುವುದಿಲ್ಲವೇ? ಇವರ ಕುರಿತು ನನಗೆ ನಾಚಿಕೆ ಮಾತ್ರವಲ್ಲ ಜಿಗುಪ್ಸೆಯುಂಟಾಗುತ್ತಿದೆ.

ಸಮುದಾಯದ ಹೆಣ್ಣುಮಕ್ಕಳ ಕಣ್ಣೀರಿನ ಕುರಿತು ಬಷೀರ್ ಬರೆದಿದ್ದಾರೆ. ನಾನು ಈ ಕಾದಂಬರಿ ಬರೆದ ಬಳಿಕ ಒಂದು ಸಭೆಯಲ್ಲಿ ಬಾನು ಮುಷ್ತಾಕ್ ಕೂಡಾ ಒಂದು ದಿನದ ಮದುವೆಯನ್ನು ಸಮರ್ಥಿಸುತ್ತಾ 'ಅದು ಆಕೆಯ ಮಾಜಿ ಗಂಡನಿಗೆ ಶಿಕ್ಷೆ!' ಎಂದು ಆ ಪದ್ಧತಿಯನ್ನು ಸಮರ್ಥಿಸಿದ್ದಾರೆ. ಆಗ ಅವರು ಮೂಲಭೂತವಾದಿ ಸಂಘಟನೆಯ ಪ್ರಭಾವದಿಂದ ಹಾಗಂದಿರಬಹುದು. ಇದು ಇಪ್ಪತ್ತು ವರ್ಷಗಳ ಹಿಂದಿನ ವಿಷಯ. ಆದರೆ ಸುಮಾರು ಒಂದು ವರ್ಷದ ಹಿಂದೆ ದಿನಾಂಕ 25.10.2010 ರಂದು ಮಂಗಳೂರಿನಲ್ಲಿ ನಡೆದ ಬ್ಯಾರಿ ಮಹಿಳಾ ಸಮ್ಮೇಳನದಲ್ಲಿ ಜಮಾತೆ ಇಸ್ಲಾಮಿ ಸಂಘಟನೆಯ ಮಹಿಳೆ ವೇದಿಕೆಯಲ್ಲಿ 'ಧರ್ಮದ ಈ ನಿಯಮದಲ್ಲಿ ತಪ್ಪೇನೂ ಇಲ್ಲ, ಅದು ಆ ಗಂಡನಿಗೆ ಶಿಕ್ಷೆ' ಎಂದು ಮಹಿಳೆಯರನ್ನು ತೀರಾ ಅವಮಾನಿಸುವ ಈ ಪದ್ಧತಿಯನ್ನು ವೇದಿಕೆಯಲ್ಲಿ ಸಮರ್ಥಿಸಿಕೊಂಡಳು! ಓರ್ವ ಹೆಣ್ಣನ್ನು ಒಂದು ರಾತ್ರಿಗೆ ವೇಶ್ಯೆಯಂತಾಗಿಸುವ ಈ ಪದ್ಧತಿ ಹೆಣ್ಣಿನ ಮೇಲೆಸಗಲಾಗುತ್ತಿರುವ ದೌರ್ಜನ್ಯವೆಂದೂ, ಹೆಣ್ಣಿಗೆ ಮಾಡುತ್ತಿರುವ ಅನ್ಯಾಯವೆಂದೋ, ಅವಮಾನವೆಂದೊ, ಅದನ್ನು ವಿರೋಧಿಸಬೇಕೆಂದೊ ಈ ಸಮಾಜದ ಓರ್ವ ಹೆಣ್ಣಿಗೆ ಕೂಡಾ ಅನ್ನಿಸುವುದಿಲ್ಲವಲ್ಲ? ಈ ರೀತಿಯ ಇನ್ನಷ್ಟು ವಿವರಗಳನ್ನು ನನ್ನ ಆತ್ಮಚರಿತೆ 'ಹೊತ್ತು ಕಂತುವ ಮುನ್ನ' ಎಂಬ ಕೃತಿಯಲ್ಲಿ (ಪುಟ 117) ವಿವರವಾಗಿ ಬರೆದಿದ್ದೇನೆ. ಆ ಮಹಿಳೆ ಬಹಳ ಸಂತೋಷದಿಂದ ನಗುನಗುತ್ತಾ ವೇದಿಕೆಯಲ್ಲಿ ಈ ರೀತಿ ಭಾಷಣ ಮಾಡಿದ್ದಾಳೆ. ಎದುರಿಗೆ ನಾನು ಮತ್ತು ಬಾನು ಮುಷ್ತಾಕ್ ಕುಳಿತುಕೊಂಡಿದ್ದೆವು. (ನನಗೆ ಅಂಚೆಯಲ್ಲಿ ಆಮಂತ್ರಣ ಪತ್ರಿಕೆ ಬಂದಿತ್ತು. ಈ ನಾಟಕ ನೋಡುವುದಕ್ಕಾಗಿಯೇ ನಾನು ಅಲ್ಲಿ ಕುಳಿತಿದ್ದೆ!) ಬಷೀರ್ ಹೇಳಿದಂತಹ, ಸಮುದಾಯದ ಹೆಣ್ಣುಮಕ್ಕಳ ಕಣ್ಣೀರು ಎಲ್ಲಿದೆ? ಮೂಲಭೂತವಾದಿಗಳು ಹೆಣ್ಣುಮಕ್ಕಳ ಮೆದುಳನ್ನು ಈ ರೀತಿ ತೊಳೆದಿಟ್ಟಿದ್ದಾರೆ!

ಬ್ಯಾರಿ ಅಕಾಡೆಮಿಯ ಕುರಿತು ಬಷೀರ್ ಬರೆದಿದ್ದಾರೆ. ಬ್ಯಾರಿ ಅಕಾಡೆಮಿ ಸ್ಥಾಪನೆಗೆ ಮೊದಲು ಅನ್ವರ್ ಮಾಣಿಪ್ಪಾಡಿ ನನ್ನ ಮನೆಗೆ ಬಂದು ಅಕಾಡೆಮಿಯ ಅಧ್ಯಕ್ಷೆಯಾಗಲು ನನ್ನನ್ನು ಒತ್ತಾಯಿಸಿದ್ದರು. ಓಡಾಡಲು ಕಾರು ಕೂಡಾ ಸಿಗುತ್ತದೆ ಎಂದು ಹೇಳಿದ್ದರು. ಈ ಮನುಷ್ಯನೊಡನೆ ಏಗಲು ನನ್ನಿಂದ ಸಾಧ್ಯವಿಲ್ಲವೆಂದು ಹೇಳಿ ಫಕೀರ್ ಮುಹಮ್ಮದ್ ಕಟಪಾಡಿಯವರ ಹೆಸರು ಸೂಚಿಸಿ ಪತ್ರಿಕೆಗೂ ಬರೆದಿದ್ದೆ. ಲಂಕೇಶ್ ಪತ್ರಿಕೆ ಅದನ್ನು ಪ್ರಕಟಿಸಿಯೂ ಇತ್ತು, ಆಮೇಲೇನಾಯಿತೆಂಬುದು ಈಗ ಇತಿಹಾಸವಾಗಿದೆ.

ಬ್ಯಾರಿ ಸಮ್ಮೇಳನದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ನನ್ನನ್ನು ಕೇಳಿಕೊಂಡರು. ನಾನು ಒಪ್ಪಿಕೊಂಡೂ ಇದ್ದೆ. ಅದಕ್ಕೆ ಹೋಗಬಾರದೆಂದು ನನ್ನ ಮಗ ಹೇಳಿಯೂ ಇರಲಿಲ್ಲ, ಹೋಗಬಾರದೆಂಬುದು ನನ್ನದೇ ತೀರ್ಮಾನವಾಗಿತ್ತು, ಅದಕ್ಕೆ ಕಾರಣವೂ ಇದೆ.



ಬ್ಯಾರಿ ಸಮ್ಮೇಳನದ ಕೆಲವು ದಿನಗಳ ಹಿಂದೆ ನನ್ನ ಬಳಿಗೆ ಬಂದಿದ್ದ ಮುಸ್ಲಿಮೇತರ ಮಹಿಳೆಯೋರ್ವರು ತಮ್ಮ ಒಂದು ಅನುಭವವನ್ನು ಹೇಳುತ್ತಾ ಕಣ್ಣೀರು ತುಂಬಿಕೊಂಡರು. ಬ್ಯಾರಿ ಅಕಾಡೆಮಿ ಸ್ಥಾಪನೆಯ ಕೆಲವು ತಿಂಗಳುಗಳೊ ವರ್ಷವೊ ಹಿಂದೆ ಮಂಗಳೂರಿನ ಪುರಭವನದಲ್ಲಿ ಬ್ಯಾರಿ ಕಾರ್ಯಕ್ರಮವೊಂದು ನಡೆದಿತ್ತು. ಇಂತಹ ಕಾರ್ಯಕ್ರಮಗಳಿಗೆ ಮುಸ್ಲಿಮೇತರ ಮಹಿಳೆಯರನ್ನೂ ವೇದಿಕೆಗೆ ಕರೆಯುತ್ತಿದ್ದರು. ಆ ದಿನ ಭಾಷಣ ಮಾಡಲು ಕರೆದಿದ್ದ ಆ ಹಿಂದೂ ಮಹಿಳೆಯ ಮನೆಗೆ ಈ ಹಿರಿಯ ಮುಸ್ಲಿಮರು ಹೋಗಿ, "ನೀವು ನಾಳೆಯ ಕಾರ್ಯಕ್ರಮದಲ್ಲಿ ತಲಾಖ್‌ನ ಕುರಿತಾಗಲಿ, ಬುರ್ಖಾದ ಕುರಿತಾಗಲಿ ಮಾತನಾಡಬಾರದು. ಇಸ್ಲಾಮಿನ ಇಂತಹ ಧಾರ್ಮಿಕ ನಿಯಮಗಳು ಹಿಂದೂಗಳ ನಿಯಮಗಳಿಗಿಂತ ಬಹಳ ಒಳ್ಳೆಯದು. ಹಿಂದೂಗಳಂತೆ ವಿಚ್ಛೇದನಕ್ಕೆ ವರ್ಷಗಟ್ಟಲೆ ಕಾಯಬೇಕಾಗಿಲ್ಲ. ಬುರ್ಖಾ ಹೆಂಗಸರ ದೇಹವನ್ನು ಸಮನಾಗಿ ಮರೆ ಮಾಡುತ್ತದೆ. ಬುರ್ಖಾ ಹಾಕದವರನ್ನು ನೋಡಿದರೆ ಪುರುಷರಿಗೆ ಉದ್ರೇಕವುಂಟಾಗುತ್ತದೆ. ಹೆಂಗಸರ ತಲೆಗೂದಲು ಕಂಡರೂ ನಮಗೆ ಕಾಮೋದ್ರೇಕವಾಗುತ್ತದೆ!......" ಎಂದು ಆಕೆಯ ಮನೆಯಲ್ಲಿ ಕುಳಿತು ಒಂದು ಗಂಟೆ ಭಾಷಣ ಮಾಡಿದರಂತೆ.

"ಆ ರಾತ್ರಿ ನಾನು ನಿದ್ರಿಸಲೇ ಇಲ್ಲ, ಭಾಷಣಕ್ಕೆ ಹೋಗಲು ಒಪ್ಪಿಕೊಂಡದ್ದ... ನಾನು ಅಲ್ಲಿಗೆ ಹೋಗಿದ್ದೆ" ಎಂದರು. ಈ ವಿಷಯ ತಿಳಿದ ಬಳಿಕ ನ... ಬ್ಯಾರಿ ಸಮ್ಮೇಳನದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದೆನ್ನಿಸಲಿಲ್ಲ, ಹೀ... ನಾನು ಈ ಕಾರ್ಯಕ್ರಮಕ್ಕೆ ಬರುವುದಿಲ್ಲವೆಂದ. ನನಗೆ ಬಹಳ ಒತ್ತಡ... ಎಂದಷ್ಟೇ ಹೇಳಿದ್ದೆ. ಈ ವಿಷಯವನ್ನು ಏನೆಂದು ವಿವರಿಸಲಿ? ಓರ್ವ... ಕಾರ್ಯಕ್ರಮಕ್ಕೆ ವೇದಿಕೆಗೆ ಕರೆದು, "ನಾವು ಹೇಳಿದಂತೆ ಭಾಷಣ ಮಾಡಬೇ... ನಿನಗಿಷ್ಟವಾದಂತೆ ಮಾತನಾಡಬಾರದು" ಎಂದು ಭಾಷಣಗಾರರ ಮೇ... ನಿರ್ಬಂಧ ಹೇರುವುದು ಯಾವ ನಿಯಮ; ಯಾವ ಸಂಸ್ಕೃತಿ? ಇದನ್ನು ... ನನಗೆ ಇವರ ಮೇಲೆ ಜಿಗುಪ್ಸೆಯುಂಟಾಯಿತು. ಮಹಿಳೆಯರ ಕು... ಇಷ್ಟು ಕೀಳುಮಟ್ಟದಲ್ಲಿ ಚಿಂತಿಸುವವರ ನಡುವೆ ನಾನು ಹೋಗಿ ಕುಳಿತುಕೊಳ್ಳ... ಆ ಬಳಿಕ ಬ್ಯಾರಿ ಅಕಾಡೆಮಿ ಸ್ಥಾಪನೆಯಾದಾಗ ಈ ಮನುಷ್ಯ ... ಸದಸ್ಯನಾಗಿ ಮೇಲ್ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದ್ದನು!

'ಒಬ್ಬ ಮುಸ್ಲಿಮನಿಗೆ ಅಕಾಡೆಮಿಯ ಡಿಟಿಪಿ ಕೆಲಸ ಕೊಡಲಿಲ್ಲ' ಎಂ... ನಾನು ಹೇಳಿದೆನೆಂಬುದು ಬಷೀರ್‌ಗೆ ಬಹಳ ಮುಜುಗರ ಮತ್ತು ನಾಚಿ... ಕಾರಣವಾಗಿದೆಯಂತೆ. ಅಕಾಡೆಮಿ ದೊರೆಯುವವರೆಗೆ ಬ್ಯಾರಿ ಸಾಹಿ... ಟೈಪ್ ಸೆಟ್ಟಿಂಗ್ ನನ್ನ ಮಗನೇ ಮಾಡಿ ಕೊಡುತ್ತಿದ್ದನು. ನನ್ನ ಮಗನನ್ನು ಜನರು ಮೇಲೆ ಹೋಗಲು ಏಣಿಯಂತೆ ಬಳಸಿಕೊಂಡರು ಎಂಬು... ಸುಳ್ಳಲ್ಲವಲ್ಲ? ಅಕಾಡೆಮಿ ದೊರೆತೊಡನೆ ಅವನನ್ನು ದೂರ ಮಾಡಿದ್ದು ... ಕೆಲವು ಕೆಲಸಗಳನ್ನು ಅವನಿಗೂ ಕೊಡಬಹುದಾಗಿತ್ತು. ಕೊಟೇಶನ್ ... ಕೊಂಡೊಯ್ದು ಅದನ್ನು ತೆರೆದು ನೋಡಿ ತಮಗೆ ಬೇಕಾದವರಿಗೆ ... ಕೊಡುವುದು ನನ್ನ ಗಂಡ ಎಕ್ಸಿಕ್ಯೂಟಿವ್ ಇಂಜಿನಿಯರ್‌ರಾಗಿದ್ದಾಗ... ನಡೆಯುತ್ತಿದ್ದು ಅವರು ಅದನ್ನು ತೀವ್ರವಾಗಿ ವಿರೋಧಿಸುತ್ತಿದ್ದು ಎಲ್ಲ... ನನಗೆ ಗೊತ್ತಿದೆ. ಆ ವಿಷಯಗಳಲ್ಲಿ ಬೇಕಾದಷ್ಟು ಅನುಭವವಿದೆ. ಈ ಹಿ... ತುಳು ಅಕಾಡೆಮಿಯವರೊಬ್ಬರು ಹೀಗೆಯೇ ಮಾಡಿದ್ದಾರೆ. ನನ್ನ ಮಗ... ಈಗ ಇವರ ಯಾರ ಕೆಲಸವೂ ಬೇಕಾಗಿಲ್ಲ.


ಕಳೆದ ಕೆಲವು ವರ್ಷಗಳಿಂದ ಮುಸ್ಲಿಂ ಕತೆಯ ಸಿನಿಮಾಗಳಿಗೆ ಪ್ರ... ದೊರೆಯುತ್ತಿದೆ. ವೈದೇಹಿಯವರ 'ಗುಲಾಬಿ ಟಾಕೀಸ್' ಎಂಬ ಕತೆಯ... ಮುಸ್ಲಿಂ ಪಾತ್ರ ಒಂದೂ ಇರಲಿಲ್ಲ, ಅದು ಮುಸ್ಲಿಂ ಕತೆಯ... ಆಗಿರಲಿಲ್ಲ, ಆದರೆ ಸಿನಿಮಾ ಆದಾಗ ಅದು ಮುಸ್ಲಿಂ ಕತೆಯ... ರೂಪಾಂತರಗೊಂಡಿತ್ತು, ಅದಕ್ಕೆ ವೈದೇಹಿಯವರ ಅನುಮತಿಯ... ಇತ್ತು, ಕೇರಳದಲ್ಲಿ ಕೆಲವು ಉತ್ತಮ ಮುಸ್ಲಿಂ ಕತೆಗಳ ಸಿನಿಮಾ... ಬಂದಿವೆ; ಅವುಗಳಿಗೆ ಪ್ರಶಸ್ತಿಗಳೂ ಬಂದಿವೆ. 'ಪಾಠಂ... ಒರು ವಿಲಾಪಂ' 'ದೈವ ನಾಮತ್ತಿಲ್' 'ಪೆರು ಮಳಕ್ಕಾ... 'ಆದಮಿಂಡೆ ಮೆಗನ್ ಅಬು', 'ಕುಟ್ಟಿ ಸ್ರಾಂಗ್'..... ಹೀಗೆ ಪ... ಬೆಳೆಯುತ್ತದೆ. ಇಂತಹ ಕತೆಗಳನ್ನು ಬರೆದವರೆಲ್ಲರೂ ಮುಸ್ಲಿಮ... ಆಗಿದ್ದಾರೆ. ಆದರೆ ಅವರ ಕತೆಗಳನ್ನು ಯಾರೂ ಕದ್ದು ಸಿನಿ... ಮಾಡಿಲ್ಲ, ಅವರ ಅನುಮತಿ ಪಡೆದು ಅವರಿಗೆ ಸಮ... ಸಂಭಾವನೆ ನೀಡಿ ಅವರನ್ನೂ ಒಳಗೊಂಡು, ಅವರ ಸಲಹೆ ಪಡೆದು ಸಿನಿ... ಮಾಡಿದ್ದಾರೆ. ಬ್ಯಾರಿ ಭಾಷೆಯಲ್ಲಿ ಮೊತ್ತ ಮೊದಲ ಸಿನಿಮಾ ತಯಾರಿಸಿ... ಸಾಕಷ್ಟು ಸಬ್ಸಿಡಿ ದೊರೆಯುತ್ತದೆ ಎಂಬುದು ಮಲಯಾಳಿ ನಿರ್ದೇ... ಸುವೀರನ್‌ಗೆ ಗೊತ್ತು. ಹೀಗಾಗಿಯೇ ಈ ನಿರ್ಮಾಪಕ, ನಿರ್ದೇಶಕರಿಬ್ಬ... ಸೇರಿಕೊಂಡು ನನ್ನ ಕತೆಯನ್ನು ಕದ್ದರಷ್ಟೇ ಹೊರತು ಮುಸ್ಲಿಂ ಸಮ... ಸುಧಾರಣೆಯಾಗಲಿ ಎಂಬ ಆಶಯದಿಂದ ಈ ಸಿನಿಮಾ ತಯಾರಿಸಿ... ಕೊನೆಯ ದೃಶ್ಯವಂತೂ ಹೆಣ್ಣಿಗೆ ತೀರಾ ಅವಮಾನಕರವಾಗಿ ಚಿತ್ರಿತವಾ... ಮುಸ್ಲಿಂ ಹೆಣ್ಣಾದ ನನ್ನನ್ನು ಹೇಗೆ ಬೇಕಾದರೂ ವಂಚಿಸಬಹುದು ಎ... ತೀರ್ಮಾನ ಇವರದಾಗಿತ್ತು, ಅದಕ್ಕೆ ಸಮನಾಗಿ ಈಗ ಬಷೀರ್ ಇಂತಹವ... ಉತ್ತಮ ಮಾರ್ಗದರ್ಶನ ನೀಡಿದ್ದಾರೆ!

• ಸಾರಾ ಅಬೂಬಕ್ಕ...


ಒಂದು ಅಪರೂಪದ ಫೋಟೋ




1987ರಲ್ಲಿ ತೆರೆಕಂಡ ಶಂಕರ್‌ನಾಗ್ ನಿರ್ದೇಶನದ 'ಒಂದು ಮುತ್ತಿನ ಕತೆ' ಸಿನಿಮಾ ಶೂಟಿಂಗ್ ಸಂದರ್ಭದಲ್ಲಿ ತೆಗೆದ ಫೋಟೋ ಇದು. ಇಲ್ಲಿ ನಿಂತಿರುವವರು ಡಾ.ರಾಜ್, ಶಂಕರ್‌ನಾಗ್‌ರ ಕೈಲಿ ಆಡುತ್ತಿರುವ ಪುಟ್ಟ ಬಾಲೆ ಅವರ ಮಗಳು ಕಾವ್ಯ.



ಕನ್ನಡ ರಂಗಭೂಮಿಯಲ್ಲಿ ಮಾಂಟೋನ ಮಿಸ್ಟೇಕ್



ಕಳೆದ ಮಾರ್ಚ್ 11ರಂದು 'ಲಂಕೇಶ್ 77' ಕಾರ್ಯಕ್ರಮದ ಭಾಗವಾಗಿ ಆಯೋಜಿಸಲಾಗಿದ್ದ ಸಾದತ್ ಹಸನ್ ಮಾಂಟೋನ 'ಮಿಸ್ಟೇಕ್' ನಾಟಕದ ವಿಮರ್ಶೆ.



• ಇಸ್ಮತ್ ಫಜೀರ್

ಮಿಮಗೆ ನನ್ನ ಕತೆಗಳು ಹೊಲಸು ಎನಿಸಿದರೆ ಅದು ತೆಗಳ ತಪ್ಪಲ್ಲ, ಅದು ಈ ವ್ಯವಸ್ಥೆಯ ತಪ್ಪು, ನೀವು ಹಿತ್ಯವನ್ನು ವಿರೋಧಿಸುವ ನೈತಿಕತೆ ಪಡೆದುಕೊಳ್ಳ ದರೆ, ಈ ವ್ಯವಸ್ಥೆಯ ಹೊಲಸನ್ನು ಮೊದಲು ಸಿ" - ಇದು ಜಗತ್ತು ಕಂಡ ಅತ್ಯಂತ ಶ್ರೇಷ್ಠ ಕತೆಗಾರರಲ್ಲೊಬ್ಬರಾದ (ಉರ್ದು) ಸಾದತ್ ಹಸನ್ ಟೋನ ವಿಷಾದಮಯ ನುಡಿಗಳು.

ಮಾಂಟೋನ ಹೆಚ್ಚಿನ ಕತೆಗಳು ದೇಶವಿಭಜನೆಯ ಕರಾಳ ಮತ್ತು ಅಮಾನವೀಯ ಘಟನೆಗಳನ್ನಾಧರಿತ ವಾಗಿದೆ. ಮಾನವ ಸ್ವಭಾವವನ್ನು ಅತ್ಯಂತ ಸೂಕ್ಷ್ಮವಾಗಿ ಸ್ಪಷ್ಟವಾಗಿ ಅರ್ಥೈಸಿದ ಕತೆಗಾರರಲ್ಲಿ ಮಾಂಟೋ ಒ.

ಮಾಂಟೋನ ಕತೆಯನ್ನಾಧರಿಸಿದ ಮೊದಲ ಕನ್ನಡ 'ತೋಬಾತೇಕ್ ಸಿಂಗ್'ನ್ನು ಸುಮಾರು ನಾಲ್ಕು ಗಳ ಹಿಂದೆ ಬೆಂಗಳೂರಿನ ರಂಗ ತಂಡವೊಂದು ಪ್ರದರ್ಶಿಸಿತ್ತು. ಆ ಬಳಿಕ ಬಂದಿರುವುದೇ ಟೋನ ಹಲವು ಕತೆಗಳನ್ನಾಧರಿಸಿರುವ 'ಮಿಸ್ಟೇಕ್' . ಶಿರಸಿಯ ಡಾ. ಶ್ರೀಪಾದ್ ಭಟ್ ನಿರ್ದೇಶನದಲ್ಲಿ ಸಿಯ 'ರಥ ಬೀದಿ ಗೆಳೆಯರು' ಅಭಿನಯಿಸಿದ ಕ್' ನಾಟಕದ 12ನೇ ರಂಗಪ್ರಯೋಗ ಇತ್ತೀಚೆಗೆ ಶ್-77' ಕಾರ್ಯಕ್ರಮದ ಭಾಗ ಮಂಗಳೂರಿನ ಸಂತ ಶಿಯಸ್ ಕಾಲೇಜು ಗಣದಲ್ಲಿ ನಡೆಯಿತು.


ಮಿಸ್ಟೇಕ್' ಎಂಬುದು ಟೋನ ಕೇವಲ ನಾಲ್ಕು ಗಳ ಕತೆಯೊಂದರ ಶೀರ್ಷಿಕೆ. 'ಮಿಸ್ಟೇಕ್' ನಾಟಕವನ್ನು ಭಜನೆಯ ಕಾಲದಲ್ಲಿ ಘಟಿಸಿದ ದಾರು ಘಟನೆಗಳಿಂದ ನಾಲ್ಕು ಗಳನ್ನು (ಮಾಂಟೋನ ಒಟ್ಟು ಕತೆಗಳನ್ನು) ಹೆಣೆದು ಸಲಾಗಿತ್ತು. ಆ ನಾಲ್ಕು ಕತೆಗಳು ಕ್', 'ಖೋಲ್‌ದೋ' (ಓಪನ್ ು), 'ಶರೀಫನ್' ಮತ್ತು 'ಅಲ್‌ವಿದಾ' ಯು).

ಮಿಸ್ಟೇಕ್ ಕತೆ ಇಂತಿದೆ: "ಹೊಟ್ಟೆಯನ್ನು ಸಿಗಿದ ಸೀಳಿಕೊಂಡು ಕಿಬ್ಬೊಟ್ಟೆಯನ್ನೂ ದಾಟಿ ಪೈಜಾಮದ ಯನ್ನು ಕತ್ತರಿಸಿ ಕೊಲೆಗೀಡಾದ ನತದೃಷ್ಟನ ಜನನಾಂಗ ಹೊರಹಾಕಿತು. ಅಯ್ಯೋ! ಎಂಥಾ ಮಿಸ್ಟೇಕಾಯಿತು! ನನ್ನೇ ಕೊಂದುಬಿಟ್ಟೆನಲ್ಲಾ ಎಂದು ಕೊಲೆಗಡುಕ ರುಬಿಟ್ಟ".

ರಂಗದ ಮೇಲೆ ಕೊಲೆಗಡುಕ ಪಾತ್ರಧಾರಿಯ ನಟನೆ ತವಾಗಿತ್ತು, ರಂಗಪ್ರಯೋಗದ ಕ್ಲಿಷ್ಟತೆಯನ್ನು ಕರಿಸಲು ನಿರ್ದೇಶಕ ರೂಪಿಸಿದ ತಂತ್ರ ಗಮನ ಯುವಂತಿತ್ತು, ರಂಗದಲ್ಲಿ ಚಾಕುವಿಗೆ ಬದಲಾಗಿ ಕಬ್ಬಿಣದ ಯನ್ನು ಬಳಸಿ ಕೊಲೆ ಮಾಡಲಾಗುತ್ತದೆ. ಪ್ರೇಕ್ಷಕರಿಗೆ ಕ್" ಯಾವುದೆಂದು ತೋರಿಸುವ ಸಲುವಾಗಿ ಗಡುಕ ಪಾತ್ರಧಾರಿ ಕೊಲೆಯಾಗಲ್ಪಟ್ಟ ವ್ಯಕ್ತಿ ಕುಸಿದು ಕ್ಷಣ ಶಿಷ್ಯ ಸಲಾಕೆಯಿಂದ ಕೊಲೆಯಾಗಲ್ಪಟ್ಟವನ ಯನ್ನು ಎತ್ತಿ ಆತನ ಜನನಾಂಗ ನೋಡಿ ಹತಾಶ ಯಿಂದ "ಮಿಸ್ಟೇಕಾಯಿತು" ಎಂದು ಅರಚುತ್ತಾನೆ.

ರಂಗದಲ್ಲಿ ಎದ್ದು ಕಾಣುವ ತಪ್ಪು ಅದು ನಿಜಕ್ಕೂ ಟೋನ ಆಶಯಕ್ಕೆ ವಿರುದ್ಧವಾಗಿರುವುದು. ಮಾಂಟೋ ಕತೆಯಲ್ಲಿ ಕೊಲೆಗಾರ ಮತ್ತು ಕೊಲೆಗೀಡಾಗುವವನ ದ ಧರ್ಮಸೂಚಕ್ಕಿಂತಲೂ ಅದನ್ನು ಓರ್ವ ಮನುಷ್ಯನ ದೆಯಿಂದ ಮಾತ್ರ ವಿಷಾದ ವ್ಯಕ್ತಪಡಿಸುತ್ತಾನೆ. ಆದರೆ ಪ್ರಯೋಗದಲ್ಲಿ ಕೊಲೆಗಾರನನ್ನು ಒಂದು ಧರ್ಮೀಯನ ಕ್ಕೆ ಚಿತ್ರಿಸಿದ್ದರಿಂದ (ಮುಂದಿ ಹಚ್ಚಿದ ಗಡ್ಡ) ಆಶಯದಲ್ಲಿ ಸ್ವಲ್ಪಮಟ್ಟಿನ ವಿರುಪೇರು ಕಂಡುಬರುವುದು ಈ ಕಥಾಭಿನಯದ ಪುಟ್ಟ ಮಿಸ್ಟೇಕ್.

'ಓಪನ್ ಮಾಡು' (ಖೋಲ್ ದೋ) ಎಂಬ ಕಥಾಭಿನಯದಲ್ಲಿ ಸಿರಾಜುದ್ದೀನ್ ಎಂಬ ನತದೃಷ್ಟ ತಂದೆಯ ಪಾತ್ರ ಅದ್ಭುತವಾಗಿ ಮೂಡಿಬಂದಿದೆ. ಸಿರಾಜುದ್ದೀನನ ಪತ್ನಿ ದುಷ್ಕರ್ಮಿಗಳ ಕಾಮಪಿಪಾಸುತನ ಮತ್ತು ರಕ್ತಪಿಪಾಸು ತನಕ್ಕೆ ತನ್ನ ಮಾನ ಮತ್ತು ಪ್ರಾಣ ಎರಡನ್ನೂ ಕಳೆದುಕೊಳ್ಳು ತ್ತಾಳೆ. ಇನ್ನೇನು ತನ್ನ ಪ್ರಾಣಪಕ್ಷಿ ಹಾರಿಹೋಗುತ್ತದೆ ಎಂಬುದು ಖಚಿತಗೊಂಡಾಗ "ನನ್ನ ಬಿಡ್ರೀ, ಸಕೀನಾಳನ್ನು ಹಿಡ್ಕೊಂಡು ಇಲ್ಲಿಂದ ಓಡಿಬಿಡಿ" ಎಂದು ಆರ್ತನಾದ ಗೈಯ್ಯುತ್ತಾಳೆ. ಮಗಳು ಸಕೀನಾಳ ಕೈ ಹಿಡಿದುಕೊಂಡು ತಂದೆ ಸಿರಾಜು ದ್ದೀನ್ ಓಡುತ್ತಿರುವಾಗ ಸಕೀನಾ ಜನಜಂಗುಳಿ ಯ ಮಧ್ಯೆ ಕೈ ತಪ್ಪುತ್ತಾಳೆ. ಆ ಬಳಿಕ ತನ್ನ ಮಗಳಿಗಾಗಿ ಹುಡುಕುತ್ತಾ ಹುಡುಕುತ್ತಾ ಹತಾಶನಾಗಿ ನೆಲದ ಮೇಲೆ ಬಿದ್ದು ಹುಚ್ಚನಂತೆ ಒದ್ದಾಡುವ ಸಿರಾಜುದ್ದೀನ್ ಪಾತ್ರ ಇಡೀ 'ಮಿಸ್ಟೇಕ್' ನಾಟಕದ ಅತ್ಯಂತ ಶ್ರೇಷ್ಠ ಅಭಿನಯವಾಗಿ ಮೂಡಿಬಂದಿದೆ. ಬಳಲಿ ಬೆಂಡಾಗಿ ಎದ್ದು ನಿಲ್ಲಲೂ ಶಕ್ತಿ ಯಿಲ್ಲದಷ್ಟು



ನಿತ್ರಾಣನಾದ ಸಿರಾಜುದ್ದೀನ್‌ನ ಕೊಳೆ ಮೆತ್ತಿದ, ಹರಿದು ಚಿಂದಿಯಾದ ಬಟ್ಟೆ, ಆತನ ಕಣ್ಣಲ್ಲಿ ಮೂಡುವ ಆತಂಕದ ಛಾಯೆ, ಭಯಪೀಡಿತ ವ್ಯಕ್ತಿಯ ಅಂತರಾಳದ ತಲ್ಲಣಗಳ ಅಭಿವ್ಯಕ್ತಿ, ಈತನ್ಮಧ್ಯೆ ಭರವಸೆಯ ಒಂದು ಪುಟ್ಟ ಬೆಳಕು. ದಾರಿಹೋಕ ಯುವಕರಲ್ಲಿ ಆತ ತನ್ನ ಮಗಳ ವಿಚಾರ ತಿಳಿಸುವಂತೆ ಮಾಡುತ್ತದೆ. ಅವರು ನೀಡುವ ಭರವಸೆ ಆತನ ಕಣ್ಣಲ್ಲಿ ಕ್ಷಣಕಾಲ ಮಿಂಚಿ ಮರೆಯಾಗುವ ಕೋಲ್ಮಿಂಚಿನಂತೆ ವ್ಯಕ್ತವಾಗುತ್ತದೆ.

ಕೊನೆಗೂ ಜೀವಚ್ಛವವಾಗಿ ಆಸ್ಪತ್ರೆ ಸೇರುವ ಸಕೀನಾಳ ಬಾಯಿಯಿಂದ ಹೊರಬೀಳುವ ಕೊನೆಯ ಮಾತು "ಸಲ್ವಾರದ ಲಾಡಿ ಬಿಚ್ಚಿ ಓಪನ್ ಮಾಡು..." ಇದು ಆಕೆಯ ಮೇಲೆ ನಡೆದ ಅತ್ಯಾಚಾರದ ಕಹಿ ಘಟನೆಗಳನ್ನು ಬಿಂಬಿಸುತ್ತದೆ. ಅರ್ಥಾತ್ ಕಾಮಪಿಪಾಸುಗಳು ಹೇಳಿದ ಮಾತುಗಳನ್ನು ಆಕೆ ಕೊನೆಯುಸಿರೆಳೆಯುವ ಮುಂಚೆ ಭಯವಿಹ್ವಲಳಾಗಿ ಹೇಳುತ್ತಾಳೆ.

ಸಿರಾಜುದ್ದೀನ್‌ನ ಅತ್ಯದ್ಭುತ ನಟನೆಯ ಮುಂದೆ ಸಕೀನಾ ಅಲ್ಪ ಮಂಕಾಗಿ ಕಾಣುತ್ತಾಳೆ.

'ಶರೀಫಾನ್' ಕತೆ ಯಥಾವತ್ ರಂಗದ ಮೇಲೆ ಮೂಡಿಸುವಷ್ಟು ಸುಲಭದ್ದಲ್ಲವಾದುದರಿಂದ ನಿರ್ದೇಶಕ ಬಳಸಿದ ಚಾಣಾಕ್ಷಯ ತಂತ್ರಗಾರಿಕೆ ಕಥಾಭಿನಯ ನಡೆಯುತ್ತಿರು ವಾಗಲೇ ತಂಡದ ಒಬ್ಬ ಸದಸ್ಯ ರಂಗಸ್ಥಳದಲ್ಲಿ ಕೂತು ಕತೆಯನ್ನು ನಿರೂಪಿಸುವುದು. ನಿರೂಪಕ ಆ ಕಥೆಯ ಗಂಭೀ ರತೆಯನ್ನು ತನ್ನ ಮುಖದಲ್ಲಿ ವ್ಯಕ್ತಪಡಿಸುತ್ತಾ ಪ್ರೇಕ್ಷಕರನ್ನು ಉಸಿರು ಬಿಗಿಹಿಡಿದು ನೋಡುವಂತೆ ಮಾಡುತ್ತಾರೆ. ನಿರೂಪಕ ತನ್ನ ಮುಖದ ತುಂಬಾ ಬೆವರೊಡೆಸುತ್ತಾ, ಕಣ್ಣಲ್ಲಿ ಭಯ ಮತ್ತು ಆತಂಕದ ಛಾಯೆ ಮೂಡಿಸಿ ಸುಸ್ಪಷ್ಟ ಉಚ್ಚಾರದ ಮಾತುಗಳಲ್ಲಿ ಕಥೆ ಪ್ರೇಕ್ಷಕರಿಗೆ ಸುಲಭವಾಗಿ ಅರ್ಥವಾಗು ವಂತೆ ಮಾಡುತ್ತಾರೆ. ಕತೆಯ ಮುಖ್ಯ ಪಾತ್ರಧಾರಿ ಖಾಸಿಂ ನಿರೂಪಕನ ನಿರೂಪಣೆಗೆ ತಕ್ಕಂತೆ ಮುಖಭಾವ ಪ್ರದರ್ಶಿಸು ತ್ತಾನೆ. ಕಣ್ಣಲ್ಲಿ ಬೆಂಕಿಯುಗುಳುತ್ತಾನೆ. ರಟ್ಟೆಗಳಲ್ಲಿ ಕಾದ ಕಬ್ಬಿಣದ ತೀಕ್ಷ್ಣತೆ ಪ್ರದರ್ಶಿಸುತ್ತಾನೆ. ತನ್ನ ಪತ್ನಿ ಮತ್ತು ಮಗಳು ಶರೀಫಾನ್‌ಳ ಅತ್ಯಾಚಾರ ಮತ್ತು ಕೊಲೆಗೆ ಪ್ರತೀಕಾರ ಸಲ್ಲಿಸುವ ಸಲುವಾಗಿ ತನ್ನ ಮಗಳದೇ ಪ್ರಾಯದ ಹಿಂದೂ ಬಾಲಕಿಯೊಬ್ಬಳ ಮೇಲೆ 'ಕಾಮವಾಂಛೆ' ಮಿಸುಕಲೂ ಸಾಧ್ಯವಿಲ್ಲದ ಆ ಸಂದರ್ಭದಲ್ಲಿ ಉನ್ಮಾದಕ್ಕೊಳಗಾಗಿ ಬರೇ ಹಗೆ ಸಾಧಿಸಲು ಅತ್ಯಾಚಾರವೆಸಗಿ ಕೊಲ್ಲುತ್ತಾನೆ. ಖಾಸಿಂ ಕೊನೆಯಲ್ಲಿ ಇದರಿಂದ ತನ್ನ ಮಗಳಿಗೆ ಆದ ಅನ್ಯಾಯ ಸರಿಪಡಿಸಲು ಸಾಧ್ಯವಿಲ್ಲವೆಂದು ಪರಿತಪಿಸುತ್ತಾ ಗೋಳಾಡುವ ದೃಶ್ಯ ಮನ ಕಲಕುವಂತಿತ್ತು.

ತಾನು ಭೋಗಿಸಿ ಕೊಂದ ವಿಮಲಾಳಲ್ಲೂ ತನ್ನ ಮಗಳು ಶರೀಫಾನ್‌ಳನ್ನೇ ಕಾಣುತ್ತಾನೆ. "ಅದೇ ನಿಮಿರಿ ನಿಂತ ಪುಟ್ಟ ಪುಟ್ಟ ಬೆಳ್ಳಗಿನ ಸ್ತನಗಳು" ಎಂದು ಹಿನ್ನೆಲೆಯಲ್ಲಿ ನಿರೂಪಕ ಆಡುವ ಮಾತುಗಳು ಖಾಸಿಂನ ಗೋಳಾಟಕ್ಕೆ ಪೂರಕವಾಗಿತ್ತು. ಇದು ದ್ವೇಷಕ್ಕಾಗಿ ದ್ವೇಷ ಸಿದ್ಧಾಂತದ ನಿರರ್ಥಕತೆಯನ್ನು ಸಾರುತ್ತದೆ.

'ಮಿಸ್ಟೇಕ್' ನಾಟಕದ ಕೊನೆಯ ಕತೆ 'ಅಲ್‌ವಿದಾ' (ವಿದಾಯ). ಮುಮ್ತಾಝ್ ಎಂಬ ಮುಸ್ಲಿಂ ಯುವಕ ತನ್ನ ಜೀವದ (ಹಿಂದೂ) ಗೆಳೆಯರಿಗೆ ವಿದಾಯ ಕೋರಿ ಪಾಕಿಸ್ತಾನಕ್ಕೆ ಹೊರಟುಹೋಗುವ ಕತೆ. ಮುಮ್ತಾಜ್‌ನ ಗೆಳೆಯ ಜುಗಲ್‌ನ ಚಿಕ್ಕಪ್ಪನನ್ನು ಪಾಕಿಸ್ತಾನದಲ್ಲಿ ದುಷ್ಕರ್ಮಿಗಳು ಕೊಂದ ವರ್ತಮಾನ ಜುಗುಲ್‌ನಿಗೆ ಸಿಕ್ಕಿತ್ತು. ಇದರಿಂದ ತೀವ್ರ ವಿಚಲಿತನಾಗಿದ್ದ ಜುಗಲ್ "ನಮ್ಮ ಓಣಿಯಲ್ಲಿ ಗಲಭೆಯಾದರೆ ನಾನು ನಿನ್ನನ್ನು ಕೊಲ್ಲುವ ಸಾಧ್ಯತೆಗಳೇ ಜಾಸ್ತಿ ಇತ್ತು" ಎಂದು ಜೀವದ ಗೆಳೆಯ ಮುಮ್ತಾಜ್‌ನಿಗೆ ಹೇಳಿದ್ದ, ಗೆಳೆಯನ ಈ ಮಾತುಗಳೇ ಮುಮ್ತಾಜ್ ದೇಶ ತೊರೆ ಯುವಂತೆ ಮಾಡುತ್ತವೆ.

ಈ ಕಥಾಭಿನಯದಲ್ಲಿ ಅಭಿನಯ ಕ್ಕಿಂತ ಸಂಭಾಷಣೆಗೇ ಹೆಚ್ಚು ಒತ್ತು ನೀಡಲಾಗಿದೆ. ಇಲ್ಲಿ ಸಂಭಾಷಣೆಗಳೇ ಮಹತ್ವ ಪಡೆದುಕೊಳ್ಳುತ್ತವೆ. ಮುಮ್ತಾಜ್ ಪಾತ್ರಧಾರಿ ಇಲ್ಲಿ ಓರ್ವ ತತ್ವಜ್ಞಾನಿಯಂತೆ ಮಾತಾಡುತ್ತಾನೆ. ಮೇಲ್ನೋಟಕ್ಕೆ ಆತ ಕುಡಿದ ಮತ್ತಿನಲ್ಲಿ ಮಾತನಾಡುವವನಂತೆ ಕಂಡರೂ, ಗೆಳೆಯ ಜುಗಲ್‌ನ ಮಾತುಗಳು ಆತನ ಅಂತರಂಗದಲ್ಲಿ ಎಬ್ಬಿಸಿದ ಬಿರುಗಾಳಿಯ ಪರಿಣಾಮವದು. ಇಲ್ಲಿ ನಿರ್ದೇಶಕನಿಗೆ ತನ್ನ ತಂತ್ರಗಾರಿಕೆಯನ್ನು ಬಳಸುವ ಹೆಚ್ಚಿನ ಅವಕಾಶವಿರುವುದಿಲ್ಲ. ಯಾಕೆಂದರೆ ಈ ಕತೆಯಲ್ಲಿ ಮುಖ್ಯ ಪಾತ್ರಧಾರಿ ಕತೆ ಯುದ್ದಕ್ಕೂ ಒಬ್ಬನೇ ಮಾತನಾಡುತ್ತಾನೆ. ಆತನ ಗೆಳೆಯರು ಇಡೀ ಕತೆಯುದ್ದಕ್ಕೂ ಒಂದೋ ಎರಡೋ ಮಾತುಗಳನ್ನಾಡು ತ್ತಾರಷ್ಟೆ. ಈ ಇಡೀ ಕಥಾಭಿನಯದಲ್ಲಿ ನಮಗೆ ಮಾತುಕತೆಯ ಹೊರತಾಗಿ ಕಾಣಸಿಗುವ ಅಭಿನಯ "ವೇಶ್ಯೆಯರ ದಳ್ಳಾಲಿ ಅಥವಾ ಪಿಂಪ್" ಸಹಾಯ್ ಎಂಬ ಮಾನವತಾವಾದಿಯ (!) ಸಾವು. ಇದು ಕತೆಯೊಳಗಿನ ಕತೆಯಷ್ಟೆ.

ಮಾಂಟೋನ ಜೀವನ ಚರಿತ್ರೆಕಾರರ ಪ್ರಕಾರ ಇದು ಸ್ವತಃ ಮಾಂಟೋನ ಬದುಕಿನ ಕತೆ. ಈ ಕತೆಯ ಒಟ್ಟು ಸಂದೇಶ ದ್ವೇಷದ ಮತ್ತು ಹಿಂಸೆಯ ನಿರರ್ಥಕತೆ.

"ಒಂದು ಲಕ್ಷ ಮುಸಲ್ಮಾನರ ಮತ್ತು ಒಂದು ಲಕ್ಷ ಹಿಂದೂಗಳ ಹತ್ಯೆಯಾಯಿತು ಎಂದೇಕೆ ಹೇಳಬೇಕು? ಎರಡು ಲಕ್ಷ ಅಮಾಯಕ ಮನುಷ್ಯರ ನರಹತ್ಯೆಯಾಯಿತು ಎನ್ನುವುದೇ ಸೂಕ್ತ" ಎಂಬ ಉದಾತ್ತ ಸಂದೇಶ ನೀಡುವ ಮಹಾ ಮಾನವತಾವಾ ಮಾಂಟೋನ ಕಥಾಭಿನಯ 'ಮಿಸ್ಟೇಕ್' ಪ್ರೇಕ್ಷಕರ ಕಣ್ಣಾಲಿಗಳು ತೋಯಿಸುವಲ್ಲಿ ಯಶಸ್ಸು ಕಂಡಿದೆ. ಅಂಚಿಗೆ ತಳ್ಳಲ್ಪಟ್ಟ ಮಾಂಟೋ ಎಂಬ ಅದ್ಭುತ ಕತೆಗಾರನನ್ನು ರಂಗಕ್ಕೆ ತರುವ ಮೂಲಕ ಈ ಕಾಲದ ಕೋಮು ವಿಷಣ್ಣತೆಗೆ ಪರಿಹಾರ ಕಂಡು ಹುಡುಕುವ ಪ್ರಯತ್ನ ಮಾಡುವ 'ರಥಬೀದಿ ಗೆಳೆಯ'ರಿಗೆ ಮಾನವತಾವಾದಿ ಗಳ ಕೋಟಿ ಕೋಟಿ ಸಲಾಂ.

▸2 ಸದಾನಂದರ ಬಜೆಟ್ಟು

ಸ್ಥಿತಿ ಋಣಾತ್ಮಕ ಬೆಳವಣಿಗೆಯನ್ನು ತೋರಿಸುತ್ತಿರುವಾಗ ವಾಸ್ತವದಲ್ಲಿ ಈ ಬಾಬತ್ತಿಗೆ ಇನ್ನೂ ಕಡಿಮೆ ಹಣವನ್ನೇ ನೀಡಲಾಗಿರುತ್ತದೆ. ಮುಂದಿನ ವರ್ಷದ ಬಜೆಟ್ಟಿನಲ್ಲಿ ತೋರಿಸುವ ಪರಿಷ್ಕೃತ ಮೊತ್ತದಲ್ಲಿ ನಿಜ ಹೂರಣ ಹೊರಬೀಳುತ್ತದೆ. ಆದ್ದರಿಂದಲೇ ಅದಕ್ಕೆ ಪೂರಕವಾಗಿ ಈ ಬಾರಿ 40 ಲಕ್ಷ ಪಡಿತರ ಕಾರ್ಡುಗಳನ್ನು ರದ್ದುಗೊಳಿ ಸುವುದಾಗಿಯೂ ಸರ್ಕಾರ ಹೇಳಿದೆ. ರಾಜ್ಯದಲ್ಲಿ 1.32 ಕೋಟಿ ಕಾರ್ಡುಗಳಿದ್ದು ಅದರಲ್ಲಿ 32 ಲಕ್ಷ ಕಾರ್ಡುಗಳು ಬಡತನ ರೇಖೆಗಿಂತ ಕೆಳಗಿನವು. ಹೆಚ್ಚು ಸಬ್ಸಿಡಿ ಸಿಗುತ್ತಿರುವುದು ಈ ವರ್ಗಗಳಿಗೆ. ಹೀಗಾಗಿ ಈಗ ಸಬ್ಸಿಡಿ ಕಡಿಮೆಯಾಗಬೇಕೆಂದರೆ ಹೊಡೆತ ಬೀಳುವುದು ಈ ವರ್ಗಗಳ ಮೇಲೆಯೇ. ಅದೇರೀತಿ ಪಿಂಚಣಿಯ ಮೇಲಿನ ವೆಚ್ಚವನ್ನು ಕಡಿಮೆ ಮಾಡಬೇಕು ಎನ್ನುವ ಉದ್ದೇಶದಿಂದ 8 ಲಕ್ಷ 'ನಕಲಿ' ಪಿಂಚಣಿ ಕಾರ್ಡುಗಳನ್ನು ರದ್ದು ಮಾಡುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.

ಇದು ಸದಾನಂದರ ನಗುವಿನ ಹಿಂದಿನ ಕ್ರೌರ್ಯ.

ಕೇಂದ್ರ ಸರ್ಕಾರವೂ ಸಹ ತಾನು ಕೊಡುತ್ತಿದ್ದ ಅನುದಾನವನ್ನು ಕ್ರಮೇಣ ಕಡಿಮೆ ಮಾಡಲಿದೆ. ಪ್ರಣಬ್ ದಾದಾರಂತೂ 'ನಾನು ದಯಾಮಯಿ ಆಗುವ ಮೊದಲು ಕ್ರೂರಿಯಾಗುತ್ತಾನೆ' ಎಂದೇ ಹೇಳಿದ್ದಾರೆ. ಹೀಗಾಗಿ ಬಡಜನರ ಬದುಕಿನ ದೃಷ್ಟಿಯಿಂದ ನೋಡಿದರೆ ನಗುವ ಸದಾನಂದ, ಗಡಸು ಮುಖದ ಪ್ರಣಬ ದಾದಾ ಇಬ್ಬರೂ ಜನರನ್ನು ತಿನ್ನುವ ಹುಲಿಗಳೇ...

ಬಡಜನರಿಗೆ ಕೊಡುತ್ತಿದ್ದ ರಿಯಾಯತಿ ಮತ್ತು ವಿನಾಯತಿಗಳನ್ನು ಮಾತ್ರ ಒಂದಾದಮೇಲೊಂದರಂತೆ ಹಿಂತೆಗೆದುಕೊಳ್ಳುತ್ತಿದ್ದರೂ ತಮ್ಮದೇ ರಾಜಕೀಯ ಉಳಿವಿಗಾಗಿ ಮಾತ್ರ ಮಠಮಾನ್ಯಗಳ ವೈಭವಕ್ಕೆ ಕೊಡುತ್ತಿದ್ದ ಹಣದಲ್ಲಿ ಮಾತ್ರ ಕೊರತೆ ಮಾಡಿಲ್ಲ, ಕಳೆದ ಮೂರು ವರ್ಷಗಳಲ್ಲಿ ಯಡ್ಡಿ ಪ್ರಧಾನವಾಗಿ ವೀರಶೈವ ಮತ್ತು ಬ್ರಾಹ್ಮಣ ಸಮುದಾಯಗಳನ್ನು ಬುಟ್ಟಿಗೆ ಹಾಕಿಕೊಳ್ಳಲು 395 ಕೋಟಿ ರೂ.ಗಳನ್ನು ನೀಡಿದ್ದರೆ ಅದಕ್ಕೆ ಪ್ರತಿಯಾಗಿ ಸದಾನಂದ ಒಬಿಸಿ ಮತಗಳನ್ನು ಗಟ್ಟಿಗೊಳಿಸಿಕೊಳ್ಳಲು ಒಬಿಸಿ ಮಠಗಳಿಗೆ ಮತ್ತು ಸಂಸ್ಥೆಗಳಿಗೆ ನೂರು ಕೋಟಿಯವರೆಗೂ ಅನುದಾನವನ್ನು ನೀಡಿದ್ದಾರೆ.

ಸದಾನಂದರು ಆರೆಸ್ಸೆಸ್ ಅಜೆಂಡಾವನ್ನು ಅನುಷ್ಠಾನಕ್ಕೆ ತರುವಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಗೋ ಸಂರಕ್ಷಣಾ ಹೆಸರಲ್ಲಿ ಭಜರಂಗಿಗಳು ನಡೆಸುತ್ತಿದ್ದ ಹಿಂಸಾಚಾರಗಳಿಗೆ ಕಾನೂನು ಮಾನ್ಯತೆಯನ್ನು ನೀಡುವ ತಿದ್ದುಪಡಿಯೊಂದನ್ನು 2009ರಲ್ಲಿ ಬಿಜೆಪಿ ಸರ್ಕಾರ ಗೋಹತ್ಯಾ ನಿಷೇಧ ಕಾಯಿದೆಯಲ್ಲಿ ಪ್ರಸ್ತಾಪಿಸಿತ್ತು. ಆದರೆ ಜನರ ಹೋರಾಟದಿಂದಾಗಿ ಅದನ್ನು ಹಿಂತೆಗೆದುಕೊಂಡ ಬಿಜೆಪಿ ಸರಕಾರ 2010ರಲ್ಲಿ ಜಾನುವಾರು ಹತ್ಯಾ ನಿಷೇಧ ಕಾಯಿದೆಯನ್ನು ಮುಂದಿಟ್ಟಿತ್ತು. ಅದು ಸಾರಾಂಶದಲ್ಲಿ ಬೇರೆ ವಿಷಯಗಳಲ್ಲಿ ಕ್ರೂರವಾಗಿದ್ದರೂ ಭಜರಂಗಿಗಳಿಗೆ ಶಾಸನಾತ್ಮಕ ಅಧಿಕಾರವನ್ನು ಕೊಡುವ ಅಂಶವನ್ನು ಹೊಂದಿರಲಿಲ್ಲ. ಈಗ ಅದರಲ್ಲಿದ್ದ ಕೊರತೆಯನ್ನು ಬಜೆಟ್ಟಿನ ಮೂಲಕ ಈಡೇರಿಸಿಕೊಳ್ಳುವ ಹುನ್ನಾರವನ್ನು ಸದಾನಂದರ ಸರ್ಕಾರ ನಡೆಸಿದೆ.

ಆರೆಸ್ಸೆಸ್ ರಿಮೋಟಿನಲ್ಲಿ ನಡೆಯುವ ಸದಾನಂದರ ಸರ್ಕಾರ "ಸ್ಥಳೀಯ ಗೋವುಗಳ ಸಂರಕ್ಷಣೆ ಮಾಡುವ ಉದ್ದೇಶದಿಂದ 20 ಎಕರೆ ಜಮೀನು ಮತ್ತು 50 ದೇಶೀ ಗೋವುಗಳನ್ನು ಸಾಕುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಾನುದಾನ" ನೀಡುವ ಪ್ರಸ್ತಾಪವನ್ನು ಬಜೆಟ್ಟಿನಲ್ಲಿ ಮಾಡಿದೆ. ಇದು ಮಠಗಳನ್ನು ಮತ್ತು ಸಂಘಪರಿವಾರ ನಡೆಸುತ್ತಿರುವ ಸಂಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡಿರುವ ಪ್ರಸ್ತಾಪ ಎನ್ನುವುದರಲ್ಲಿ ಸಂಶಯವಿಲ್ಲ.

ಅಲ್ಲದೆ "ನಾಡಿನ ಪಶು ಸಂಪತ್ತನ್ನು ರಕ್ಷಿಸಲು ಗೋ ಸೇವಾ ಆಯೋಗ"ವನ್ನು ಸ್ಥಾಪಿಸುವ ಪ್ರಸ್ತಾಪವನ್ನು ಸರ್ಕಾರ ಮಾಡಿದೆ. ಇಲ್ಲಿ ನಾಡಿನ ಪಶು ಸಂಪತ್ತು ಎಂದರೆ ಗೋಸಂಪತ್ತು ಮಾತ್ರ ಎಂಬ ಬ್ರಾಹ್ಮಣೀಯ ಕಲ್ಪನೆಗೆ ಶಾಸನಾತ್ಮಕ ಮಾನ್ಯತೆ ನೀಡಿರುವುದು ಮಾತ್ರವಲ್ಲದೆ ಅದಕ್ಕೊಂದು ಆಯೋಗವನ್ನೇ ಸ್ಥಾಪನೆ ಮಾಡಿ ಭಜರಂಗದಳ ನಡೆಸುತ್ತಿರುವ ಪುಂಡಾಟಕೆಗೆ ಸಾಂಸ್ಥಿಕ ಚೌಕಟ್ಟನ್ನು ಒದಗಿಸಲಾಗಿದೆ.

ಹೀಗೆ ಹತ್ತು ಹಲವು ವಿಷಯಗಳಲ್ಲಿ ಇದೊಂದು ಜನವಿರೋಧಿ ಆರೆಸ್ಸೆಸ್ ಬಜೆಟ್. ಹಿಂದೂತ್ವದ ದಾಸಿಕೆ ತೊಡೆಯುವ ಶ್ರೀಮಂತ ಬಂಡವಾಳಶಾಹಿ ಮತ್ತು ವಿದೇಶಿ ಹೂಡಿಕೆದಾರರ ಪರವಾಗಿರುವ ಬಜೆಟ್ಟು.

ಲಂಕೇಶ್ ಮತ್ತು ಮಿತ್ರರು


ಹುಳಿಮಾವು ಮತ್ತು ನಾನು 34

• ಇಂದಿರಾ ಲಂಕೇಶ್

ಲಂಕೇಶರನ್ನು ಕುರಿತ ಈ ಅಂಕಣದಲ್ಲಿ ನಾನು ಲಂಕೇಶರ ಮಿತ್ರರ ಬಗ್ಗೆ ಮತ್ತು ಇತರೆ ಸಾಹಿತಿಗಳ ಬಗ್ಗೆ ಹೆಚ್ಚಾಗಿ ಯಾಕೆ ಬರೆದಿಲ್ಲ ಎಂದು ಕೇಳುತ್ತಿದ್ದಾರೆಂದು ಗೌರಿ ಹೇಳಿದಳು. ಅದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ನಾನು ಹಲವಾರು ಪುಸ್ತಕಗಳನ್ನು ಓದಿದ್ದರೂ, ನಾಟಕಗಳನ್ನು ನೋಡಿದ್ದರೂ ಅವುಗಳ ಬಗ್ಗೆ ಸಾಹಿತಿಗಳೊಂದಿಗೆ ಮಾತನಾಡುವಷ್ಟು ಪ್ರಾವೀಣ್ಯತೆ ಹೊಂದಿರಲಿಲ್ಲ, ಆದ್ದರಿಂದ ಲಂಕೇಶರ ಸಾಹಿತಿ ಮಿತ್ರರೊಂದಿಗೆ ನಾನು ಹೆಚ್ಚು ಬೆರೆಯಲಿಲ್ಲ, ಎರಡನೆಯದಾಗಿ ಯಾರು ಲಂಕೇಶರ ಮಿತ್ರರು ಎಂದು ನನಗೆ ಸ್ಪಷ್ಟವಾಗಿ ಗೊತ್ತಾಗುತ್ತಿರಲಿಲ್ಲ, ನಮ್ಮ ಮನೆಗೆ ಹೆಚ್ಚಾಗಿ ಬರುತ್ತಿದ್ದವರು ಲಂಕೇಶರಿಗೆ ಸ್ನೇಹಿತರು ಎಂದು ನಾನು ಅಂದುಕೊಳ್ಳುವಷ್ಟರಲ್ಲಿ ಅವರು ನಮ್ಮ ಮನೆಗೆ ಬರುವುದನ್ನೇ ನಿಲ್ಲಿಸುತ್ತಿದ್ದರು. ಲಂಕೇಶರು ಅವರೊಂದಿಗೆ ಮನಸ್ತಾಪವನ್ನೋ, ಜಗಳವನ್ನೇ ಆಡಿರುತ್ತಿದ್ದರು. ಆದ್ದರಿಂದ ಯಾವ ಕ್ಷಣದಲ್ಲಿ ಯಾರು ಲಂಕೇಶರ ಸ್ನೇಹಿತರು, ಸ್ನೇಹಿತರಲ್ಲ ಎಂದು ನನಗೆ ಗೊತ್ತಾಗುತ್ತಿರಲಿಲ್ಲ.

ನಾನು ಅಂಗಡಿಯನ್ನು ತೆರೆಯುವ ಮುನ್ನ ನಮ್ಮ ಮನೆಗೆ ಅಡಿಗರು, ಪಿ.ಆರ್.ತಿಂಹ, ಜಿ.ಎಸ್.ಸದಾಶಿವ, ವೈಎನ್‌ಕೆ, ಮರುಳಸಿದ್ದಪ್ಪ ಜಿ.ಎಸ್.ಶಿವರುದ್ರಪ್ಪ ನಿಸ್ಸಾರ್ ಅಹಮದ್, ತೇಜಸ್ವಿ, ಕಂಬಾರ, ಚಂಪ, ಅಗ್ರಹಾರ, ಡಿ.ಆರ್.ನಾಗರಾಜ್ - ಎಲ್ಲರ ಹೆಸರನ್ನು ಬರೆಯುತ್ತ ಹೋದರೆ ಒಂದು ಪುಟವೂ ಸಾಲುವುದಿಲ್ಲ -ಎಲ್ಲರೂ ಬರುತ್ತಿದ್ದರು. ಅವರೆಲ್ಲರಿಗೆ ನಾನು ಕಾಫಿ ಅಥವಾ ಅಡುಗೆ ಮಾಡಿ ಸುಮ್ಮನಾಗುತ್ತಿದ್ದೆ.





ಅಂದಹಾಗೆ, ಲಂಕೇಶರು ತಮ್ಮ ಸ್ನೇಹಿತರೊಂದಿಗೆ ನಮ್ಮ ಮನೆಯಲ್ಲಿ ಸಮಯ ಕಳೆದದ್ದು ತುಂಬಾ ಕಡಿಮೆ. ನಾವು ಗಾಂಧಿಬಜಾರಿನಲ್ಲಿ ವಾಸಿಸುತ್ತಿದ್ದಾಗ ನಮ್ಮ ಮನೆಗೆ ಬಂದ ಗೆಳೆಯರನ್ನು ಲಂಕೇಶರು ಹತ್ತಿರವಿದ್ದ ವಿದ್ಯಾರ್ಥಿ ಭವನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ ಅವರೆಲ್ಲ ಹೋಗುತ್ತಿದ್ದದ್ದು ಆಗ ಅದೇ ಗಾಂಧಿ ಬಜಾರ್ ಸರ್ಕಲ್‌ನಲ್ಲಿದ್ದ ಸರ್ಕಲ್ ಲಂಚ್ ಹೋಮ್. ಎಂಬ ಹೋಟೆಲ್ಲಿಗೆ. ಆ ಹೋಟೆಲ್‌ನ ಮಾಲೀಕರೂ ಸಾಹಿತ್ಯಾಭಿಮಾನಿಯಾಗಿದ್ದರಿಂದ ಇವರೆಲ್ಲ ಅಲ್ಲಿ ಕಾಫೀ ಹೀರುತ್ತಾ ಗಂಟೆಗಟ್ಟಲೆ ಕೂತಿದ್ದರೂ ಆತ ಇವರಿಗೆ ಎದ್ದು ಹೋಗುವಂತೆ ಹೇಳುತ್ತಿರಲಿಲ್ಲ, ಬದಲಾಗಿ ಹಲವೊಮ್ಮೆ ಅವರು ಕೂಡ ಸಾಹಿತಿಗಳೊಂದಿಗೆ ಹರಟೆಗೆ ಕೂರುತ್ತಿದ್ದರು. ಆಗಿನ ಕಾಲದಲ್ಲಿ ಸರ್ಕಲ್ ಲಂಚ್ ಹೋಮ್ ಸಾಹಿತಿಗಳ ಅಡ್ಡೆಯಾಗಿತ್ತು. ಪ್ರಾಯಶಃ ಇದೇ ಕಾರಣಕ್ಕೆ ಆ ಹೋಟೆಲ್ ಕೊನೆಗೊಂದು ದಿನ ಲಾಸ್ ಆಗಿ ಬಾಗಿಲು ಮುಚ್ಚಿತು!

ನಮ್ಮ ಮನೆಗೆ ಬರುತ್ತಿದ್ದ ಸಾಹಿತಿಗಳೊಂದಿಗೆ ನಾನು ಹೆಚ್ಚು ಮಾತನಾಡಿರುವುದು ಯು.ಆರ್.ಅನಂತಮೂರ್ತಿಯವರೊಂದಿಗೆ ಅನ್ನಿಸುತ್ತಿದೆ. ಆಗಿನ ಕಾಲದಲ್ಲೇ ಅನಂತಮೂರ್ತಿಯವರ ಹಲವಾರು ಭಾಷಣಗಳನ್ನು ಕೇಳಿದ್ದೆ. ಅವರು ಸಾರ್ವಜನಿಕ ಸಭೆಗಳಲ್ಲಿ ತುಂಬಾ ಚೆನ್ನಾಗಿ ಮಾತನಾಡುತ್ತಿದ್ದರು. ತಮ್ಮ ಎದುರು ಯಾವ ತರಹದ ಜನಗಳಿದ್ದಾರೆ ಎಂಬುದನ್ನು ಅರಿತು ಆ ಜನರನ್ನು ಆಕರ್ಷಿಸುವಂತೆ ಮಾತನಾಡುತ್ತಿದ್ದರು.

ಹಾಗೆಯೇ ಲಂಕೇಶರೊಂದಿಗೆ ಕಾಲೇಜಿನಲ್ಲಿ ಓದಿದ್ದ ಮತ್ತು ಹಲವು ವರ್ಷಗಳ ಕಾಲ ಸ್ನೇಹಿತರಾಗಿದ್ದ ಸುಮತೀಂದ್ರ ನಾಡಿಗ್ ಅವರೊಂದಿಗೂ ಮಾತನಾಡಿದ್ದೇನೆ. ಒಮ್ಮೆ, ಬಹಳ ವರ್ಷಗಳ ನಂತರ, ನಾವಿಬ್ಬರೂ ನಾಡಿಗ್ ಅವರನ್ನು ಭೇಟಿ ಆದೆವು. ಆ ಭೇಟಿಯ ನಂತರ ನಾನು ಲಂಕೇಶರಿಗೆ "ನಾಡಿಗ್ ಒಂದಿಷ್ಟೂ ಬದಲಾಗಿಲ್ಲ, ಹಲವಾರು ವರ್ಷಗಳ ಹಿಂದೆ ಹೇಗಿದ್ದರೋ ಹಾಗೆಯೇ ಇದ್ದಾರೆ" ಎಂದೆ. ಅದನ್ನು ಕೇಳಿ ಲಂಕೇಶರು ಜೋರಾಗಿ ನಗುತ್ತಾ "ನೀನು ಕರೆಕ್ಟ್ ಆಗಿ ಹೇಳಿದೆ. ಅವನು ಒಂದಿಷ್ಟೂ ಬದಲಾಗಿಲ್ಲ, ಒಂದಿಷ್ಟೂ ಬೆಳೆದಿಲ್ಲ, ಆಗ ಹೇಗಿದ್ದನೋ ಈಗಲೂ ಹಾಗೆ ಇದ್ದಾನೆ" ಎಂದರು.


ಲಂಕೇಶರ 'ಅವ್ವ' ಕವನದ ಬಗ್ಗೆ ಇದೇ ನಾಡಿಗ್ ವಿಮರ್ಶೆ ಮಾಡಿದ್ದ ರೀತಿ ಒಂದಿಷ್ಟೂ ಸರಿ ಇರಲಿಲ್ಲ, ಈ ಕವನವನ್ನು ಎಲ್ಲರೂ ಮೆಚ್ಚಿದ್ದರೆ ನಾಡಿಗ್ ಮಾತ್ರ "ಲಂಕೇಶ್ ತನ್ನ ಅವ್ವನ ಬಗ್ಗೆ ಕೀಳಾಗಿ ಬರೆದಿದ್ದಾನೆ" ಎಂದಿದ್ದರು. ಆಗ ನಾನು "ಈ ಮನುಷ್ಯನಿಗೆ ಅಷ್ಟೂ ಅರ್ಥ ಆಗುವುದಿಲ್ಲವಾ?" ಎಂದು ಲಂಕೇಶರನ್ನು ಕೇಳಿದ್ದೆ. ಅವರು ನಕ್ಕು ಸುಮ್ಮನಾದರು.

ಆಗ ನಮ್ಮ ಮನೆಗೆ ಬರುತ್ತಿದ್ದವರಲ್ಲಿ ಪ್ರಮುಖರು ಪ್ರೊ. ಎಂ.ಡಿ.ನಂಜುಂಡಸ್ವಾಮಿ. ಅವರು ಆಗ ತಾನೇ ವಿದೇಶದಲ್ಲಿ ಲಾ ಓದಿ ಬಂದಿದ್ದರು. ಅಷ್ಟು ಹೊತ್ತಿಗೆ ಲಂಕೇಶ್ ಮತ್ತು ಅವರ ಮಿತ್ರರು ಸೂಟ್ ಧರಿಸುವುದನ್ನು ಬಿಟ್ಟು ಪ್ಯಾಂಟ್ ಜೊತೆ ಬುಶ್ ಶರ್ಟ್ ಅಥವಾ ಜುಬ್ಬ ಧರಿಸುತ್ತಿದ್ದರೆ ನಂಜುಂಡಸ್ವಾಮಿಯವರು ಮಾತ್ರ ಯಾವಾಗಲೂ ಥ್ರೀ-ಪೀಸ್ ಸೂಟ್ ಧರಿಸಿ, ತಲೆ ಕೂದಲು ಮತ್ತು ಗಡ್ಡವನ್ನು ನೀಟಾಗಿ ಟ್ರಿಮ್ ಮಾಡಿಸಿಕೊಂಡು, ಕೋಟ್ ಜೇಬಿನಲ್ಲಿ ನೇತಾಡುವ ಕನ್ನಡಕ ಸಿಕ್ಕಿಸಿಕೊಂಡಿರುತ್ತಿದ್ದರು. ಅವರು ನೋಡಲು ಪರ್ಫೆಕ್ಟ್ ಜೆಂಟಲ್‌ಮ್ಯಾನ್‌ನಂತಿದ್ದರು.

ಬರೀ ನೋಡಲು ಮಾತ್ರವಲ್ಲ, ನಡೆನುಡಿಯಲ್ಲೂ ಅವರು ಸಭ್ಯ ಮನುಷ್ಯ. ಮಹಿಳೆಯರನ್ನು ಗೌರವದಿಂದ, ಮಕ್ಕಳನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಇತರರು ಏರುದನಿಯಲ್ಲಿ ಮಾತನಾಡುತ್ತಿದ್ದರೆ ನಂಜುಂಡಸ್ವಾಮಿಯವರು ಎಂದೂ ಗಟ್ಟಿ ದನಿಯಲ್ಲಿ ಮಾತನಾಡಿದ್ದನ್ನು ನಾನು ಕೇಳಿಸಿಕೊಂಡಿರಲಿಲ್ಲ, ಇಂತಹ ನಂಜುಂಡಸ್ವಾಮಿಯವರು ಆನಂತರ ರೈತರ ಫೈರ್ ಬ್ರಾಂಡ್ ನಾಯಕರಾಗಿದ್ದು ಸೋಜಿಗವೇ ಸರಿ. ಆಗಲೂ ನಂಜುಂಡಸ್ವಾಮಿ ಅವರ ನಡೆನುಡಿಗೂ, ನನ್ನ ಪತಿ ಲಂಕೇಶರ ನಡೆನುಡಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂದು ನನಗೆ ಗೊತ್ತಿತ್ತು.

ನಂಜುಂಡಸ್ವಾಮಿ ಮತ್ತು ಲಂಕೇಶರು ಓಂದೇ ವಯಸ್ಸಿನವರು. ಆದರೆ ಆ ಹೊತ್ತಿಗಿನ್ನೂ ನಂಜುಂಡಸ್ವಾಮಿ ಅವರಿಗೆ ಮದುವೆ ಆಗಿರಲಿಲ್ಲ, ಈ ಬಗ್ಗೆ ನಾನು ಒಮ್ಮೆ ಲಂಕೇಶರನ್ನು ಕೇಳಿದಾಗ ಅವರು "ಆತ ಮೈಸೂರಿನಲ್ಲಿ ತುಂಬಾ ರಿಚ್ ಫೆಲೋ. ತುಂಬಾ ಆದರ್ಶಗಳನ್ನು ಇಟ್ಟುಕೊಂಡಿದ್ದಾರೆ. ಆತನಿಗೆ ಎಸ್.ಸಿ ಅಥವಾ ಎಸ್.ಟಿ ಜಾತಿಯ ಹುಡುಗಿಯನ್ನು ಮದುವೆ ಆಗುವ ಆಸೆ. ಅದಕ್ಕಿಂತ ಮುಖ್ಯವಾಗಿ ಆತನಿಗೆ ಇಷ್ಟವಾಗುವ ಹುಡುಗಿ ಇನ್ನೂ ಸಿಕ್ಕಿಲ್ಲವಂತೆ" ಎಂದರು. ಆಗ ನಾನು ನಂಜುಂಡಸ್ವಾಮಿ ಅವರಿಗೆ ಇಷ್ಟವಾಗುವ ಹುಡುಗಿ ಸಿಗುವ ಹೊತ್ತಿಗೆ ಅವರಿಗೆ ಇನ್ನೆಷ್ಟು ವಯಸ್ಸಾಗಿರುತ್ತೋ ಎಂದುಕೊಂಡೆ. ಆನಂತರ ಹಿರಿಯರೇ ಅವರಿಗೆ ಮದುವೆ ಮಾಡಿಸಿದರು. ಆದರೆ ಅವರ ಹೆಂಡತಿಯನ್ನು ಭೇಟಿ ಆಗುವ ಅವಕಾಶ ನನಗೆ ಸಿಗಲೇ ಇಲ್ಲ.

ನಂಜುಂಡಸ್ವಾಮಿಯವರಂತೆ ತುಂಬಾ ಲೇಟಾಗಿ ಮದುವೆ ಆದವರಲ್ಲಿ ಸಮಾಜವಾದಿಗಳ ಪೈಕಿ ಹಿರಿಯ ಗೋಪಾಲ ಗೌಡರೂ ಒಬ್ಬರು. ಮದುವೆ, ವಯಸ್ಸು ಮತ್ತು ಹುಡುಗಿಯರ ಬಗ್ಗೆ ಗೋಪಾಲಗೌಡರು ಹೇಳಿದ ಮಾತನ್ನ ಲಂಕೇಶರು ನನಗೆ ಹೇಳಿದ್ದರು. ಅದು ಈಗಲೂ ನನಗೆ ಚೆನ್ನಾಗಿ ನೆನಪಿದೆ. ಗೌಡರು ಹೀಗೆ ಹೇಳಿದ್ದರಂತೆ: "ಮನುಷ್ಯನ ಜೀವನದಲ್ಲಿ ಒಂದು ವಯಸ್ಸು ಬರುತ್ತೆ, ಅದು 18ರ ವಯಸ್ಸು. ಆ ವಯಸ್ಸಿನಲ್ಲಿ ಸೀರೆಯ ನೆರಳು ಕಂಡರೂ ಅದು ಸುಂದರವಾಗಿ ಕಾಣುತ್ತೆ, ಆದರೆ ಕಾಲಕ್ರಮೇಣ ಮನುಷ್ಯನಿಗೆ 30 ತುಂಬಿದಾಗ ಆತನ ಪಕ್ಕದಲ್ಲಿ ಅತಿ ಸುಂದರಿಯಾದ ಮಹಿಳೆ ಬಂದುನಿಂತರೂ ಆಕೆಯ ಬಗ್ಗೆ ಆತನಿಗೆ ಏನೂ ಅನ್ನಿಸುವುದಿಲ್ಲ, ಇದಾದನಂತರ ಇನ್ನೊಂದು ಘಟ್ಟ ಬರುತ್ತೆ. ಅದು 35ನೇ ವಯಸ್ಸು. ಆಗ ಮತ್ತೆ ಎಲ್ಲಾ ಹುಡುಗಿಯರೂ ಚೆಂದವಾಗಿ ಕಾಣಿಸುತ್ತಾರೆ... ಆಗ ಮದುವೆ ಆಗಲೇಬೇಕು ಅನ್ನಿಸುತ್ತೆ." ಗೋಪಾಲ ಗೌಡರು ತಮ್ಮ ಸ್ವಂತ ಅನುಭವದಿಂದ ಈ ಮಾತನ್ನು ಹೇಳಿದ್ದರೋ ಏನೋ.



ಒಮ್ಮೆ ತೇಜಸ್ವಿಯವರು ನಮ್ಮ ಮನೆಗೆ ಬಂದಿದ್ದಾಗ ಲಂಕೇಶ್ ಮತ್ತು ಅವರ ನಡುವೆ ನಡೆದ ಒಂದು ಪುಟ್ಟ ಸಂಭಾಷಣೆ ಮಜಬೂತಾಗಿತ್ತು, ಇದ್ದಕ್ಕಿದ್ದಂತೆ ಲಂಕೇಶರು "ಆ ತಾರಾದೇವಿ ಹೇಗೆ?" ಎಂದು ಕೇಳಿದರು. ಅದಕ್ಕೆ ತೇಜಸ್ವಿ ಅವರು "ಚೆನ್ನಾಗಿದ್ದಾಳೆ" ಎಂದರು. ಆಗ ಲಂಕೇಶರು "ಅಲ್ರೀ, ಆಕೆ ರಾಜಕೀಯದಲ್ಲಿ ಹೇಗೆ ಅಂತ ನಾನು ಕೇಳಿದ್ದು" ಎಂದಾಗ ಇಬ್ಬರೂ ಜೋರಾಗಿ ನಕ್ಕಿದ್ದರು.

ತೇಜಸ್ವಿ ಅವರು ಮಾತನಾಡುತ್ತಿದ್ದರೆ ತುಂಬುಜೀವನವನ್ನು ಅನುಭವಿಸಿರುವ, ಕಲ್ಮಶ ಮನಸ್ಸಿಲ್ಲದ, ಯಾರ ಹಂಗೂ ಇಲ್ಲದವರಂತೆ ಭಾಸವಾಗುತ್ತಿತ್ತು, ಲಂಕೇಶ್ ಮತ್ತು ಅವರ ಇತರೆ ಮಿತ್ರರಂತೆ ತೇಜಸ್ವಿಯವರು ಹೆ... ಕುಡಿಯುತ್ತಿರಲಿಲ್ಲ, ಹೆಚ್ಚೆಂದರೆ ಒಂದು ಗ್ಲಾಸ್ ಬಿಯ... ಅನ್ನು ಅಪರೂಪಕ್ಕೆ ತೇಜಸ್ವಿ ಕುಡಿಯುತ್ತಾರೆ ಎಂ... ಲಂಕೇಶರು ನನಗೆ ಹೇಳಿದ್ದರು.

ಒಮ್ಮೆ ಲಂಕೇಶರು ನನ್ನನ್ನೂ, ನಮ್ಮ ಮಗ ಇಂದ್ರ... ನನ್ನೂ ಮೂಡಿಗೆರೆಯಲ್ಲಿರುವ ತೇಜಸ್ವಿ ಅವರ ತೋ... ಮನೆಗೆ ಕರೆದುಕೊಂಡು ಹೋದರು. ಅದಕ್ಕೆ ಮು... ನಾನ ತೇಜಸ್ವಿ ಅವರನ್ನು ಹಲವಾರು ಬಾರಿ ನೋಡಿದ್ದ... ದರೂ, ಅವರ ಬರಹಗಳನ್ನು ಓದಿದ್ದೆನಾದರೂ ನಾ... ಅವರನ್ನೆಂದೂ ಮಾತನಾಡಿಸಿರಲಿಲ್ಲ, ಅವರ ಖಾ... ಜೀವನದ ಬಗ್ಗೆ ಒಂದಿಷ್ಟೂ ನನಗೆ ಗೊತ್ತಿರಲಿಲ್ಲ.


ನಾವು ಅವರ ಮನೆಯನ್ನು ತಲುಪಿದಾಗ ತೇ... ಯವರು ನಮ್ಮನ್ನು ಖುಷಿಯಿಂದ ಬರಮಾಡಿಕೊಂಡ... ಬಾಗಿಲಲ್ಲೇ ನಿಂತು "ರಾಜೇಶ್, ರಾಜೇಶ್" ಅ... ಯಾರನ್ನೋ ಕರೆದರು. ತೇಜಸ್ವಿ ಅವರು ಯಾರ... ಕರೆಯುತ್ತಿರಬಹುದು ಎಂದು ನಾನು ಯೋಚಿಸುತ್ತಿ... ವಾಗಲೇ ಅವರ ಮಡದಿ ರಾಜೇಶ್ವರಿಯವರು ಬಂದ... ಆಗಲೇ ನನಗೆ ಗೊತ್ತಾಗಿದ್ದು ತೇಜಸ್ವಿ ತಮ್ಮ ಹೆಂಡತಿಯ... 'ರಾಜೇಶ್' ಎಂದು ಕರೆಯುತ್ತಾರೆಂದು. ನಾವು ಹೋ... ದಿನ ಅವರ ಇಬ್ಬರು ಹೆಣ್ಣುಮಕ್ಕಳು ಮನೆಯಲ್ಲಿರಲಿ...

ಅತಿಥಿ ಸತ್ಕಾರಕ್ಕೆಂದು ತೇಜಸ್ವಿ ಮೀನು ಹಿಡಿಯ... ಹೊರಟರು. ಒಂದು ಗಂಟೆಯ ನಂತರ ಅವರು ಒಂ... ಯಷ್ಟು ಉದ್ದವಿದ್ದ ಎರಡು ದೊಡ್ಡ ಮೀನುಗಳನ್ನು ಹೊ... ಬಂದರು. ಹಿತ್ತಲಿನಲ್ಲಿದ್ದ ಕಲ್ಲಿನ ಮೇಲೆ ತೇಜಸ್ವಿ ... ಮೀನುಗಳನ್ನು ಉಜ್ಜುತ್ತ ಕುಳಿತರು. ಅಷ್ಟರಲ್ಲಿ ರಾಜೇ... ಯವರು ಅಡುಗೆಗೆ ಬೇಕಿದ್ದ ಮಸಾಲೆಗಳನ್ನು ಸಿದ್ಧಮಾ... ಕೊಂಡಿದ್ದರು. ನಾನು ಏನಾದರೂ ಸಹಾಯ ಮಾ... ಎಂದು ಅವರ ಅಡುಗೆ ಮನೆಗೆ ಹೋದರೆ "ಏ... ಬೇಡ. ನೀವು ಕುಳಿತಿರಿ. ಅರ್ಧ ಗಂಟೆಯಲ್ಲಿ ಎಲ್ಲಾ ... ಆಗುತ್ತೆ" ಎಂದರು ರಾಜೇಶ್ವರಿಯವರು. ನಾನು ನಾನ್‌ವೆ... ತಿನ್ನುವುದಿಲ್ಲವಾದ್ದರಿಂದ ನನಗಾಗಿ ಬೇರೆ ಅಡುಗೆ ಮಾಡಿದ್ದ...

ತೇಜಸ್ವಿ ಮತ್ತು ರಾಜೇಶ್ವರಿ ಅವರು ಸ್ನೇಹಿತರ... ಮಾತನಾಡುತ್ತಿದ್ದರು. ಅವರೊಂದಿಗೆ ಏನು ಮಾತನಾಡು... ದೆಂದು ತೋಚದೆ ನಾನು ಸುಮ್ಮನಿದ್ದೆ ರಾಜೇಶ್ವರಿ ಎಲ್ಲರಿ... ಊಟ ಬಡಿಸಿದರು. ಲಂಕೇಶರು ಮೀನನ್ನು ತಿ... ರೀತಿಯನ್ನು ನೋಡಿ ತೇಜಸ್ವಿಯವರು "ನಿಮ್ಮಂಥವ... ನಾನ್‌ವೆಜ್ ಮಾಡುವುದೇ ದಂಡ ಕಣ್ರೀ. ನಿಮಗೆ ಮೀನ... ಹೇಗೆ ತಿನ್ನಬೇಕೆನ್ನುವುದೇ ಗೊತ್ತಿಲ್ಲ" ಎಂದು ಛೇಡಿಸಿದ...

ನಾವೆಲ್ಲ ಅವತ್ತು ರಾತ್ರಿ ಅವರ ಮನೆಯ... ಉಳಿದುಕೊಂಡು ಮಾರನೆ ಬೆಳಗ್ಗೆ ಅಲ್ಲಿಂದ ಶಿವಮೊ... ಹೊರಟೆವು. ಆದಾದ ನಂತರದ ದಿನಗಳಲ್ಲಿ ನಾನು ತೇ... ಅವರನ್ನಾಗಲಿ, ರಾಜೇಶ್ವರಿ ಅವರನ್ನಾಗಲಿ ಮತ್ತೆ ನೋಡಲೇ...

ನಾನು ಅಂಗಡಿ ತೆರೆದ ಮೇಲೆ ನನ್ನ ಸಮಯವ... ನನ್ನ ಅಂಗಡಿ ನೋಡಿಕೊಳ್ಳುವುದಕ್ಕೇ ಹೋಗುತ್ತಿ... ಆದ್ದರಿಂದ ಪುಸ್ತಕ ಓದುವುದೂ ಕಡಿಮೆ ಆಯಿತು. ಅ... ಹೊತ್ತಿಗೆ ನಾವು ಬನಶಂಕರಿಯ ಸ್ವಂತ ಮ... ಹೋಗಿದ್ದರಿಂದ ಲಂಕೇಶರ ಕಚೇರಿಯೇ ಅ... ಕಾರಸ್ಥಾನವಾಯಿತು. ಮನೆಗೆ ಅವರ ಗೆಳೆಯರು ಬರುವು... ನಿಂತು ಹೋಯಿತು. ಇದಾದ ನಂತರ ನಾನು ಲಂಕೇ... ಸ್ನೇಹಿತರನ್ನು, ಶಿಷ್ಯರನ್ನು ನೋಡುತ್ತಿದ್ದದ್ದು ಅ... ಹುಟ್ಟುಹಬ್ಬದ ಸಭೆಗಳಲ್ಲಿ ಮಾತ್ರ.



ಪ್ರಿಯ ಕಾಮಿನಿ,

ನನ್ನೆದೆಯ ದನಿಗೆ ಗೆಜ್ಜೆ ಕಟ್ಟಿ ಕುಣಿವ,
ಕುಣಿದು ಘಣಿ-ಘಣಿ ಘಣಿಲೆನಿಸುವ
ನಿನ್ನೆಜ್ಜೆ ಗುರುತ ಹಿಡಿವ ಸಾಹಸ ಕಣೆ

ನಿನ್ನೆದೆಯ ಕಂದರಕ್ಕಿಳಿವ, ಇಳಿದು
ನಿನ್ನ ಬಿಂಕ ಶೋಕ ಕುಲುಕ ಅರಿವ
ಆ ರೋಚಕತೆಯ ಮುಗಿಲಾಗಿ ತಬ್ಬುವ

ಬಯಕೆ ಕಣೆ
ಅಂತರಾಳಕ್ಕಿಸೆದು ಫಲ್ ಮಿಂಚುವ,
ಮಿಂಚಿ ಕಾರ್ಗತ್ತಲ ಮಳೆ ಸುರಿವ
ನಿನ್ನ ಶೂನ್ಯದೆಡೆ ಗಮಿಸುವ

ಒಂಟಿ ಹೃದಯದದಮ್ಯ ತುಡಿತ ಕಣೆ.
ಕಾಣದ ಗಾಳಿ ಗೂಳಿಯಾಡುವ ನಿನ್ನ
ಹಿಡಿದೆನೆಂಬ ಭ್ರಮೆಯಲ್ಲಿ ಹಿಡಿಯಲಾರದಾದೆ.
ಅಪಹಾಸ್ಯವೆ ಅಥವಾ ನಿನ-
ಗಿವೆಲ್ಲ ಮೊದ್ದು ಬಾಲೆಯ ಬೊಚ್ಚ ನುಡಿಗಳೆ?
ಆದರೆ ಒಮ್ಮೆ-
ಒಮ್ಮೆಯಾದರೂ ಕಾಣಿಸೆಯಾ
ಈ ತುಡಿತ ಕಾಮನೆಗಳಳಿಸಿ ಹೋಗುವ ಮುನ್ನ,
ನನ್ನೆಲ್ಲ ಅಂತಃಸ್ರೋತ ಆರಿಹೋಗುವ ಮುನ್ನ.

• ಟಿ.ಎ. ಶಶಿಕಲ

(ಮರುಮುದ್ರಣಗೊಂಡಿರುವ 'ಹಾಂಚಾಲಿ' ಪುಸ್ತಕದಿಂದ)

ೀಡಿ ಮ್ಯಾಲೆ ಸುಂಕ ಹಾಕ್ತನೆ ಅಂದ್ರೆ ಇವುನಾವ ಸೀಮ್ಯೊನ್ನ?

ದಾನಂದ ಗೌಡ ಮಂಡಿಸಿದ ಬಜೆಟ್ ವಿಷಯ ಕಾಳಮಾವ, ಯಾವ ಪದಾರ್ಥಗಳ ಮೇಲೆ ತೆರಿಗೆ ಣ್ಣಾನೆಂದು ಕೇಳುತ್ತಲೆ ಹಠಾತ್ತನೆ ಸಿಟ್ಟಾಗಿ,

ಬೀಡಿ ಮ್ಯಾಲೆ ಸುಂಕ ಹಾಕ್ತನೆ ಅಂದ್ರೆ ಇವುನ್ಯಾವ ಮನುಸುನ್ನ?" ಎಂದ.

ನಾನು ಅದ್ನೆ ಯೋಚನೆ ಮಾಡತಾಯಿದ್ನೆ, ಬೇಕಾದ್ರೆ

ಮಾಲು ಸೀ ಮ

ಟ್ಟೆಪುರಾಣ

■ ಬಿ. ಚಂದ್ರೇಗೌಡ

ಟ್ ಮ್ಯಾಲಾಕ್ಲಿ ತಡಕತ್ತರೆ. ಬೀಡಿ ಮ್ಯಾಲಾಕಿದ್ರೆ ಏಟ ಟೋಟುಬೀಡಿ ಸೇದನಪ್ಪ" ಎಂದ ಸೀರ.

ಅವುನು ಬೀಡಿ ಮೇಲೆ ಟ್ಯಾಕ್ಸಾಕಿರದ್ಕೆ ಒಂದು ಕಾರಣದೆ " ಎಂದ ವಾಟಿಸ್ಸೆ.

ಕಾರಣ ಇನ್ನೇನು ಬಂದತ್ಲ, ಜನ ಬೀಡಿ ಸೇದದ ಮಾಡಿಕತ್ತರೆ ಅಂತ ತಾನೆ."

ಅದಲ್ಲ, ಹೇಳಿಕೇಳಿ ಈ ದಕ್ಷಿಣ ಕನ್ನಡದ ರಣಿಗಳಿಗೆ ಸಾಬರ ಕಂಡ್ರಾಗದಿಲ್ಲ, ಅದರಲ್ಲೂ ಈ ನಂದ ಗೌಡ ದತ್ತಪೀಠದ ಭಕ್ತ, ಅವುನಿಂದ್ಲೆ ಂಗಳೂರಲ್ಲಿ ಬಾಬಾಬುಡನ್‌ಗಿರಿ ಪ್ರಾಬ್ಲಮ್ಮು ಾಗಿ ಹಿಂದೂ ಮುಸ್ಲಿಮರಿಗೆ ಬಿಗಡಾಯಿಸಿಗಂಡಿದ್ದು."

ಮುಂದಕೇಳೊ. ಕೋಮು ಸೌಹಾರ್ದಿಗಳ ತರ ಹಳಿದ್ನೆ ಬ್ಯಾಡ" ಎಂದ ಉಗ್ರಿ.

ಹೇಳ್ತಿನಿರೊ ಉಗ್ರಿ. ಬೀಡಿ ಕಟ್ಟೊ ಕಾರ್ಮಿಕರ ಹೆಚ್ಚಿನ ಜನ ಸಾಬರು. ಪಾಪ ಮನೇಲಿರೊ ಂಗುಸುರು ಬುರ್ಖಾ ತಗದು, ಅದನ್ನ ಗೂಟಕ್ಕೆ ನ್ಯಾತಾಕಿ ಾಗ್ಲು ಬೀಡಿ ಕಟ್ಟತರೆ. ಈ ಸದಾನಂದ ಬೀಡಿ ಟ್ಯಾಕ್ಸಾಕಿರದ್ರಿಂದ ಜನ ಬೀಡಿ ಸೇದದ ಕಡಿಮೆ ರೆ. ಆಗ ಸಾಬರು ಬಡತನಕೆ ಸಿಗಾಯ್ತರೆ. ಅದ ಡಿ ಬಿಜೆಪಿಗಳಿಗೆ ಹಾಲು ಅನ್ನ ಉಂಡಸ್ಟು ಧಾನಾಯ್ತದೆ. ಅದ್ಕೆ ಬೀಡಿ ಮ್ಯಾಲೆ ಟ್ಯಾಕ್ಸಾಕಿರದು."

ಅಂಥೋರೇನ್ನ ಅವುರು?" ಎಂದಳು ಜುಮ್ಮಿ.

ಊ ಕಣಕ್ಕ, ಬಿಜೆಪಿಗಳಿಗೆ ಬಡುವುರ ಕಂಡ್ರಾಗದಿಲ್ಲ, ತಿ ಕಂಡ್ರಾಗದಿಲ್ಲ, ಸಾಬರ ಕಂಡ್ರಾಗದಿಲ್ಲ, ಅದ್ಕೆ ಡು ಬರಗಾಲ ಬಂದು ಜನಗಳ್ಕಲ್ಲ ಗುಳೆ ಿತ್ತಾಯಿದ್ರು ಎಡೂರಪ್ಪನ ಟೀಮು ರೆಸಾರ್ಟನಲ್ಲಿತ್ತು. ಕುಕ್ಕೆ ನೀರೇ ಇಲ್ದಾಗ ಎಡೂರಪ್ಪನ ಹುಬ್ಬಳ್ಳಿ ವೇಶದಲ್ಲಿ ಎಡೂರಪ್ಪನ ಪ್ಲೆಕ್ಸಿಗೆ ಕೊಡಗಟ್ಲೆ ಾದ್ರು."

ನಿಜವೇನ್ನ ನೀನೇಳದು?"

ಸುಳ್ಳೇಳದ್ರಿಂದ ನನಿಗೇನು ಪ್ರಯೋಜನನಕ್ಕಾ."

"ಅಯ್ಯೋ ಇವುರು ಸುಳಿಹಾಳಾಗ ಹೋಗ. ಅಂಗಾಲುಯದಕ್ಕಿಂತ ಬಡುವುರ ಮಕ್ಕಳಿಗಾದ್ರು ಕೊಟ್ರೆ ಕುಡಕತಿದ್ವೊ."

"ಅದೂ ಬೇಡ ಕಣಕ್ಕ, ಅದೇ ಹಾಲಿಗೆಪ್ಪಾಕಿ, ಮಜ್ಜಿಗೆ ಮಾಡಿ, ಬಂದೋರಿಗೆ ಕೊಡಬವುದಿತ್ತು, ಇಂಥವ್ಯಾವು ಅವುರ ತಲಿಗೆ ಹೊಳಿಯದಿಲ್ಲ. ಇದೇ ಸದಾನಂದ ಗೌಡ ಮಠ, ಮಂದ್ರ, ಗುಡಿ, ಗುಂಡಾರಕೆ ಸಾವುರಾರು ಕೋಟಿ ಕೊಟ್ಟಿದ್ದನಂತೆ. ಅಂಗೆ ಕೊಡದಕಿಂತ ಜನತಾಮನೆ ತರ ಇರೊ ಪ್ರೈಮರಿ ಸ್ಕೂಲಿಗೆ ಕೊಟ್ಟು, ವಳ್ಳೆ ಕಟ್ಟಡ ಕಟ್ಟಸಬವುದಿತ್ತು, ಇಡೀ ಕರ್ನಾಟಕದಲ್ಲಿ ಒಂದೇ ಒಂದು ಗುಡಿಸುಲು ಇರಬಾರ್ದು ಅಂಗೆ ಮಾಡಬವುದಿತ್ತು, ಇಂಥವ್ಯಾವೂ ಬಿಜೆಪಿಗಳ ತಲಿಗೇ ಹ್ವಳಿಯದಿಲ್ಲ."

"ಎಡೂರಪ್ಪ ಬಜೆಟ್ ಮಾಡಿದ್ರೆ ಯಂಗಿರದು?" ಎಂದ ಸೀರ.

"ಇದರಪ್ಪನಂಗಿರದು ಚಿಗಪ್ಪ, ಎಡೂರಪ್ಪ, ಸದಾನಂದ ಒಂಥರಾ ಮಾವ ಬಾಮಕ್ಕಳಿದ್ದಂಗೆ. ಆದ್ರಿಂದ ಎಡೂರಪ್ಪ ಬಜೆಟ್ ಮಾಡಿದ್ರೆ ಇನ್ನೊಂದಿಷ್ಟು ಲಿಂಗಾಯತರ ಮಠಗಳಿಗೆ ಕಾಸುಕೊಡೋನು. ಅದುಬುಟ್ರೆ ಇದೇ ತರ ಬಜೆಟ್ ಮಾಡತಿದ್ದ. ಯಾಕೆ ಅಂದ್ರೆ ಬಿಜೆಪಿಗಳ್ಕಲ್ಲ ಒಂದೇ ತರ ಆಲೋಚನೆ ಮಾಡ್ತರೆ."

"ಅಂಗಾದ್ರೆ ಈ ಸದಾನಂದ ಗೌಡನ ಬಡಜೆಟ್ಟಿನಿಂದ ಏನೂ ಆಗದಿಲ್ಲವೇನ್ನ?" ಎಂದ ಕಾಳಮಾವ.

"ಅಂಗೇನಾರ ಆಗಂಗಿದ್ರೆ ಎಡೂರಪ್ಪನ ಕೃಷಿ ಬಜೆಟ್ ಬಂದ ಮ್ಯಾಲೆ ರೈತರು ಸುಯ್‌ಸೈಡ್ ಮಾಡಿಕಬಾರದಿತ್ತಲ್ಲವೆ ದೊಡಪ್ಪ ಕಾಲದಿಂದ್ಲೂ ಬಜೆಟ್ ಬೇರೆ, ನಮ್ಮ ಜೀವನವೇ ಬ್ಯಾರೆ. ಆದ್ರೆ ಸರಕಾರಿ ಜನ ಮಾತ್ರ ವಳ್ಳೆ ಬೆನಿಫಿಟ್ ವಡದ್ರು."

"ಅವುರಿಗೇನು ಕೊಟ್ಟಾ?"

"ಅವುರ ಸಂಬಳನ್ನಲ್ಲ ಜಾಸ್ತಿ ಮಾಡ್ಯವನೆ. ಆದ್ರಿಂದ ಸಾಮಾಜಿಕವಾಗಿ ಸರಕಾರಿ ಜನಗಳ ದವುರಿ ರೇಟು ಜಾಸ್ತಿಯಾಯ್ತದೆ."

"ಬಡ್ಡಿ ಇಲ್ದೆ ಒಂದು ಲಕ್ಷ ರೂಪಾಯಿ ಸಾಲ ಕೊಡ್ತರಲ್ಲೊ ರೈತರಿಗೇ. ಅದೂ ಬೆನಿಫಿಟ್ ಅಲವೆ?" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಸಾಲ ತಗಂಡಾಗ ತೀರಸೊ ಪ್ಲಾನು ಇರಬೇಕು. ಇದೇ ನಮ್ಮೂರಲ್ಲಿ ಮೈಸೂರ ಬ್ಯಾಂಕಿಗೋಗಿ ಐವತ್ತು ಸವುರ ಸಾಲ ತಗಂಡ್ರಲ್ಲಾ, ಎಷ್ಟು ಜನ ತಿರಗ ಕಟ್ಟಿದ್ದರೂ, ಕೇಳು."

ಹೆದರಬ್ಯಾಡ" ಎಂದು ವಾಟಿಸ್ಸೆ ನಗಾಡಿದ. ಚಿಕ್ಕಣ್ಣನ ಮುಖದಲ್ಲೂ ಗೆಲುವು ಕಾಣಿಸಿತು.

"ರೈತರಿಗೆ ಇನ್ನೇನು ಕೊಟ್ಟಿದ್ನಲ್ಲ?" ಎಂದ ಕಾಳಮಾವ.

"ಹತ್ತೆಚಪಿ ಮೋಟ್ರಿಗೆ ಕರಂಟು ಫ್ರೀ ದೊಡಪ್ಪ"

"ಅಲ್ಲಾ ಕಂಡ್ನ, ಹಳ್ಳಿಕಡಿಕೇ ಕರಂಟೇ ಬರದಿಲ್ಲ, ಬಂದ್ರು ಯಾವಾಗ್ಲೊ ಬಂದು ಯಾವಾಗ್ಲೊ ಹೋಯ್ತದೆ. ಅಂತದ್ರಲ್ಲಿ ಬಿಟ್ಟಿಕೊಡ್ತನೆ ಅಂದ್ರೆ ಅದಕೇನಾರ ಅರ್ಥಿದ್ದತ್ತ"


"ಕರಂಟೇ ಇಲ್ದೆಯಿರುವಾಗ ಬಿಟ್ಟಿ ಕೊಡ್ತನೆ ಅಂದ್ರೆ ಇವುನ್ನಂಥ ಸುಳ್ಳಪ್ಪ ಇನ್ನಾರು ಇಲ್ಲ ಅಲವೆ. ಅದ್ಕೆ ರೈತರಿಗೆ ಏನಾರ ಕೊಡುವಾಗ ರೈತ ಸಂಘದೋರ್ನೆ ಕುಂದ್ರಿಸಿಗಂಡು ಮಾತಾಡಬೇಕು. ಇಲ್ಲ ಅಂದ್ರೆ ಅಧಿಕಾರಿಗಳು ಕೊಟ್ಟಿದ್ದ ಓದಿ ನೋಡಿ ಇದೇ ಪರಮಾಶಿ ಬಜೆಟ್ ಅನ್ನಬೇಕಾಯ್ತದೆ" ಎಂದ ಉಗ್ರಿ.

"ಆದ್ರು ಎಡೂರಪ್ಪ ಅಷ್ಟೊಂದು ಕಿರುಕುಳ ಕೊಟ್ರು, ಕೂಡ ಏನೋ ಮಾಡಿದನಲ್ಲ ಹೇಳು. ಆದ್ರು ಬೀಡಿ ಮ್ಯಾಗಲ ಸುಂಕವ ಏನಾರ ಮಾಡಿ ತಗಸಬೇಕು ಕಂಡ್ನ" ಎಂದ ಸೀರ.

"ಸದಾನಂದ ಎಡೂರಪ್ಪನಂತ ಹಠವಾದಿನೂ ಅಲ್ಲ, ಕೃಟ್ಟ ಮನುಸನೂ ಅಲ್ಲ. ಚಿಗಪ್ಪ, ನೀವು ಬೀಡಿ ಸೇದೋರ್ನಲ್ಲ ಸೇರಿ ಒಂದು ಸನ್ಮಾನ ಮಾಡಿ, ಒಂದು ಬಂಡ್ಲು ಗಣೇಶ್ ಬೀಡಿ ಕೊಟ್ಟು, ನಿಮ್ಮ ಬೇಡಿಕೆ ಮುಂದಿಡಿ. ಕೂಡ್ಲೆ ಅವುನು ಟ್ಯಾಕ್ಸ್ ತಗದಾಕ್ತನೆ."

"ಓಹೊ, ಅದು ಬ್ಯಾರೆ ಮಾಡಕ್ಕೊಗು ಕೇವಿಲ್ದೆಯಾ."

"ಇಲ್ಲ ಅಂದ್ರೆ, ಬೀಡಿ ಸೇದೊ ಎಮ್ಮೆಲ್ಲೆಗಳಿಂದ ಇನ್‌ಫ್ಲುಯನ್ಸ್ ಮಾಡಸಬೇಕು. ಈಗ ಯಾವ ಎಮ್ಮೆಲ್ಲೆನೂ ಬೀಡಿನೆ ಸೇದದಿಲ್ಲ, ಆಗಾಗಿದ್ರೆ ಬಂಡಿಸಿದ್ದೇಗೌಡ, ಚಿಗರಿಗೌಡ, ಭೈರೇಗೌಡ ಇವುರ್ನಲ್ಲ ಸೇದೋರು. ಇರ್ಲಿ ಚಿಗಪ್ಪ ನಾನೇ ಫೋನು ಮಾಡಿ ರಿಕ್ವೆಸ್ಟ್ ಮಾಡ್ತಿನಿ."



"ಸಾಬರಂಗೇ ಅನ್ನು" ಎಂದ ಸೀರ.

"ಪರವಾಗಿಲ್ಲ, ನಮ್ಮ ಚಿಗಪ್ಪನು ಬುದ್ದಿಲಿ ಡೆವುಲಪ್ ಆಗ್ಯವುನೆ. ನೀನೇಳದು ನಿಜ ಚಿಗಪ್ಪ. ಸಾಮಾನ್ಯವಾಗಿ ಜಾತಿವಾದಿಗಳು ಒಂದೇ ತರ ಥಿಂಕ್ ಮಾಡ್ತರೆ. ಇಷ್ಟು ದಿನಕೆ ಒಬ್ಬನೇ ಒಬ್ಬ ಬಿಜೆಪಿ ಬೇರೆ ತರ ಮಾತಾಡಿಲ್ಲ, ಅವುರ ಕಾರ್ಯಕ್ರಮಗಳೂ ಅಂಗೆಯ. ಅಂಥೋರು ಬಜೆಟ್ ಮಾಡಿದ್ರೆ ಯಂಗಿರತದೊ ಅಂಗೆ ಇರತದೆ. ಈ ಸದಾನಂದನ ಬಜೆಟ್ಟೊ ಕೂಡ ಏನೂ ಮಾಡದಿಲ್ಲ."

"ಈ ಚಿಕ್ಕಣ್ಣನೆ ಮಗಳ ಮದುವೆ ಮಾಡಿದನಪ್ಪ, ಅಲವೇನೋ" ಎಂದು ಜುಮ್ಮಿ ನಕ್ಕಳು.

"ಏನು ಪುಗಸಟ್ಟೆ ಕೊಟ್ರೆ. ಜಮೀನಿನ ಕಾತೆಪಟ್ಟೆನ್ಯಲ್ಲ ಮಡಿಕಂಡು ಕೊಟ್ಟವುರೆ" ಎಂದ ಚಿಕ್ಕಣ್ಣ.

"ಅದೇನು ಉಪ್ಪಾಯ್ಕಂಡು ನೆಕ್ತರಾ. ನೀನು ಸಾಲ ಕಟ್ಟಗಂಟ ಮಡಿಕಂಡಿರತರೆ ಅಷ್ಟೆ."

"ಹೆದರಬ್ಯಾಡ ಚಿಕ್ಕಣ್ಣ, ಯಾವನಾರ ಕುಮಾರಸ್ವಾಮಿ ಅಂಥೋನು ಮುಖ್ಯಮಂತ್ರಿಯಾದ್ರೆ ಮನ್ನಾ ಮಾಡ್ತನೆ.

"ನರಿ ಊಸು ಗಟ್ಟಿಕೇರ್ಕತೆ. ನಿನ್ನ ಮಾತ ಕೇಳ್ತನೇನ್ನ ಅವುನು?"

"ಇಲ್ಲ ಅಂದ್ರೆ ದೇವೇಗೌಡ್ರು ಕೈಲೇ ಹೇಳುಸ್ತಿನಿ."

"ದ್ಯಾವೇಗೌಡ್ರು ಹೇಳಿದ್ರೆ ಸುಂಕ ತಗಿತನೆ ಬುಡು. ಅವುನ ಮಾತ ತಗಿಯದಿಲ್ಲ" ಎಂದ ಕಾಳಮಾವ.

"ನೋಡು ಅವುರ ದೇವರ ಸತ್ಯ ಅವುರಿಗೇ ಗೊತ್ತು" ಎಂದು ವಾಟಿಸ್ಸೆ ಶಿಳ್ಳೆ ಹೊಡೆಯುತ್ತಾ ಹೊರಟ.

❖

ಮರ್ಶಿಸುವ ಗಮ್ಮತ್ತು ▶▶▶

ಏನ್ ತಮಾಷೆ ನೋಡಿ. ಇಂಗ್ಲಿಷ್ ಮರ್ಶಕನೊಬ್ಬ ನಾಟಕ ನೋಡುವಾಗ ನಾಟಕಕ್ಕೆ ನ್ನುಮಾಡಿ ಕೂತು ತೂಕಡಿಸತೊಡಗಿದ. ನೊಬ್ಬ 'ಪ್ರೇಕ್ಷಕರು ಹೊರಗೆ ಹೋಗಲು ಹೆಚ್ಚು ಯ ಟಿಕೆಟ್ ಇಟ್ಟಿದ್ದರೆ ಒಳ್ಳೇ ಕಲೆಕ್ಷನ್ ುತ್ತಿತ್ತು' ಎಂದು ಗೇಲಿ ಮಾಡಿದ. ನಮ್ಮಲ್ಲಿ ಮರ್ಶೆ ಎಂದರೆ ಯಾರಿಗೂ ಅರ್ಥವಾಗದ ರಾಣ; ವಿಮರ್ಶಿಸುವವ ಪಾರಿಭಾಷಿಕ ರ್ಗಣಗಳಲ್ಲಿ ಮುಳುಗಿದ ಕೀಟ. ಹೀಗಾಗಿ ಲ್ಲಿ ಯಾರೂ ಸಾಹಿತ್ಯ ವಿಮರ್ಶೆಯನ್ನಾಗಲೀ, ಟಕ ವಿಮರ್ಶೆಯನ್ನಾಗಲಿ ಓದುವುದಿಲ್ಲ. ಕೆನೆತ್ ನನ್ ಎಂಬ ಇಂಗ್ಲಿಷ್ ವಿಮರ್ಶಕ ಎಷ್ಟು ಲವಿಕೆಯಿಂದ, ತನ್ನೆಲ್ಲ ಬರೆವ ುಗಾರಿಕೆಯಿಂದ ಬರೆಯುತ್ತಿದ್ದನೆಂದರೆ ಅದನ್ನು ದುವುದೇ ಒಂದು ಆನಂದ. ಈ ನಾಟಕ ನ್ಯಾಗಿದೆ, ಇದನ್ನು ನೋಡುವ ಬದಲು ಮೂಂಗೆ ಹೋದರೆ ನಿಮ್ಮ ಜೀವನ ರ್ಥ... ಎಂಬ ರೀತಿಯಲ್ಲಿ ಬರೆದುಬಿಟ್ಟನೆಂದರೆ ಟಕಕ್ಕೆ ಸ್ಪಟಿಂಡ ಯಶಸ್ಸು ಕಟ್ಟಿಟ್ಟದ್ದು ಬಾಸ್, ಪೆಸ್ಟರ್‌ಗಳೆಲ್ಲ ನಾಟಕಕಾರರಾಗಿದ್ದು



ಹಾಗೇ; ಜಗದ್ವಿಖ್ಯಾತ ಗಿಲ್‌ಗುಡ್, ಲಾರೆನ್ಸ್ ಆಲಿವಿಯರ್‌ಗಳು ಹೊಸ ನಾಟಕಗಳಲ್ಲಿ ಪಾರ್ಟ್ ಮಾಡಲು ಕಾತರರಾದದ್ದು ಕೂಡ. ಮೊನ್ನೆ ನಮ್ಮ ಲೇಖಕಿಯೊಬ್ಬರು 'ಪುರುಷೋತ್ತಮ' ಎಂಬ ಕಾದಂಬರಿಯ ಬಗ್ಗೆ ಮಾತನಾಡುತ್ತಿದ್ದರು. ಅವರ ಪಕ್ಕದ ಮನೆಯವರೊಬ್ಬರು ಅವರಲ್ಲಿಗೆ ಬಂದು ಹಗಲೆಲ್ಲ ಪುಸ್ತಕಗಳಿಗಾಗಿ ಪೀಡಿಸುತ್ತಿದ್ದರಂತೆ; ಇವರು 'ಪುರುಷೋತ್ತಮ ಚೆನ್ನಾಗಿದೆ ಓದಿ' ಎಂದು ಕೊಟ್ಟರಂತೆ. ಆರು ದಿನಗಳಾಯಿತು, ಏಳು ದಿನಗಳಾಯಿತು, ಎರಡು ವಾರ ಆಯಿತು, ಅವರು ಪತ್ತೆಯೇ ಇಲ್ಲ, ಮೂರು ವಾರದ ತರುವಾಯ ಅವರು ತಲೆಗೆ ನೂರಾರು ಪಟ್ಟಿ ಕಟ್ಟಿಕೊಂಡು ಪುಸ್ತಕದೊಂದಿಗೆ ಹೊರಗೆ ಬಂದು ಕಂಪಿಸುತ್ತಾ 'ದಯವಿಟ್ಟು ಒಪ್ಪಿಸಿಕೊಳ್ಳಿ' ಎಂದು ಕೊಟ್ಟರಂತೆ. 'ಓದಿದಿರಾ' ಎಂದು ಕೇಳಲು ಧೈರ್ಯ ಸಾಲದೆ ಇವರು ಅಡಿಗೆ ಮನೆಗೆ ಹೋಗಿ ಅವಿತುಕೊಂಡರಂತೆ.



'ಅದು ವಿಮರ್ಶೆ ಮಾಡುವ ಒಂದು ಬಗೆ' ಎಂದು ಅದನ್ನು ನಗುತ್ತಾ ವರ್ಣಿಸಿದ ನಾನು 'ನೀವು ಈಗ ವಿಮರ್ಶೆಯ ತರಬೇತಿ ಪಡೆದಿದ್ದೀರಿ. ಈ ಪುಸ್ತಕ ಓದಿ ವಿಮರ್ಶಿಸಿ' ಎಂದು ಭೈರಪ್ಪನವರ ಇತ್ತೀಚಿನ 'ತಂತು' ಕಾದಂಬರಿ ಕೊಟ್ಟೆ. ಅವರು ಮಲೇರಿಯಾ ಬಂದವರಂತೆ ನಡುಗುತ್ತಾ ಅದನ್ನು ಅಲ್ಲೇ ಬಿಟ್ಟು ಮಂಗಮಾಯವಾದರು.

-ಫೆಬ್ರವರಿ 26, 1997

ಕೆರೆಯ ನೀರನು ಕೆರೆಗೆ ಚೆಲ್ಲಿ

ಹೇಳಿ ಕೇಳಿ ಎಚ್.ಡಿ. ದೇವೇಗೌಡರು ಮಣ್ಣಿನ ಮಗ. ಇನ್ನು ಕುಮಾರಸ್ವಾಮಿ ಅಂತೂ ಸರಿಯೇ ಸರಿ. ಪಾರದರ್ಶಕತೆ, ಭ್ರಷ್ಟಾಚಾರ ಹಾಳುಮೂಳು ಅಂತ ಗಂಟೆ ಗಟ್ಟಲೆ ನಾಲಿಗೆ ಹರಿಬಿಡುವವರು. ಇಂತಹ ಐನಾತಿ ಮಣ್ಣಿನ ಮಗ, ಅದೇ ಮಣ್ಣಿನ ಮೊಮ್ಮಗ, ಮಣ್ಣು ಅಂದರೆ ಅಸಹ್ಯ ಎಂಬಂತೆ ಮೂಗೇರಿಸುವ ರಾಜೀವ ಚಂದ್ರಶೇಖರ್‌ಗೆ ರಾಜ್ಯಸಭೆ ಚುನಾವಣೇಲಿ ಬೆನ್ನೆಲುಬಾಗಿ ನಿಂತವರಲ್ಲ ಇದೇನು ಹವಾಡವಯ್ಯಾ ಎಂದೆಲ್ಲ ಯೋಚಿಸುತ್ತಾ ಬರುತ್ತಿದ್ದೆ. ದಾರಿಯಲ್ಲಿ ಜಾತ್ಯತೀತ ಜನತಾದಳದ ಶಾಸಕರೊಬ್ಬರು ಎದುರಾದರು. ಮುಖ ಬಾಡಿತ್ತು. ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಠೇವಣಿ ಕಳೆದುಕೊಂಡಿರುವುದನ್ನು ಮನಸ್ಸಿಗೆ ವಿಪರೀತ ಹಚ್ಚಿಕೊಂಡಿರಬೇಕು. ಅದಕ್ಕೆ ಹೀಗೆ ಸಪ್ಪಗಿದ್ದಾರೆ ಎಂದು ಭಾವಿಸಿದೆ. ಅದನ್ನೇ ಅವರಿಗೆ ಹೇಳುತ್ತಾ 'ಬಿಡಿ ಇವರೇ ಸೋಲು ಗೆಲುವು ಎಲ್ಲಾ ಮಾಮೂಲಿ' ಅಂದೆ. 'ಅದಕ್ಕಲ್ಲ ಕಣ್ರಿ. ಅದು ಗೊತ್ತಿದ್ದೇಯ' ಅಂದರು ಅವರು. 'ಇನ್ನು ಯಾವುದಕ್ರೀ ಹೀಗಿದ್ದೀರ' ಅಂತ ಕೇಳಿದೆ. 'ರಾಜ್ಯಸಭೆ ಚುನಾವಣೆಗೇರಿ' ಅಂದರು! ಅರೆ ಇದೇನಪ್ಪ ಇದು ಹೊಸ ಸಮಾಚಾರ. ಸಾಮಾನ್ಯವಾಗಿ ಆ ಚುನಾವಣೆಗಾಗಿಯೇ ಶಾಸಕರು ರಣಹದ್ದಿನ ತರಹ ಕಾಯುತ್ತಾ ಕುಂತಿರುತ್ತಾರೆ. ಅಲ್ಲಿನ ಸದಸ್ಯತ್ವದ ರಖಮ್ಮೇ ಅಂತಹದ್ದು. ಶಾಸಕರು ತಮ್ಮ ಓಟನ್ನ ಹರಾಜಿಗಿಡುತ್ತಾರೆ. ಹೆಚ್ಚಿಗೆ ಬಿಡ್ ಮಾಡಿದವನಿಗೆ ಕೊಡುತ್ತಾರೆ. ಇದು ಸಂಪ್ರದಾಯ. ಹೀಗಿರುವಾಗ ಬಂಪರ್ ಬೆಳೆ ಬಂದಿದೆ, ಒಳ್ಳೆ ರೇಟೂ ಇದೆ ಅಂತ ಖುಷಿ ಪಡೋದು ಬಿಟ್ಟು ಹೀಗೆ ಅಳುಮುಂಜಿ ತರಹ ಮುಖ ಮಾಡಿಕೊಂಡಿರುವುದು ಯಾಕೆ ಅನ್ನುವುದು ತಿಳಿಯಲಿಲ್ಲ. ಅದನ್ನೇ ಅವರಿಗೆ ವಿವರಿಸಿದೆ. 'ಹರಾಜಾಗುತ್ತೆ ಸರೀರಿ. ಆದರೇನು ಮಾಡುತ್ತೀರಿ. ದೇವೇಗೌಡ ಆವಾಗಲೇ ನಮ್ಮ ಓಟನ್ನೆಲ್ಲ ಹೋಲ್‌ಸೇಲಾಗಿ ಮಾರ್‍ಕಂಡು ಕುಂತವ್ನೆ. ಅವನತ್ರ ಏನು ಕಿತ್ಕಂತೀರಿ' ಅಂತ ಬೇಸರಿಸಿಕೊಂಡರು. ದನಿಯಲ್ಲಿ ದುಃಖ ಮಡುಗಟ್ಟಿತ್ತು, ಭ್ರಷ್ಟಾಚಾರ ವಿಕೇಂದ್ರಿಕರಣ ಆಗದೆ ಕೇಂದ್ರೀಕರಣ ಆಗಿರೋದು ಅವರಿಗೆ ನೋವು ತಂದಿತ್ತು, ಅದರ ಸಂಕಟ ನೋಡಿ ನನಗೂ ಅಯ್ಯೋ ಪಾಪ ಅನ್ನಿಸಿತು. ಶ್ರೀಮಂತ ಮುಖಗಳೇ ರಾಜ್ಯಸಭೇಲಿ ರಾರಾಜಿಸುವುದಕ್ಕೆ ಮಣ್ಣಿನ ಮಕ್ಕಳ ಕೊಡುಗೆಯೂ ಇದೆ ಅನ್ನೋದು ಅರ್ಥ ಆಯಿತು!

ನಾನೆಲ್ಲೋ ಜಾತ್ಯತೀತ ಜನತಾದಳದಲ್ಲಿ ಮಾತ್ರ ಹೀಗೆಲ್ಲ ನಡೆಯುವುದಕ್ಕೆ ಸಾಧ್ಯ ಅಂದುಕೊಂಡಿದ್ದೆ. ಅದು ಹಾಗಲ್ಲವಂತೆ. ತತ್ವ ಸಿದ್ಧಾಂತಗಳ ಶಂಖ ಊದೋ ಭಾಜಪದ್ದೂ ಅದೇ ಕತೆಯಂತೆ! 'ಸರಿಯಾಗಿ' ನೋಡಿಕೊಂಡವರ ಬೆನ್ನಿಗೆ ಗಡ್ಕರಿ ಸಾಹೇಬರು ನಿಲ್ಲುತ್ತಾರಂತೆ. ಪಕ್ಷದಲ್ಲಿ ಅಭ್ಯರ್ಥಿ ಗೆಲ್ಲಿಸುವಷ್ಟು ಮತಗಳಿದ್ದರೇ ಒಂದು ರೇಟಂತೆ. ಒಂದು ವೇಳೆ ಅಷ್ಟು ಇಲ್ಲದಿದ್ದರೆ 'ಸ್ವತಂತ್ರ ಅಭ್ಯರ್ಥಿಯಾಗಿ ನಿಂತುಕೊಳ್ಳಿ. ನಮ್ಮ ಪಕ್ಷದಲ್ಲಿ ಇಷ್ಟು ಓಟವೆ. ಅಷ್ಟೂ ನಿಮಗೆ. ಉಳಿದಿದ್ದ ಮೇನೇಜ್ ಮಾಡಿಕೊಳ್ಳಿ. ಇಷ್ಟು ಆಗುತ್ತೆ' ಅಂತ ಖಂಡತುಂಡವಾಗಿ ಹೇಳ್ತಾರಂತೆ. ಸಮ್ಮತಿಸಿದವರ ಹತ್ತಿರ ಒಪ್ಪಿಗೆ ಮಾಡಿಕೊಳ್ಳುತ್ತಾರಂತೆ.


ಗುರುತು ಪರಿಚಯ ಇಲ್ಲದ, ಎಲ್ಲಿಂದಲೋ ಬಂದುಬಿದ್ದ ಅಭ್ಯರ್ಥಿಗಳ ವಿರುದ್ಧ ಕೆಲವು ಶಾಸಕರು ಬಂಡೇಳುವುದೂ ಉಂಟಂತೆ. 'ಯಾಕ್ರಿ ಇವನಿಗೆ ಓಟು ಹಾಕಬೇಕು' ಅಂತ ಕೇಳಿದರೆ ಗಡ್ಕರಿ ಸಾಹೇಬರು 'ಇವನು ಯುವಕ, ವಿದ್ಯಾವಂತ, ಬುದ್ಧಿವಂತ' ಅಂತ ಏನೇನೋ ಸಬೂಬು ಹೇಳ್ತಾರಂತೆ. 'ಅದು ಸರೀರಿ. ಪಕ್ಷಕ್ಕೆ, ದೇಶಕ್ಕೆ ಅವನ ಸೇವೆ ಏನ್ರಿ' ಅಂದರೆ 'ಇವರು ವಿದೇಶದಲ್ಲಿದ್ದರು. ಪರೋಕ್ಷವಾಗಿ ಸಂಘ ಪರಿವಾರಕ್ಕೆ ಸಹಾಯ ಮಾಡುತ್ತಿದ್ದರು' ಅಂತಾರಂತೆ. 'ಅದೂಅಲ್ಲದೆ ಇವರು ಪಕ್ಷಕ್ಕೆ ಹಣ ಸಂಗ್ರಹಿಸಿದ್ದಾರೆ' ಅಂತಾನೂ ಸೇರಿಸುತ್ತಾರಂತೆ. 'ಯಾರು ಯಾರಿಂದ ಎಷ್ಟು ಎಷ್ಟು ಹಣ ಸಂಗ್ರಹ ಮಾಡಿದಾರೆ' ಅಂತ ಲೆಕ್ಕ ಕೇಳಿದರೆ 'ಅದೆಲ್ಲ ಬಹಿರಂಗಪಡಿಸೋಕೆ ಆಗಲ್ಲರಿ. ನಿಮಗ್ಯಾಕೆ ಅವೆಲ್ಲ, ಓಟಾಕಿ ಅಷ್ಟೆ' ಅಂತ ಧಮಕೀನೂ ಹಾಕ್ತಾರಂತೆ.



ಇಂತಹ ಗಡ್ಕರಿ ಕೃಪಾಪೋಷಿತ ಪಕ್ಷೇತರ ಅಭ್ಯರ್ಥಿಯೊಬ್ಬ ಅಮೆರಿಕದಿಂದ ನೇರವಾಗಿ ಜಾರ್ಖಂಡ್‌ನಲ್ಲಿ ಇಳಿದನಂತೆ. ಅಲ್ಲಿನ ಶಾಸಕರು ನಮ್ಮವರಂತೆ ದಡ್ಡರಲ್ಲವಂತೆ. ಇದು ಕರೆಯೋ ಹಸು ಎಂದು ತಿಳೀತಿದ್ದಂತೆ ಹತ್ತಾರು ಜನ ಮುತ್ತಿಗೆ ಹಾಕಿದರಂತೆ. ನಾಮಪತ್ರಾನೂ ಹಾಕಿಸಿದರಂತೆ. ಅಭ್ಯರ್ಥಿ ಅನುಮೋದನೆಗೆ ಇಂತಿಷ್ಟು ಅಂತ ಹಣಾನೂ ಕಿತ್ತರಂತೆ. ಒಂದು ಓಟಿಗಿಷ್ಟು ಅಂತ ಅದರ ರೇಟನ್ನೂ ಫಿಕ್ಸ್ ಮಾಡಿಕೊಂಡರಂತೆ. ಅದನ್ನೂ ಗೆಬರಿಕೊಂಡರಂತೆ. ಇರ್ಲಿ ಎಷ್ಟಾದರೂ ಕರೆದುಕೊಳ್ಳಲಿ. ಇದರ ಸಾವಿರಪಟ್ಟು ಮೇವು ಸಿಗುತ್ತೆ ರಾಜ್ಯಸಭೆ ಸದಸ್ಯ ಅಂತ ಒಂದಾದರೆ ಅಂತಾವ ಆ ಹಸುವೂ ಧಾರಾಳವಾಗೇ ಸೋರಬಿಟ್ಟಿತಂತೆ.

ಅಕಟಕಟಾ ಈ ಹಸುವಿನ ದುರ್ದೈವಕೇನೆಂಬೆನು! ಯಶವಂತ ಸಿಂಹ ಎಂಬ ಹಳೆ ಹುಲಿ 'ಹಲವಾರು ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನು ಕಡೆಗಣಿಸಿ ಈ ಅಪರಿಚಿತನಿಗೆ ಹೇಗೆ ಬೆಂಬಲಿಸುತ್ತಿದ್ದೀರಿ? ಹಣದ ಚೀಲ ಗಡ್ಕರಿ ಮನೆ ಸೇರಿದೆ' ಎಂದೆಲ್ಲ ಘರ್ಜಿಸಬೇಕೆ! ಗಡ್ಕರಿ ಸಾಹೇಬರು ಹಣ ನುಂಗೋದು ಯಾರಿಗೂ ಗೊತ್ತಿರಲಿಲ್ಲ ಅಂತಲ್ಲ, ಆದರೆ ಯಾರೂ ಬಹಿರಂಗವಾಗಿ ಹೇಳಿರಲಿಲ್ಲ ಅಷ್ಟೆ. ಇದ ಕೇಳಿ ಗಡ್ಕರಿ ಸಾಹೇಬರು ಬೆವೆತುಹೋದರಂತೆ. ವಿರೋಧ ಹೆಚ್ಚಾಗಲಾಗಿ ಅಮೆರಿಕಾ ಕ್ಯಾಂಡಿಡೇಟು ನಾಮಪತ್ರ ಹಿಂಪಡೆಯಬೇಕಾಯಿತಂತೆ.

ಎಚ್.ಎಲ್. ಕೇಶವಮೂರ್ತಿ



ಅಣಕ

ಅಲ್ಲ ಈ ಅಮೆರಿಕನ್ ಅಭ್ಯರ್ಥಿ ಈಗಾಗಲೇ ಕೊ ದ್ದನಲ್ಲ ಆ ಹಣ ಆದರ ಕತೆ ಏನು ಅಂತಾದ... ಕೊಟ್ಟೋ ಕೋಡಂಗಿ ಈಸಿಕಂಡೋನು ಈರಭದ್ರ ಅನ್ನೊ ಹಂಗಾಯ್ತದ

ಬ್ಲೂಫಿಲಂ ವಿವೇಕಾನಂದ ಆದ ಪವಾಡ

ಆ ಕಾಮದೇವ ಅನ್ನುವವನು ಭಾರತೀಯ ಜನ ಪಕ್ಷದ ಶಾಸಕರುಗಳಿಗೇ ಯಾಕೆ ಹೀಗೆ ಕಾಟ ಕೊಡುತ್ತಿದ್ದಾನೆ ಗೊತ್ತಿಲ್ಲ, ನಾಯಿಗಳಿಗೆ ಬೆದೆ ಸೀಸನ್ನು ಅಂತ ಇದೆಯ ಇವರಿಗೂ ಹಾಗೆ ಅಧಿವೇಶನದ ಕಾಲ ಬೆದೆ ಸೀಸ ಅನ್ನುವುದು ತಿಳಿಯದು. ಅಶ್ಲೀಲ ಚಿತ್ರ ನೋಡಬೇ ಅನ್ನೊ ತಹತಹ ತಂದು ಇಟ್ಟುಬಿಟ್ಟಿದ್ದಾನೆ ಆ ಕಾಮದೇ ಈಗ ಏನೋ ಮೊಬೈಲು, ಐಪ್ಯಾಡು ಗೀಯ್‌ಪ್ಯಾ ಅಂತ ಏನೇನೋ ಬಂದವಂತೆ. ಅದರಲ್ಲೇ ಎಲ್ಲಾ ನೋಡೋ ಅನುಕೂಲ ಇದ್ದತ್ತಂತೆ. ಮನೆಯಲ್ಲಿ ನೋಡೋ ಅಂದರೆ ಹೆಂಡತೀರೋ ಗರತಿ ಗಂಗಮ್ಮದಿರು. ಅವರಿಗೇ ದರೂ ಇದು ತಿಳಿದರೆ ಉಗಿದು ಉಪ್ಪಿನಕಾಯಿ ಹಾಕ ಮಕ್ಕಳುಮರಿ ಇದ್ದರಂತೂ ಅವು ಹಿರಿಯರಿಗಿಂತ ಚೆನ್ ಇವನ್ನೆಲ್ಲ ಬಳಸೋದು ಕಲ್ತಿರ್ತವೆ. ಅಪ್ಪನಿಗಿಂತ ಮೊದ ಅವೇ ಇಂತಹವನ್ನ ನೋಡ್ತಿರ್ತವೆ. ಹೆಂಡತಿಗೆ ಹೇಳಿದ ಹ ಅವರ್‍ನ ಸುಳ್ಳು ಹೇಳಿ ನಂಬಿಸೋಕೆ ಆಗಲ್ಲ, ಅವರ ಹ ಅವ್ರೂ ಹಾಳಾಗಬಾರದು ನೋಡಿ. ತಾನು ಸುಸಂಸ್ ಸಂಭಾವಿತ ವ್ಯಕ್ತಿ ಅಂತಾನೆ ಮುಖವಾಡ ಹಾಕಿಕೊಳೋ ಅನಿವಾರ್ಯ ಆಗುತ್ತೆ, ತಮ್ಮ ಅಂತರಂಗದ ಆಸೆಗಳನ್ ಅದುಮಿಡಬೇಕಾಗುತ್ತೆ. ಮನೆಯಿಂದ ಹೊರಗೆಹೋದ ಸಾಕು. ಅವೆಲ್ಲ ಗರಿಗೆದರಿ ರಿಂಗಣ ನೃತ್ಯ ಮಾಡುತ್ ಆದರೂ ಸಾರ್ವಜನಿಕ ಸ್ಥಳ. ತನ್ನ ಆಸೆಗಳನ್ನೆಲ್ಲ ಬಹಿರಂಗವ ತಣಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಭ್ಯತೆಯ ಸೋ ಅನಿವಾರ್ಯ ಆಗುತ್ತದೆ.

ಹೀಗೆ ಸಂಕಟಪಡುವವರಿಗೆಲ್ಲ ವಿಧಾನಸಭೆ ಅಧಿವೇ ಬಂತು ಅಂದರೆ ಸುಗ್ಗಿ. ಕಲಾಪದ ಪಾಡಿಗೆ ಕಲಾಪ ನಡೆಯು ಇರುತ್ತೆ, ತಮಗೆ ಬೇಕಾದ್ದು ಮಾಡುತ್ತಾ ಕುಳಿತಿರಬಹುದ ಈ ದೇಶದಲ್ಲಿ ಕಷ್ಟಗಳೇನು ಕಡಿಮೆ ಇದಾವೇನ್ರಿ? ಯಾವ್ರ ಕೆಲಸಕ್ಕೆ ಬಾರದೋವು ಏನೇನೋ ಬಡಬಡಿಸಿಕೊಳ್ಳು ಇರುತ್ತವೆ. ಅದು ಆಗಲ್ಲ ಹೋಗಲ್ಲ. ಇಂತಹವರೇ ಮಾಡುತ್ತಾರೆ ಅಂದರೆ ಅಶ್ಲೀಲ ಚಿತ್ರ ನೋಡುತ್ತಾ ಮನಸ್ಸಿನ

ಭಜರಂಗಿ ಭೂಪನ ವಿರುದ್ಧ ಗೆದ್ದ ಸಜ್ಜನ ಹೆಗ್ಡೆ


ಆಡಳಿತಾರೂಢ ಬಿಜೆಪಿಯ ಅರ್ಭಟದೆದುರು ಮಾತು ಕಳೆದುಕೊಂಡ ಎದುರಾಳಿ ಕಾಂಗ್ರೆಸ್; ಜಾತಿ ಹೆಸರಲ್ಲಿ ಜೆಡಿಎಸ್ ಜೊತೆಗಿನ ಮತ ಒಡೆಯುವ ಒಳಒಪ್ಪಂದಗಳು; ವಿ.ಎಸ್.ಆಚಾರ್ಯ ಸಾವಿನ ಸಿಂಪಥಿಯ ಹಿನ್ನೆಲೆ; ತನ್ನಿಂದ ತೆರವಾದ ಕ್ಷೇತ್ರವಾದ ಕಾರಣ ರಾಜ್ಯದ ಮುಖ್ಯಮಂತ್ರಿಗೆ ಹೇಗಾದರೂ ಮಾಡಿ ಗೆಲ್ಲಿಸಿ ಪ್ರತಿಷ್ಠೆ ತೋರಿಸಲೇಬೇಕಾದ ಅನಿವಾರ್ಯತೆ; ಮಾಧ್ಯಮಗಳ ಮೂಲಕ ಅಡ್ಡದಾರಿಯಲ್ಲಿನ ಪ್ರಚಾರತಂತ್ರ... ಇಂತಹ ಹಲವಾರು ಅಡೆತಡೆಗಳಿದ್ದರೂ 'ಲಂಕೇಶ್' ಹಾರೈಕೆಯಂತೆ ಸಜ್ಜನ ಜಯಪ್ರಕಾಶ್ ಹೆಗ್ಡೆಯವರನ್ನೇ ಉಡುಪಿ ಹಾಗು ಚಿಕ್ಕಮಗಳೂರಿನ ಜನ ಭರ್ಜರಿಯಾಗಿ ಗೆಲ್ಲಿಸಿ ಬಿಜೆಪಿಯ ದುರಾಡಳಿತಕ್ಕೆ ತಕ್ಕ ಉತ್ತರವನ್ನು ನೀಡಿದ್ದಾರೆ.



"ಹೆಗ್ಡೆಯವರಿಗೆ ಸಿಕ್ಕ ಗೆಲುವಿನ ಸಿಂಹ ಪಾಲಿಗೆ ಭಾಗೀದಾರರಾಗಿರುವುದು ಅಮಾನುಷವಾಗಿ ಸತ್ತ ದಿವಂಗತ ಪದ್ಮಪ್ರಿಯರೇ" ಎಂಬ ಮಾತು ಇದೀಗ ಉಡುಪಿ ಜಿಲ್ಲೆಯಾದ್ಯಂತ ಕೇಳಿಬರುತ್ತಿದೆ. ಪದ್ಮಪ್ರಿಯ ಸಾವಿನಲ್ಲಿ ಪ್ರಮುಖ ಪಾತ್ರವಹಿಸಿದ್ದವನೇ ಜನಸೇವಕನ ಗೆಟಪ್ಪಿನಲ್ಲಿ ಚುನಾವಣೆಗೆ ನಿಂತದ್ದು, ಹೆಣ್ಣನ್ನು ಮಾತೆ ಎಂದು ಕರೆಯುತ್ತಲೇ ಮಹಿಳೆಯ ಕತ್ತಿಗೆ ಹಗ್ಗ ಬಿಗಿಗೊಳಿಸುವ ಬಿಜೆಪಿ ಪಕ್ಷವೇ ಆತನ ಬೆನ್ನಿಗೆ ನಿಂತದ್ದು - ಇದನ್ನೆಲ್ಲ ನೋಡಿ ಪದ್ಮಪ್ರಿಯಾರನ್ನ ಮರೆತಿದ್ದ ಜನ, ಅದರಲ್ಲೂ ಮುಖ್ಯವಾಗಿ ಮಹಿಳೆಯರು - ಹಟಕ್ಕೆ ಬಿದ್ದವರಂತೆ ಮತಗಟ್ಟೆಗೆ ಹೋಗಿ ಅಭಾಗಿನಿಯೊಬ್ಬಳ ಸಾವಿಗೆ ತಮ್ಮ ಸೇಡನ್ನು ತೀರಿಸಿಕೊಂಡೇ ಬಿಟ್ಟರು.

ಅಧಿಕಾರ ಹಿಡಿದ ದಿನದಿಂದ ಕಚ್ಚಾಟದ ಶಮನದ ವಿಚಾರದಲ್ಲೇ ಪೂರ್ತಿಯಾಗಿ ನಮ್ಮ ಸಿಎಂ ಸದಾನಂದ ಗೌಡ ಸಾಹೇಬರು ಮುಳುಗಿದ್ದರೂ ಕೂಡ. ಈ ಉಪಚುನಾವಣೆಯ ಹಿನ್ನೆಲೆಯ ನಡೆದ ವಿವಿಧ ಜಾತಿ ಸಮಾವೇಶಗಳಲ್ಲಿ ಸಿಎಂ ಭಾಗವಹಿಸಿದ್ದರು. ಉಡುಪಿಯಲ್ಲಿ ನಡೆದ ವಿಶ್ವಕರ್ಮ ಸಮ್ಮೇಳನವಾಗಲಿ, ದಕ ಜಿಲ್ಲೆ ಹಾಗು ಸುತ್ತಮುತ್ತಲಿನಿಂದ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಲಕ್ಷಾಂತರ ದಲಿತರು ಸೇರುವ ದಲಿತರ ದೈವ ಬಬ್ಬುಸ್ವಾಮಿ ಜಾತ್ರೆಯಾಗಲಿ, ಎಲ್ಲದರಲ್ಲೂ ಭಾಗವಹಿಸಿ ದಂಡಿಯಾಗಿ ಆಶ್ವಾಸನೆಗಳನ್ನು ನೀಡಿದ್ದರು. ಆದರೆ ಇದ್ಯಾವುದೂ ಚುನಾವಣೆಯಲ್ಲಿ ವರ್ಕ್ ಔಟ್ ಆಗಲೇ ಇಲ್ಲ.

ಭಜರಂಗಿ ಭೂಪ ಸುನಿಲ್ ಕುಮಾರನ ವಿರುದ್ಧ ಸಜ್ಜನ ಹೆಗ್ಡೆ ಗೆದ್ದೇಬಿಟ್ಟರು. ಆ ಮೂಲಕ ಪ್ರಜ್ಞಾವಂತ ಜನರ ಮುಖದಲ್ಲಿ ಹಲವು ಕಾಲದಿಂದ ಮಾಸಿದ್ದ ಸಂತಸವನ್ನು ಮತ್ತೆ ಮೂಡಿಸಿದರು. ಅವರಿಗೆ ಅಭಿನಂದನೆಗಳು.

-ಶಶಿ ಪುತ್ತೂರು, ದ. ಕ.

ಜಯಪ್ರಕಾಶ್ ಹೆಗ್ಡೆ ಅವರನ್ನು ಗೆಲ್ಲಿಸಿದ ಉಡುಪಿ-ಚಿಕ್ಕಮಗಳೂರು ಮತದಾರರಿಗೆ ನನ್ನ ತುಂಬು ಹೃದಯದ ಅಭಿನಂದನೆಗಳು ಹಾಗು ಕ್ಷೇತ್ರದ ಜನತೆ ಜಾತಿ ಭೇದ ಮರೆತು ಜಾತ್ಯತೀತವಾಗಿ ನೆಮ್ಮದಿಯಿಂ ಬದುಕುವಂತಾಗಲಿ. ಕಾಂಗ್ರೆಸ್ ಗೆಲುವು ನಿಜವಾಗಲೂ ಸಮಾಧಾನ ತಂದಿ ಆದರೂ ಚಂಡಾಲ ಸುನಿಲ್ ಕುಮಾರನಿಗೆ ಕ್ಷೇತ್ರದ ಜನತೆ ನೀಡಿರು ಮತಗಳ ಸಂಖ್ಯೆಯನ್ನು ನೋಡಿದರೆ 'ಬುದ್ಧಿವಂತರ ನಾಡಲ್ಲಿ' ಜನತೆಗೆ ಬುದ್ಧಿ ಇರುವಂತೆ ಕಾಣಿಸುತ್ತೆ, ಸುನಿಲನ ಚಿಡ್ಡಿ ಬುದ್ಧಿಯನ್ನು 'ಗೌರಿ ಲಂಕೇ ಪತ್ರಿಕೆ ಕ್ಷೇತ್ರದ ಜನತೆಗೆ ತಿಳಿಸಿದ್ದು ಒಳ್ಳೆಯದಾಯಿತು.

ಕುಮಾರಸ್ವಾಮಿಯವರು ಯಾವ ಲೆಕ್ಕಾಚಾರದಲ್ಲಿ ತಮ್ಮ ಪಕ್ ಅಭ್ಯರ್ಥಿಯನ್ನು ನಿಲ್ಲಿಸಿದ್ದರೋ ಪಾಪ. ಅದರ ಗುಟ್ಟು ಅವರ ಅಪ್ಪ ಮಾತ್ರ ಗೊತ್ತಿರಬೇಕು.

ಪಾಪಿ ಬಿಜೆಪಿಗೆ ತಕ್ಕ ಪ್ರತಿಫಲ ಸಿಕ್ಕಿದೆ. ಜಯಪ್ರಕಾ ಹೆಗ್ಡೆಯವರು ಕ್ಷೇತ್ರದ ಜನತೆಯೊಂದಿಗೆ ಇನ್ನಷ್ಟು ಬೆರೆ ವಂತಾಗಲಿ, ಕ್ಷೇತ್ರ ಅಭಿವೃದ್ಧಿ ಕಾಣಲಿ. ಹೆಗ್ಡೆ ಅವರಿಗೆ ಶುಭವಾಗ

- ಮೊಹಮ್ಮದ್, ಬೆಂಗಳೂ

ಬಿಜೆಪಿಯ ರಾಷ್ಟ್ರ ನಾಯಕರಿಗೆ ಯಡ್ಡಿಯನ್ನು ಮಜಾ ಮಾಡ ತಾಕತ್ತಿಲ್ಲವೇ? ಹಾಗೆಯೇ ಆರೆಸ್ಸೆಸ್‌ನ 'ದಂಡ' ನಾಯಕ ಏನು ಮಾಡುತ್ತಿದ್ದಾರೆ? ಯಡ್ಡಿಗೆ ತಾಕತ್ತು ಇದ್ದರೆ ತಾನು ಆರೆಸ್ ಬಿಜೆಪಿ, ಎಬಿವಿಪಿ, ವಿಎಚ್‌ಪಿ ಮತ್ತು ಭಜರಂಗ ದಳ ನಾಯಕರಿಗೆ ಎಷ್ಟ ಕಪ್ಪ ನೀಡಿದ್ದೇನೆ ಎನ್ನುವುದನ್ನಾದರೂ ಹೇಳಲಿ.

- ರವಿಕುಮಾರ್, ಹಾಸ

ನನಗೆ ಸದಾ ವಿಸ್ಮಯವನ್ನುಂಟುಮಾಡುವವರು ಲೀಲಾವತಿ ಮ ವಿನೋದ್‌ರಾಜ್. ಇವರ ಬಗೆಗಿನ ಆಪ್ತವಾದ ಲೇಖನ ಇಷ್ಟವಾಯಿತು. ಪ್ರಕಾರ ಈ ತಾಯಿ-ಮಗ ಜೀವಂತಿಕೆಗೆ ಸಂಕೇತವೂ ಹೌದು. 6 ಸಿನಿಮಾಗಳಲ್ಲಿ ನಟಿಸಿ, ಚಿತ್ರರಂಗದಲ್ಲಿ ತನ್ನದೇ ಮುದ್ರೆಯೊತ್ತಿರು ಲೀಲಾವತಿಯವರ ಮಣ್ಣಿನ ಬಗೆಗಿನ ಆಸಕ್ತಿಯೇ ಒಂದು ವಿಸ್ಮಯ; ಅ ಜೀವಂತಿಕೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಲೇಸು ಎಂಬ ಮಾತ ಅದು ಸಾರ್ವಕಾಲಿಕ ಸತ್ಯ ಕೂಡ. ಆದರೆ ಯಾವುದೇ ರಂಗದಲ್ಲಿ ಒಂದ 'ಬಲಿತವರು' ಮಣ್ಣನ್ನು ಕಡೆಗಣಿಸುವುದನ್ನೇ ಆದರ್ಶ ಮಾಡಿಕೊಂಡಿರುತ ಹೆಚ್ಚೆಂದರೆ ರಜಾ ಕಾಲದ ಮೋಜಿಗಾಗಿ 'ತೋಟದ ಮನೆ' ಮಾಡುತ್ತಾರೆಯ ಹೊರತು ಅದರಲ್ಲಿ 'ಬೆಳೆಯಲು' ಇಳಿಯುವುದಿಲ್ಲ. ಕೃಷಿ ನಿಕೃಷ್ಟವ ಪರಿಗಣಿಸಲ್ಪಡುತ್ತಿರುವ ಈ ದಿನಗಳಲ್ಲಿ ಈ ತಾಯಿ-ಮಗನ ಆ ಗಾಂಧಿನಗರದಿಂದ ಆಚೆಗೂ ವಿಸ್ತರಿಸಿ ತಮ್ಮ ಜಮೀನಿನಲ್ಲಿ ಏನೇನ ಬೆಳೆಯುತ್ತಾರೆಂಬುದೇ ಅವರ ಸೃಜನಶೀಲತೆ ಮತ್ತು ಸ್ವಂತಿಕೆಗೆ ನಿದರ್ಶ ಚಿತ್ರರಂಗದ ವ್ಯಕ್ತಿಗಳು ಬಹುದೂರದ ತಾರೆಗಳಂತೆ ಜನಸಾಮಾನ್ಯರಿಗೆ ಕಂಡ ಲೀಲಾವತಿ ಮತ್ತು ವಿನೋದ್‌ರಾಜ್ ತೀರಾ ಆಪ್ತರಂತೆ ಕಾಣಲು ಅ

'ಲಂಕೇಶ್' ಕುತ್ತಿಗೆ ಹಿಸುಕುವುದು ಸುಲಭವೇ?

ಮಂಗಳೂರಿನಲ್ಲಿ ನಡೆದ 'ಲಂಕೇಶ್ 77' ಕಾರ್ಯಕ್ರಮ ಖುಷಿ ಕೊಟ್ಟಿತು. ಕಳೆದ ಲಂಕೇಶ್ 75 ರಲ್ಲಿ ಭಾಗವಹಿಸಿದಾಗ ಸ್ವಾಗತಿಸುತಿದ್ದ ಹಾದಿಮನಿಯವರ ಲಂಕೇಶ್ 'ಚಿತ್ರ' ಮಂಗಳೂರಿನಲ್ಲೂ ವೇದಿಕೆಯ ಹಿನ್ನೆಲೆಯಲ್ಲಿ ರಾರಾಜಿಸುತಿತ್ತು, ಅಂತೂ ಈ ಸಲದ ಲಂಕೇಶ್ ಹಬ್ಬವನ್ನು ಮಂಗಳೂರಿಗೆ ತಂದದ್ದಕ್ಕಾಗಿ ಗೌರಿಯವರ ಬಳಗಕ್ಕೆ ಧನ್ಯವಾದಗಳು.

ಸಗಣಿ ಸ್ವಾಮಿಯಂತಹ ಗಂಜಲ ತೊಟ್ಟಿಯ ಹುಳುಗಳು 'ಲಂಕೇಶ್' ಕುತ್ತಿಗೆ ಹಿಸುಕುವ ಹುನ್ನಾರಕ್ಕಿಳಿದಿರುವ ಬಗ್ಗೆ ಪಾರ್ವತೀಶರ ಭಾಷಣದಿಂದ ತಿಳಿಯಿತು. ಲಂಕೇಶ್ ಬಳಗಕ್ಕೆ ಇದು ಹೊಸತೇನಲ್ಲ, ಅದೇರೀತಿ ಇಂತಹ ತೊಡರುಗಳ ನಿವಾರಣೆಯೂ ಸಹ. ಹೊಸತಾಗಿ ಪತ್ರಿಕೆಯ ಸಂಪಾದಕತ್ವ ವಹಿಸಿರುವ ಪಾರ್ವತೀಶರಿಗೂ ಹಾಗು ಪ್ರಧಾನ ಸಂಪಾದಕಿ ಗೌರಿಯವರಿಗೂ ಅಭಿನಂದನೆಗಳು.


- ರವಿ ಪುತ್ತೂರ, ದಕ

ತಿನ್ನುತ್ತಾ ಕುಂತಿರುತ್ತಾರೆ. ಒಂದು ವೇಳೆ ರೆಡ್‌ಹ್ಯಾಂಡ್ ಆಗಿ ಸಿಗಾಕಿಕೊಂಡೇ
ಅನ್ನಿ. ಕ್ಷಮೆಯಾಧರಿತ್ರಿ ಅಂತಹ ಸ್ಪೀಕರ್ ಇದ್ದೇ ಇರ್ತಾರೆ. ಹೇಗೋ
ಪಾರು ಮಾಡೇಮಾಡ್ತಾರೆ.
ಾಟಕದಲ್ಲಿ ಆದ ಹಾಗೇನೆ ಗುಜರಾತಿನ ವಿಧಾನಸಭೆಯಲ್ಲೂ ಆಗಿದೆಯಂತೆ.
ಲಾಪ ನಡೆಯುತ್ತಿರುವಾಗ ಇಬ್ಬರು ಶಾಸಕರು ಬ್ಲೂಫಿಲಂ ನೋಡುವ
ಲ್ಲಿ ತಲ್ಲೀನರಾಗಿದ್ದರಂತೆ. ಅದನ್ನೂ ವೀಡಿಯೋ ಚಿತ್ರೀಕರಣ ಮಾಡಿದ್ದಾರಾ
ಅದೇನು ಕರ್ನಾಟಕ ವಿಧಾನಸಭೆ ಅಂದುಕೊಂಡಿರಾ. ಅದು ನರೇಂದ್ರ
ಯ ಗುಜರಾತು. ವಿಧಾನಸಭೆ ಒಳಗೆ ವಿಡಿಯೋ ಚಿತ್ರೀಕರಣ ನಿಷೇಧ.
ಾಮಾರಿ ನಡೀಲಿ, ಆರುಚಾಟ ಕೂಗಾಟವೇ ಆಗಲಿ. ಕೊನೆಗೆ ಕೊಲೆಯೇ
ರೂ ಆಗಲಿ. ಯಾರೂ ಅದನ್ನು ಚಿತ್ರೀಕರಿಸಿ ಜನರಿಗೆ ತೋರಿಸುವ
ವೇ ಇಲ್ಲ, ಅದು ಹಾಗಿರಲಿ. ಬ್ಲೂಫಿಲಂ ಗಿರಾಕಿಗಳ ವಿಷಯಕ್ಕೆ ಬರೋಣ
ಅವರು ಬ್ಲೂಫಿಲಂನಲ್ಲಿ ತಲ್ಲೀನರಾಗಿದ್ದರಲ್ಲ, ಅದು ಪ್ರೆಸ್ ಗ್ಯಾಲರೀಲಿ
ಕಣ್ಣಿಗೆ ಬಿತ್ತಂತೆ. ಅರೆರೆ ಇದೇನು ನಮ್ಮ ವಿಧಾನಸಭೆಯೂ ಕರ್ನಾಟಕದ
ಭೆ ಆಗುತ್ತಿದೆಯಲ್ಲ ಅನ್ನೋ ಸಂಕಟ ಅವರಿಗಾಯಿತಂತೆ. ಸಭಾಧ್ಯಕ್ಷರ
ಇದನ್ನ ತಂದರಂತೆ. ಅವರು ಏನು ಸೂಚನೆ ಕೊಟ್ಟರೋ ಏನು
ಅಂತೂ ಬ್ಲೂಫಿಲಂ ವೀಕ್ಷಣೆಗೆ ತೆರೆಬಿದ್ದಿತಂತೆ.
ನ ಸಭಾಧ್ಯಕ್ಷರು ಇದಾರಲ್ಲ, ಎಷ್ಟೇ ಆಗಲಿ ನರೇಂದ್ರ ಮೋದಿ ಅಖಾಡದಲ್ಲಿ
ದೋರಲ್ಲವಾ. ಅವತ್ತು ಐಪ್ಯಾಡ್ ತಂಟೆಗೇ ಹೋಗಲಿಲ್ಲವಂತೆ. ಮಾರನೆ
ನ್ನ ವಶಪಡಿಸಿಕೊಂಡರಂತೆ. 'ಇದೇನು ಸಾಹೇಬರೇ ಹಿಂಗೆ ಮಾಡಿದೀರಿ'
ಯಾರೋ ಕೇಳಿದ್ದಕ್ಕೆ 'ಲಿಖಿತ ದೂರು ಬಂದದ್ದೇ ಇವತ್ತು, ತಕ್ಷಣ
ಸಿಕೊಂಡಿದ್ದೇನೆ' ಅಂದರಂತೆ!
ಧ್ಯಮದವರೆಲ್ಲ ಶಾಸಕರು ಬ್ಲೂಫಿಲಂ ನೋಡ್ತಾ ಕುಂತಿದ್ದರು ಅಂತ
ದ್ದರಲ್ಲ, ಅದು ಬ್ಲೂಫಿಲಮೇ ಅಲ್ವಂತೆ. ಐಪ್ಯಾಡ್ ತೆಗೆದು ನೋಡಿದಾಗ
ಳೀತಂತೆ. ಅಲ್ಲಿದ್ದದ್ದು ವಿವೇಕಾನಂದರ ಚಿತ್ರ ಅಂತೆ!
ಕ್ಕೆ ದಕ್ಷತೆ ಅನ್ನಬೇಕು!

ಗಲ್ಬಾಜಿ ಸೂತ್ರ

ಲರು ಯಾಕೆ ಆಗುತ್ತಾರೆ?
ಜ್ಯದ ನೀತಿಯಿಂದ ಆದ ಹತಾಶೆ ಅದು ಇದು ಎಂದು ಸಾವಿರ
ಹುದು. ಆದರೆ ಅದೂ ಯಾವುದೂ ಅಲ್ಲ!
ಗಾದರೆ ಏನು ಕಾರಣ?
ರ್ಕಾರಿ ಶಾಲೆಗಳು!'
ು ಹೇಗೆ?
ಲ್ಲಿ ಸಾಮರಸ್ಯ ಕಲಿಸುವುದಿಲ್ಲ!'
ಅಮೂಲ್ಯ ಸಂಶೋಧನೆ ಮಾಡಿದವರು ಯಾರು?
ಮಾನ್ಯ ಶ್ರೀ ರವಿಶಂಕರ ಗುರೂಜಿಗಳು!
ರನ್ನು ನಿಗ್ರಹಿಸುವುದು ಹೇಗೆ?
ಳ ಸುಲಭ. ಸರ್ಕಾರಿ ಶಾಲೆಗಳನ್ನು ಮುಚ್ಚಬಿಡಿ!
ಕ್ಕಳಿಗೆ ವಿದ್ಯೆ ಬೇಡವೆ?
ಕು.
ಗೆ ನೀಡುವುದು?
ಾಸಗಿ ಶಾಲೆಗಳನ್ನು ತೆರೆಯಿರಿ!'
ು ಗುರೂಜಿ ಎನ್ನಿಸಿಕೊಂಡವನ ದಗಲ್ಬಾಜಿ ಸೂತ್ರ!

ಲೂಸ್‌ಮಾದನ 'ಬಂಗಾರ'ದಂಥ ಮಾತು





"ಈಗಿನ ಹೀರೋಗಳು ಒಳಗೆ ಹಾಕುವ ಚಾಚಾ ಒಂದನ್ನು ಬಿಟ್ಟು ಮಿಕ್ಕಿದ್ದೆಲ್ಲವನ್ನೂ ನಿರ್ಮಾಪಕರಿಂದಲೇ ಅಪೇಕ್ಷಿಸುತ್ತಾರೆ" ಎಂದು ಇತ್ತೀಚೆಗೆ ನಿರ್ಮಾಪಕರ ಸಂಘದವರು ದೂರಿದ್ದಾರೆ. ಸದ್ಯ 'ಬಂಗಾರಿ' ಚಿತ್ರದಲ್ಲಿ ಬ್ಯುಸೀ ಆಗಿರುವ ಯೋಗೇಶ್‌ನನ್ನು ಈ ಕುರಿತು ಪ್ರಶ್ನಿಸಿದಾಗ...

* *ಹೀರೋಗಳ ಬಗ್ಗೆ ನಿರ್ಮಾಪಕರ ಸಂಘದವರು ಮಾಡಿರುವ ಆರೋಪ ಸರಿಯೇ?*

- ಎಲ್ಲಾ ಹೀರೋಗಳೂ ಒಂದೇ ಥರಾ ಇರೋದಿಲ್ಲ, ಎಲ್ಲರನ್ನೂ ಒಂದೇ ತಕ್ಕಡಿಗೆ ಹಾಕಿ ಇಷ್ಟು ಕೆಟ್ಟದಾಗಿ ಮಾತಾಡಿರೋದು ನಿಜಕ್ಕೂ ತಪ್ಪು.

* *ಶೂಟಿಂಗ್ ಟೈಮಲ್ಲಿ ನಿಮಗೆ ದುಬಾರಿ ರೂಮೇ ಬೇಕಂತೆ, ಹೌದಾ?*

- ನಾನು ಮೊದಲ ಚಿತ್ರದಲ್ಲಿ ನಟಿಸಿದ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಬಾಲಾಜಿ ಲಾಡ್ಜ್‌ನಲ್ಲಿ ರೂಮು ಕೊಟ್ಟಿದ್ದರು. ನೂರೈವತ್ತು ರೂಪಾಯಿ ಬಾಡಿಗೆಯ ಆ ರೂಮಿನಲ್ಲೇ ಮಲಗುತ್ತಿದ್ದೆ. ಈಗಿನ ಸಿನಿಮಾಗಳ ಚಿತ್ರೀಕರಣಕ್ಕೆ ಮೈಸೂರಿಗೆ ಹೋದಾಗ ಸಂದೇಶ್ ಪ್ರಿನ್ಸ್‌ನಲ್ಲಿ ರೂಮ್ ಬುಕ್ ಮಾಡಿರ್ತಾರೆ. ಯಾವುದನ್ನೂ ನಾನು ಕೇಳಿ ಪಡೆದಿಲ್ಲ.

* *ನಿಮ್ಮ ಜೊತೆ ಯಾವಾಗಲೂ ಐದಾರು ಜನ ಸ್ನೇಹಿತರು ಇರ್ತಾರಲ್ಲ, ಅವರನ್ನೂ ನಿರ್ಮಾಪಕರೇ ಸಾಕಬೇಕಾ?*

- ನಾನು ಯಾವಾಗಲೂ ಬ್ಯುಸಿ ಇರ್ತೀನಿ ಅಂತಾ ನನ್ನ ಫ್ರೆಂಡ್ಸ್ ಶೂಟಿಂಗ್ ನಡೆಯೋ ಜಾಗಕ್ಕೇ ಬಂದು ನನ್ನೊಟ್ಟಿಗಿದ್ದು ಹೋಗ್ತಾರೆ. ಬಹಳಷ್ಟು ಜನ ನಿರ್ಮಾಪಕರು ನಮ್ಮೆಲ್ಲರಿಗೂ ಒಳ್ಳೇ ಊಟ ಹಾಕಿಸಿದ್ದಾರೆ ನಿಜ. ಆದರೆ ಕೆಲವೊಮ್ಮೆ ನನ್ನ ಪರ್ಸನಲ್ ದುಡ್ಡನ್ನು ಕೊಟ್ಟು ಅವರಿಗೆಲ್ಲ ಕಾಫಿ, ಟೀ, ಊಟ ಕೊಡಿಸ್ತೀನಿ. ನಮ್ಮಪ್ಪ ಕೂಡಾ ಒಬ್ಬ ಪ್ರೊಡ್ಯೂಸರ್. ನಿರ್ಮಾಪಕರ ಕಷ್ಟ ಸುಖ ನನಗೂ ಗೊತ್ತು, ಅನವಶ್ಯಕವಾಗಿ ಅವರಿಗೆ ಹೊರೆಯಾಗುವ ಹುಡುಗ ನಾನಲ್ಲ.

* *ನಿಮ್ಮ ಸಂಭಾವನೆ ನಿರ್ಮಾಪಕರಿಗೆ ಹೊರೆಯಲ್ಲವೆ?*

- ನಾನು ಇದುವರೆಗೆ ಯಾವ ನಿರ್ಮಾಪಕ, ನಿರ್ದೇಶಕರ ಮನೆ ಬಾಗಿಲಿಗೆ ಹೋಗಿ ಅವಕಾಶ ಕೊಡಿ ಎಂದು ಕೇಳುವ ಪ್ರಮೇಯ ಬಂದಿಲ್ಲ, ನನಗಿರುವ ಬೇಡಿಕೆಗೆ ತಕ್ಕ ಸಂಭಾವನೆಯನ್ನು ಕೊಟ್ಟು ತಮ್ಮ ಚಿತ್ರಗಳಿಗೆ ಆಯ್ಕೆ ಮಾಡಿಕೊಂಡಿದ್ದಾರೆ. ಅಲ್ಲದೆ, ನಾನು ನಟಿಸಿರುವ ಬಹಳಷ್ಟು ಚಿತ್ರಗಳಿಂದ ನಿರ್ಮಾಪಕರಿಗೆ ಲಾಭವೇ ಆಗಿದೆ. ಲಾಭ ಬಂದಾಗ ಅದರಲ್ಲಿ ಯಾರೂ ಪಾಲು ಕೊಡೋದಿಲ್ಲ, ಹೀಗಿರುವಾಗ ನನ್ನ ಮಾರ್ಕೆಟ್‌ಗೆ ತಕ್ಕ ಸಂಭಾವನೆ ಪಡೆಯೋದು ಹೇಗೆ ಹೊರೆಯಾಗುತ್ತೆ? ಹಾಗೆ ನೋಡಿದರೆ ನನ್ನ ಹಿಂದಿನ ಮೂರು ಚಿತ್ರಗಳಿಂದ ಒಟ್ಟು ತೊಂಭತ್ತು ಲಕ್ಷ ರೂಪಾಯಿಗಳು ನನಗೆ ಬರಬೇಕು. ಅದಿನ್ನೂ ಕೈಸೇರಿಲ್ಲ, ಈಗ ಹೇಳಿ ನಷ್ಟ ಆಗಿರೋದು ಯಾರಿಗೆ?

* *ಈಗಲೂ ಅಪ್ಪನಿಂದ ಪ್ರತಿದಿನ ಒಂದು ಸಾವಿರ ರೂಪಾಯಿ ಪಾಕೆಟ್ ಮನಿ ತಗೋತೀರಾ?*

- ಇಲ್ಲ, ಈಗ ದಿನಾ ಪಾಕೆಟ್‌ಮನಿ ಕೇಳೋದನ್ನು ಬಿಟ್ಟಿದ್ದೀನಿ. ಪ್ರೊಡಕ್ಷನ್ ಅವರಿಂದ ಡೈಲಿ ಕನ್ವೇಯನ್ಸ್‌ಗೆ ಅಂತಾ ಸಾವಿರದ ನೂರು ರೂಪಾಯಿ ಸಿಗುತ್ತೆ. ಒಂದುವೇಳೆ ಇನ್ನೂ ಹಣ ಬೇಕೆನಿಸಿದರೆ ಅಪ್ಪನನ್ನು ಕೇಳುತ್ತೇನೆ, ಅವರು ಒಂದೇ ಬಾರಿಗೆ ಒಂದಷ್ಟು ದುಡ್ಡು ಕೊಡ್ತಾರೆ.

ಕೆಯೇ ಕಾರಣವೆಂದು ನನಗನ್ನಿಸುತ್ತದೆ.
ೋದ್‌ರಾಜ್ ನಿಜವಾಗಿಯೂ ಪ್ರತಿಭಾವಂತ. ಆತನ ಪ್ರತಿಭೆ
ವಿಕವಾದುದು ಕೂಡ. ಅದು ಚಿತ್ರರಂಗದಲ್ಲಿ ಸಾಕಷ್ಟು
ರಣಗೊಳ್ಳದಿರುವುದು, ಅದಕ್ಕೆ ಅಡ್ಡಿಯಾದ



ಳು ನಿಜಕ್ಕೂ ಕ್ರೂರ. ಇಂಥವರಿಗೆಲ್ಲಾ
ಬಾರದು.

- ಟಿ.ಎಂ.ಕೃಷ್ಣ ಈ ಮೇಲ್ ಮೂಲಕ

ಕಟವೇ ಮೈವೆತ್ತಂತಿರುವ, ಎಲ್ಲಾ ಇದ್ದೂ
ಂತಿರುವ ಲೀಲಾವತಮ್ಮನವರ ಬಗ್ಗೆ ಸರಳ ನೇರ
ಳಿಸಿ ಅವರ ಆತಂಕಕ್ಕೆ ಕಾರಣಕರ್ತರಾದವರ
ಚ್ಚವಾಗಿ ತಿಳಿಸಿದ್ದೀರಿ. ಅದಕ್ಕೆ ಧನ್ಯವಾದಗಳು.
ವತಮ್ಮನವರನ್ನು ಒಮ್ಮೆ ಕಂಡು
ಡಿಸಬೇಕೆಂಬ ನನ್ನ ಬಹುದಿನಗಳ ಬಯಕೆ ಹಾಗೆ


- ರಂಗಸ್ವಾಮಿ, ಮೈಸೂರು

ಳ ವರ್ಷಗಳಿಂದ ನಿರೀಕ್ಷಿಸುತ್ತಿದ್ದ, ಎಲ್ಲರಿಗೂ ತಿಳಿದಿದ್ದರೂ ರಹಸ್ಯವಾಗಿದ್ದ
ೀಲಾವತಿ ವಿಷಯವನ್ನು ಪ್ರಕಟಿಸಿದ ನಿಮ್ಮ ಧೈರ್ಯವನ್ನು ಮೆಚ್ಚಲೇಬೇಕು.
ವರೆಗೂ ಯಾರೂ ಪ್ರಕಟಿಸದ ಸಾಹಸಕ್ಕೆ ಕೈ ಹಾಕಿದ್ದೀರಿ. ಓದುಗರು
ಬೆಂಬಲಕ್ಕೆ ಇದ್ದೇ ಇರುತ್ತಾರೆ.

- ಬಿ.ಬಸವರಾಜು, ಧಾರವಾಡ

ಂಕೇಶ್ ಈಗ ಇರಬೇಕಿತ್ತು ಎಂದು ಬಹಳಷ್ಟು ಜನ ಹೇಳುತ್ತಾರೆ.
ಂಕೇಶರು ನಮ್ಮೆದುರೇ ಇದ್ದಾರೆ. ರೂಪ ಮಾತ್ರ ಬೇರೆ. ಅವರೇ ಗೌರಿ

ವರ್ಷಗಳ ಹಿಂದೆ ಟಿವಿ ಚಾನೆಲ್ ಒಂದರಲ್ಲಿ
ಮತ್ತು ಸಿ.ಟಿ. ರವಿ ನಡುವಿನ ಚರ್ಚೆ ನೋಡಿದ್ದೆ.
ಗಳು ಸತ್ಯವನ್ನು ಬಚ್ಚಿಡುತ್ತಾರೆ, ಅದು ಬೇರೆ ವಿಷ್ಯ.
ಗೌರಿ ಅವರ ವಿಚಾರಧಾರೆ ನನಗಿಷ್ಟವಾಗಿತ್ತು.
'ಲಂಕೇಶ್' ವಾರಪತ್ರಿಕೆಯನ್ನು ಹೆಚ್ಚು ಓದಿಲ್ಲ.
ಕೆಲವೊಂದು ಸಾರಿ ಓದಿದ ನೆನಪುಗಳೇ ಮಾಸಿಲ್ಲ.
ತೆ ಪರ, ಭ್ರಷ್ಟಾಚಾರದ ವಿರುದ್ಧ ನಿಮ್ಮ ಪತ್ರಿಕೆಯ



ಮೆಚ್ಚತಕ್ಕದ್ದು, ಅಸಮಾನತೆ, ವರ್ಣ ಭೇದ,
ಸದಂತಹ ಅನಿಷ್ಟ ಪದ್ಧತಿಗಳ ಬಗೆಗಿನ ಪತ್ರಿಕೆಯಲ್ಲಿನ ಲೇಖನಗಳು
ತಿರುತ್ತವೆ. ಆದರೆ ಅಂತಹ ಅನಿಷ್ಟ ಪದ್ಧತಿಗಳನ್ನು ಪಾಲಿಸುವವರಿಗೆ
ಉಪದೇಶ, ಟೀಕೆ ಮಾಡಿದರೂ ಪೇಜಾವರರಂತಹ ಪಯೋವೃದ್ಧ
ಅಷ್ಟು ನಾಟುವುದೇ ಇಲ್ಲ.
ತ್ತೀಚೆಗೆ ನಿಮ್ಮ ಪತ್ರಿಕೆಯಲ್ಲಿ 'ನಾಜೂಕಯ್ಯ' ವಿ.ಎಸ್. ಆಚಾರ್ಯರನ್ನು

ಕುರಿತ ಲೇಖನ ವಿಭಿನ್ನವಾಗಿತ್ತು ಮತ್ತು ಮನಮುಟ್ಟುವಂತಿತ್ತು.

ಗೌರಿ ಅವರು ಇನ್ನೂ ಎತ್ತರಕ್ಕೆ ಏರಬಲ್ಲ ಮಹಿಳೆ. ಕವಿಯಲ್ಲದ ನನಗೆ ಅವರ ಬಗ್ಗೆ ಹೆಚ್ಚಿಗೆ ಬರೆಯಲು ಕೈ ಓಡುತ್ತಿಲ್ಲ, ಅವರಿಗಿದೋ ನೂರು ನಮನ.

- ತಿಮ್ಮೇಗೌಡ, ಮಂಗಳೂರು

ಲಂಕೇಶರ 77ನೇ ಹುಟ್ಟುಹಬ್ಬದ ಭಾಗವಾಗಿ ಇತ್ತೀಚೆಗೆ ಶಿವಮೊಗ್ಗೆಯಲ್ಲಿ ಆಯೋಜಿಸಲಾಗಿದ್ದ ಪಿ. ಲಂಕೇಶರ ನಾಟಕೋತ್ಸವದಲ್ಲಿ 'ಗುಣಮುಖ' ಮತ್ತು 'ಕಲ್ಲು ಕರಗುವ ಸಮಯ' ನಾಟಕಗಳನ್ನು ನೋಡಿದೆ. ಎರಡೂ ನಾಟಕಗಳು ಚೆನ್ನಾಗಿ ಮೂಡಿಬಂದಿದ್ದವು.

ನಾಟಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಚಂದ್ರಶೇಖರ ಪಾಟೀಲರು ಪಿ. ಲಂಕೇಶರ ಬಗ್ಗೆ ಮಾತನಾಡುತ್ತಾ "ಪಿ ಅಂದರೆ ಪಾಳೇಗಾರ" ಎಂದರು. ಪಾಳೇಗಾರ ಎಂದು ಹೆಸರಿದ್ದರೂ ಆ ಮನೋಧರ್ಮದ ವಿರುದ್ಧ ಹೋರಾಡಿದ ಮಹಾನ್ ಚೇತನ ಪಿ. ಲಂಕೇಶ್. ಸಮಾಜವಾದವನ್ನು ತಮ್ಮ ಪತ್ರಿಕೆ, ಬರಹ, ನಾಟಕಗಳ ಮೂಲಕ, ತಮ್ಮ ಬದುಕಿನ ಮೂಲಕ ಜನರಿಗೆ ತೋರಿಸಿಕೊಟ್ಟವರು ಲಂಕೇಶ್.

'ಗುಣಮುಖ' ನಾಟಕದಲ್ಲಿ ಕಾಮ, ಕ್ರೋಧ, ಮದ, ಮತ್ಸರ, ಲೋಭ, ಅಧಿಕಾರದಾಹ, ಸ್ವಾರ್ಥದಿಂದ ಮನುಜ ಯಾವ ರೀತಿ ರೋಗಗ್ರಸ್ತನಾಗುತ್ತಾನೆಂದೂ, ಚಿಕಿತ್ಸೆ ಮಾಡಿಸಿಕೊಳ್ಳಲು ಅಹಂಕಾರ, ಅಧಿಕಾರದ ಲಾಲಸೆ ಹೀಗೆ ಅಡ್ಡಿಬರುತ್ತದೆಂದೂ ವಿವರಿಸಲಾಗಿದೆ.

'ಕಲ್ಲು ಕರಗುವ ಸಮಯ' ನಾಟಕ ಕಠಿಣ ಮನಸ್ಸುಗಳೂ ಸಹ ಮಾನವೀಯವಾಗಿ, ವಿವೇಚನಾಶೀಲವಾಗಿ, ವೈಚಾರಿಕ ನೆಲೆಯಲ್ಲಿ ಪ್ರತಿಕ್ರಿಯಿಸುತ್ತಾ ಸಮಾಜ ಪರಿವರ್ತನೆ ಸಾಧ್ಯ ಎಂದು ಎತ್ತಿ ತೋರಿಸುತ್ತದೆ.

ಇದೇ ಸಂದರ್ಭದಲ್ಲಿ ಲಂಕೇಶರನ್ನು ಕುರಿತು ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಲಂಕೇಶರ ಸಮಕಾಲೀನರಾದ ರೈತ ಮುಖಂಡ, ಸಮಾಜವಾದಿ ಚಿಂತಕ ಕಡಿದಾಳ್ ಶಾಮಣ್ಣನವರನ್ನು ನೋಡಿ ಖುಷಿಯಾಯಿತು. ಅವರೂ ಸಹ ಲಂಕೇಶ್ ಬಗ್ಗೆ ಆತ್ಮೀಯವಾಗಿ ಮಾತನಾಡಿದರು. ಇಡೀ ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂದಿತು.

- ಡಿ.ಎಲ್. ನಾಗರಾಜ್, ಚನ್ನಗಿರಿ

ರಾಜಕೀಯಕ್ಕೆ ಎಂಟ್ರಿ ನೀಡಿರುವ ಸಿನಿಮಾ ತಾರೆಯರ ಸಂದರ್ಶನ ಅದ್ಭುತವಾಗಿತ್ತು


-ಗುರುರಾಜ್

'ರಂಗಾದ ನಟಿಯರ ರಾಂಗು ಉತ್ತರ' ಸಿಕ್ಕಾಪಟ್ಟೆ ಮಜವಾಗಿತ್ತು.

-ಕಾಂತೇಶ್ ಬದಿಗೇರ್

ಸ್ಟಾರ್ ರಾಜಕಾರಿಣಿಯರ ಸಂದರ್ಶನ ಸಖತ್ ತಮಾಷೆಯಾಗಿತ್ತು ಆದರೆ ಅದು ಕರ್ನಾಟಕದ ದುರಂತವೂ ಆಗಿದೆ. ನಮ್ಮ ನಾಡು ಉದ್ಧಾರ ಆಯ್ತು!

-ಅಮಿತ್



'ಕೊಲವೆರಿ'ಯೊಂದಿಗೆ 'ಪ್ಯಾರ್‌ಗೆ' ಡಿಕ್ಕಿ!

ಇತ್ತೀಚಿನ ದಿನಗಳಲ್ಲಿ ಭಾರೀ ಸದ್ದು ಮಾಡಿರುವ 'ಕೊಲವೆರಿ ಡಿ' ಮತ್ತು 'ಪ್ಯಾರ್‌ಗೆ ಆಗ್‌ಬಿಟ್ಟೈತೆ' ಹಾಡುಗಳನ್ನು ಹೊಂದಿರುವ '3' ಮತ್ತು 'ಗೋವಿಂದಾಯ ನಮಃ' ಚಿತ್ರಗಳು ಒಂದೇ ದಿನ ತೆರೆಗೆ ಬರುತ್ತಿವೆ.



ಇದರಿಂದ ತುಂಬಾ ಟೆನ್ಷನ್ ಆಗಿರೋದು ನಟ ಕೋಮಲ್‌ಗೆ!

ಕೋಮಲ್ "ಕನ್ನಡದ ಯಾವ ಚಿತ್ರಗಳೂ ನನ್ನ ಸಿನಿಮಾಗಳಿಗೆ ಪ್ರತಿಸ್ಪರ್ಧೆ ಒಡ್ಡುವುದಿಲ್ಲ, ಆದರೆ ಪ್ರತೀ ಬಾರಿ ನನ್ನ ಚಿತ್ರಗಳಿಗೆ ಕಾಟ ಕೊಡುವುದು ಪರಭಾಷೆಯ ದೊಡ್ಡ ಚಿತ್ರಗಳೇ." ಅಂದಿದ್ದಾರೆ.

ಹಾಸ್ಯನಟನಾದ ಈ ಕೋಮಲ್‌ಗೆ ಪುನೀತ್, ದರ್ಶನ್, ವಿಜಯ್ ಮತ್ತು ಸುದೀಪ್ ತರಹದ 'ಹೀರೋ'ಗಳಿಗೆ ಸಿಕ್ಕಿರುವ ಯಶಸ್ಸು ಸಿಕ್ಕಿರದಿದ್ದರೂ ಆತ ಧನುಶ್‌ನೊಂದಿಗೆ ಮುಖಾಮುಖಿಯಾಗುತ್ತಿರುವುದು ಕುತೂಹಲಕಾರಿಯಾಗಿದೆ. ಪ್ಯಾರ್‌ಗೆ ಆಗ್ಬಿಟ್ಟೈತೆ ಹಾಡು ಕೊಲವೆರಿಯೊಂದಿಗೇ ಸ್ಪರ್ಧಾ ನಡೆಸಿತ್ತು. ಈಗ ಆ ಹಾಡುಗಳಿರುವ ಸಿನಿಮಾಗಳಲ್ಲಿ ಯಾವುದು ಗೆಲ್ಲುತ್ತೋ ನೋಡಬೇಕು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 11-04-2012 RNI No. KARKAN200



ಸತ್ತವರ ನೆರಳಲ್ಲಿ ಸಾ.ರಾ. ಗೋವಿಂದು

ಡಾ. ರಾಜ್‌ಕುಮಾರ್ ಕನ್ನಡ ಚಿತ್ರರಂಗದ ಏಕಾಧಿಪತಿಯಾಗಿ - ಮೆರೆಯುತ್ತಿದ್ದ ಕಾಲದಲ್ಲಿ ವಿಷ್ಣುವರ್ಧನ್ ಎಂಟ್ರಿ ಇಡೀ ಉದ್ಯಮವನ್ನು ಅಲ್ಲಾಡಿಸಿತ್ತು. ಆ ಸಂದರ್ಭದಲ್ಲಿ ರಾಜ್ ಮತ್ತು ವಿಷ್ಣು ಪ್ರತಿಸ್ಪರ್ಧಿಗಳು ಎಂಬಂತೆ ಪುಕಾರೆಬ್ಬಿಸಿ, ಇಬ್ಬರ ಅಭಿಮಾನಿಗಳ ನಡುವೆ ರಾಡಿಯೆಬ್ಬಿಸಿದ್ದು ಸಾ.ರಾ.ಗೋವಿಂದು ಎಂಬ 'ಓರಾಟಗಾರು'.

ಈಗ ರಾಜ್ ಮತ್ತು ವಿಷ್ಣು ಇಬ್ಬರೂ ಕಣ್ಣುಮುಚ್ಚಿದ್ದಾರೆ. ಆದರೆ ಸಾ.ರಾ. ಗೋವಿಂದು ಮಾತ್ರ ತಮ್ಮ ಹಳೇ ವರಸೆಯನ್ನೇ ಇವತ್ತಿಗೂ ಮುಂದುವರೆಸಿದ್ದಾರೆ!

ಬರುವ ಏಪ್ರಿಲ್ 24ರಂದು ರಾಜ್ ಅವರ ಹುಟ್ಟುಹಬ್ಬವನ್ನು ಆಚರಿಸಲು 'ಡಾ. ರಾಜ್ ಅಭಿಮಾನಿ ಸಂಘ' ಮುಂದಾಗಿದೆ. ಇದರ ಪೂರ್ವ ಸಿದ್ಧತೆಗಾಗಿ ಕಳೆದ ವಾರ ಕಾನಿಷ್ಕಾ ಹೋಟೇಲಿನಲ್ಲಿ ಸಂಘದ ಮೀಟಿಂಗೊಂದು ಆಯೋಜನೆಗೊಂಡಿತ್ತು. ಈ ಸಭೆಯಲ್ಲಿ ಸನ್ಮಾನ್ಯ ಸಾ.ರಾ.ಗೋವಿಂದು ಅವರು ಇದ್ದಕ್ಕಿದ್ದಂತೆ "ಇತ್ತೀಚೆಗೆ ಬೆಂಗಳೂರಿನ ಒಳಗೆ ವಿಷ್ಣುವರ್ಧನ್ ಪ್ರತಿಮೆಗಳು ಹೆಚ್ಚಾಗುತ್ತಿವೆ. ಆದಷ್ಟು ಅದನ್ನು ಅವಾಯ್ಡ್ ಮಾಡಿಸಬೇಕು" ಎಂದರಂತೆ.

ಪ್ರತಿಮೆ ಸಂಸ್ಕೃತಿಯನ್ನು ಪ್ರಜ್ಞಾವಂತರೆಲ್ಲ ವಿರೋಧಿಸುತ್ತಾರೆ. ಆದರೆ ಹೀಗೆ ಒಬ್ಬರ ಪ್ರತಿಮೆಗಳ ಸ್ಥಾಪನೆ ವಿರುದ್ಧ ಮಾತ್ರ ಗೋವಿಂದು ಸಾಹೇಬರು ಕಿಡಿಕಾರುವುದು ಎಷ್ಟು ಸರಿ?



ರಾಗಿಣಿ ರಗಳೆ!




ನಟಿ ರಾಗಿಣಿ ಮತ್ತು ನಿರ್ಮಾಪಕ ಮಂಜು ನಡುವೆ ಜಟಾಪಟಿ ನಡೆಯುತ್ತಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ರಾಗಿಣಿಯನ್ನು ಹಾಕಿಕೊಂಡು ಒಂದು 'ಡಿಶುಂ ಡಿಶುಂ' ಚಿತ್ರ ಮಾಡಲು ಮಂಜು ಹೊರಟಿದ್ದಾರೆ. ಈ ಚಿತ್ರಕ್ಕೆ 'ದುರ್ಗಾಂಬ' ಎಂಬ ಹೆಸರಿಡಲು ಮಂಜು ನಿರ್ಧರಿಸಿದ್ದಾರೆ. ಆದರೆ "ಆ ತರಹದ ಹೆಸರಿಟ್ಟರೆ ನಾನು ಒಪ್ಪುವುದಿಲ್ಲ, ಈ ಚಿತ್ರಕ್ಕೆ 'ರಾಗಿಣಿ ಐಪಿಎಸ್' ಎಂದೇ ಹೆಸರಿಡಬೇಕು" ಎಂದು ರಾಗಿಣಿ ಈಗ ಮಂಜುಗೆ ತಾಕೀತು ಮಾಡುತ್ತಿದ್ದಾರೆ.

ಇಂತಹ ಮಾರಾಮಾರಿ ಚಿತ್ರಗಳನ್ನು ಮಾಡುವಲ್ಲಿ ಎತ್ತಿದ ಕೈ ಎನಿಸಿಕೊಂಡಿರುವ ಆನಂದ್.ಪಿ.ರಾಜು ಈ ಚಿತ್ರವನ್ನೂ ನಿರ್ದೇಶಿಸಲಿದ್ದಾರೆ. ಅವರು ಮೊನ್ನೆ ಮೊನ್ನೆ ನಿರ್ದೇಶಿಸಿದ್ದ 'ಚನ್ನಮ್ಮ ಐಪಿಎಸ್' ಎಂಬ ಇದೇ ಮಾದರಿಯ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿಯಾಗಿತ್ತು. ಆ ಚಿತ್ರದ ನಾಯಕಿ ಆಯೇಷಾ. ಅದಾದನಂತರ ಮಾಲಾಶ್ರೀ ನಟಿಸಿದ್ದ 'ಶಕ್ತಿ' ಎಂಬ ಇನ್ನೊಂದು ಚಿತ್ರ ಕೂಡ ನಾಯಕ ನಟರ ಚಿತ್ರಗಳಂತೆ ಬಾಕ್ಸ್ ಆಫೀಸಿನಲ್ಲಿ ಭಾರೀ ಯಶಸ್ಸನ್ನು ಕಂಡಿತ್ತು. ಈಗ ರಾಗಿಣಿ ನಟಿಸಲಿರುವ ಇಂತಹದ್ದೇ ಮತ್ತೊಂದು ಚಿತ್ರ ಪ್ರಾರಂಭವಾಗುತ್ತಿದೆ. ಅಂದರೆ ಈಗ ನಾಯಕಿಯರು ನಾಯಕ ನಟರಂತೆ ಹೊಡಿ-ಬಡಿ-ಕಡಿ ಚಿತ್ರಗಳಲ್ಲಿ ನಟಿಸುವ ಒಂದು ಹೊಸ ಟ್ರೆಂಡ್ ಆರಂಭವಾಗಿದೆ.

ಆದರೆ ಈಗ ಸಮಸ್ಯೆ ಎದ್ದಿರುವುದು ಚಿತ್ರದ ಹೆಸರಿನ ಬಗ್ಗೆ. ಈ ಚಿತ್ರಕ್ಕೆ 'ರಾಗಿಣಿ ಐಪಿಎಸ್' ಎಂದೇ ಹೆಸರಿಡಬೇಕು, ಇಲ್ಲದಿದ್ದರೆ ನಾನು ನಟಿಸುವುದಿಲ್ಲ ಎಂದು ರಾಗಿಣಿ ಹೇಳಿರುವುದು ಮಂಜುಗೆ ನುಂಗಲಾರದ ತುತ್ತಾಗಿದೆ. ಈ ಹಿಂದೆ ಇಂತಹ ಅನೇಕ ಸಮಸ್ಯೆಗಳನ್ನು ಲೀಲಾಜಾಲವಾಗಿ ಪರಿಹರಿಸಿಕೊಂಡಿರುವ ಮಂಜು ಈ ಬಾರಿ ರಾಗಿಣಿ ಹುಟ್ಟುಹಾಕಿರುವ ಸಮಸ್ಯೆಯನ್ನು ಹೇಗೆ ಬಗೆಹರಿಸಿಕೊಳ್ಳುತ್ತಾರೆ ಎಂಬುದೇ ಸದ್ಯಕ್ಕೆ ಉಳಿದಿರುವ ಏಕೈಕ ಕುತೂಹಲ.





ಸಂಭಾವನೆಯ... ಶಿಕಾರಿ

ಯಾವುದೇ ಹೀರೋನನ್ನು "ಈ ಚಿತ್ರದಲ್ಲಿ ನೀವು ನಟಿಸಲು ಕಾರಣವೇನು?" ಎಂದು ಕೇಳಿದರೆ "ಈ ಚಿತ್ರದ ಕಥೆ ನಂಗೆ ತುಂಬಾ ಇಷ್ಟ ಆಯಿತು", "ನಿರ್ದೇಶಕರ ಕಾನ್ಸೆಪ್ಟ್ ಇಷ್ಟವಾಯಿತು", "ನಿರ್ಮಾಪಕರು ಹಠ ಮಾಡಿದ್ದಕ್ಕಾಗಿ ಒಪ್ಪಿಕೊಂಡೆ" ಇತ್ಯಾದಿಯಾಗಿ ಹೇಳುವುದು ಮಾಮೂಲು.

ಆದರೆ ಮಲಯಾಳಂ ಸೂಪರ್ ಸ್ಟಾರ್ ಮಮ್ಮುಟಿಗೆ ಇಂಥ ಪ್ರಶ್ನೆ ಕೇಳಿದರೆ ಅವರಿಂದ ಬರುವ ಉತ್ತರವೇ ಬೇರೆ.

ಮಲಯಾಳಂ ಚಿತ್ರರಂಗದಲ್ಲೇ ಒಂಚೂರೂ ... ಪುರುಸೊತ್ತಿಲ್ಲದ ಮಮ್ಮುಟಿ ಅವರು 'ಶಿಕಾರಿ' ಎಂಬ ಕನ್ನಡ ಚಿತ್ರದಲ್ಲಿ ನಟಿಸಿದ್ದಾರಲ್ಲದೆ, ಚಿತ್ರದ ಪ್ರಚಾರ ಕಾರ್ಯಕ್ರಮಗಳಿಗೆ, ಆಡಿಯೋ ಬಿಡುಗಡೆಗೆ ಎಲ್ಲದಕ್ಕೂ ಹಾಜರಾಗುತ್ತಿದ್ದಾರೆ. ಇದಕ್ಕೆ ಕಾರಣವೇನು ಎಂದು ಅವರನ್ನು ಕೇಳಿದಾಗ ಅವರು ಕೊಟ್ಟ ಉತ್ತರ: "ಸಂಭಾವನೆ! ಅದನ್ನು ಬಿಟ್ಟರೆ ಬೇರೆ ಯಾವ ಕಾರಣವೂ ಇಲ್ಲ."

ಹೀಗೆ ಯಾವ ಮುಚ್ಚುಮರೆಯಿಲ್ಲದೆ ಮಾತನಾಡಿದ ಮಮ್ಮುಟಿ ಅವರು ಮುಂದುವರೆದು "ಕನ್ನಡ ಚಿತ್ರರಂಗದಲ್ಲಿ ನೆಲೆಯೂರುವ ಉದ್ದೇಶ ನನಗಿಲ್ಲ, ಅಷ್ಟಕ್ಕೂ ಕನ್ನಡ ನನಗೆ ತೀರಾ ಹೊಸತೂ ಅಲ್ಲ. 'ಶಿಕಾರಿ' ಚಿತ್ರದ ನಿರ್ಮಾಪಕ ಕೆ. ಮಂಜು ಅವರು ಆಫರ್ ಮಾಡಿದ ಸಂಭಾವನೆಗಾಗಿ ಈ ಚಿತ್ರದಲ್ಲಿ ನಟಿಸಿದ್ದೇನೆ. ನನಗೆ ಕನ್ನಡದಲ್ಲಿ ಮಾರುಕಟ್ಟೆ ಇಲ್ಲದಿದ್ದರೂ ಈ ಚಿತ್ರದಲ್ಲಿ ನಾನು ನಟಿಸಬೇಕೆಂದು ಮಂಜು ಬಯಸಿದ್ದರು. ಇದುವರೆಗೆ ನನ್ನ ಸಿನಿಮಾಗಳನ್ನು ನಿರ್ಮಿಸಿರುವ ಹೆಚ್ಚಿನವರು ಅದೃಷ್ಟವಂತರೇ ಆಗಿದ್ದಾರೆ. ಆ ಅದೃಷ್ಟ ಮಂಜು ಅವರಿಗೂ ಒಲಿಯಲಿ. ಉಳಿದದ್ದು ಅವರ ಹಣೆಬರಹ" ಎಂದು ಕೊಬ್ರಿ ಮಂಜಣ್ಣನಿಗೆ ಆಶೀರ್ವಾದವನ್ನೂ ಮಮ್ಮುಟಿ ಮಾಡಿದರು. ಅವರ ಆಶೀರ್ವಾದ ಫಲಿಸಲಿ ಎಂದು ಮಂಜು ಪ್ರಾರ್ಥಿಸುತ್ತಿದ್ದಾರಂತೆ.




'ಮುದ್ದೇಗೌಡನ' ವಿರುದ್ಧ 'ಸಾ'ಗೌಡನ ಮಸಲತ್ತು!

ಇಂದ್ರಜಿತ್ ಲಂಕೇಶ್ ನಿರ್ದೇಶಿಸಿರುವ 'ದೇವ್ ಸನ್ ಆಫ್ ಮುದ್ದೇಗೌಡ' ಚಿತ್ರದ ವಿರುದ್ಧ ಕೆಲವು ಮಸಲತ್ತು ವೀರರು ಸಂಚು ರೂಪಿಸುತ್ತಿದ್ದಾರೆ.

'ದೇವ್ S/o ಮುದ್ದೇಗೌಡ' ಚಿತ್ರಕ್ಕೂ ಮಾಜಿ ಪ್ರಧಾನಿ ದೇವೇಗೌಡರಿಗೂ ಯಾವ ಸಂಬಂಧವೂ ಇಲ್ಲ ಎಂದು ಇಂದ್ರಜಿತ್ ಮೊದಲಿಂದಲೂ ಹೇಳುತ್ತಲೇ ಬಂದಿದ್ದಾರೆ. ಆದರೆ ಇದ್ದಕ್ಕಿದ್ದ ಹಾಗೆ 'ಒಕ್ಕಲಿಗರ ಹಿತರಕ್ಷಣಾ ಸಮಿತಿ' ಎಂಬ ಸಂಘಟನೆಯೊಂದು ಹುಟ್ಟಿಕೊಂಡು ಈ ಚಿತ್ರದ ಶೀರ್ಷಿಕೆ ದೇವೇಗೌಡರಿಗೆ ಲೇವಡಿ ಮಾಡಿದಂತಿದೆ ಎಂದು ಖ್ಯಾತೆ ತೆಗೆದಿದೆ.

ರವಿಶಂಕರ್ ಎಂಬಾತ ಈ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿಗೆ ಪತ್ರ ಬರೆದು "ಚಿತ್ರದ ಶೀರ್ಷಿಕೆಯನ್ನು ಬದಲಿಸದಿದ್ದರೆ ಉಗ್ರ ಹೋರಾಟಕ್ಕಿಳಿಯಲಾಗುವುದು" ಎಂದು ಧಮಕಿ ಹಾಕಿದ್ದಾನೆ. ಇದನ್ನು ಕೇಳಿದ್ದೇ ತಡ ಹಿಂದೆ ಮುಂದೆ ಯೋಚಿಸದ ಮಂಡಳಿ ಅಧ್ಯಕ್ಷ ಕೆ.ಸಿ.ಎನ್.ಚಂದ್ರಶೇಖರ್ "ನಿಮ್ಮ ಚಿತ್ರದ ಶೀರ್ಷಿಕೆ ವಿರುದ್ಧ ತಗಾದೆ ಎದ್ದಿದೆ. ಟೈಟಲ್ ಅನ್ನು ಬದಲಿಸಿಕೊಳ್ಳಿ" ಎಂದು ನಿರ್ದೇಶಕರಿಗೆ ಸೂಚಿಸಿದ್ದಾರೆ.

ಈ ಚಿತ್ರ ಆರಂಭಗೊಂಡು ಅದಾಗಲೇ ಆರು ತಿಂಗಳೇ ಕಳೆದಿದೆ. ಆರಂಭದಲ್ಲಿ ಅಪಸ್ವರ ಎತ್ತದ ಈ ಒಕ್ಕಲಿಗರ ತಂಡ ಈಗ ಚಿತ್ರದ ಬಿಡುಗಡೆಯ ಹೊತ್ತಿಗೆ ಯಾಕೆ ಕಾಲು ಕೆರೆಯುತ್ತಾ ನಿಂತಿದೆ? ಮುದ್ದೇಗೌಡ ಎನ್ನುವುದು ಬರೀ ಒಕ್ಕಲಿಗ ಸಮುದಾಯದಲ್ಲಿ ಮಾತ್ರ ಚಾಲ್ತಿಯಲ್ಲಿರುವ ಹೆಸರೇನಲ್ಲ, ಕುರುಬರು, ಲಿಂಗಾಯತರೂ ಮುದ್ದೇಗೌಡ ಎಂಬ ಹೆಸರನ್ನು ಬಳಸುತ್ತಾರೆ. ಹೀಗಿರುವಾಗ ಈಗ ಒಂದು ಒಕ್ಕಲಿಗರ ತಂಡ ಮಾತ್ರ ಯಾಕೆ ಎಗರಾಡುತ್ತಿದೆ? ಎಂಬುದನ್ನು ಹುಡುಕಹೊರಟರೆ, ಕನ್ನಡದ ಚಿತ್ರರಂಗದ ದಿಗ್ಗಜರು, ಕರ್ನಾಟಕ ಕಂಡ ಅತಿ ಕೆಟ್ಟ 'ಓ'ರಾಟಗಾರ 'ಸಾ' ಗೌಡನಾದಿಯಾಗಿ ಹಲವರ ಕೈವಾಡ ಎದ್ದು ಕಾಣುತ್ತದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com